SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:4, Pages:56
November - 2022,Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ನವೆಂಬರ್ 2022
ಬೆಲೆ ರೂ. 20/-



## ತಿರುಮಲ ಸ್ವಾಮಿಯವರ ಪುಷ್ಪಯಾಗ ಮಹೋತ್ಸವ 01-11-2022

**ತಿರುಮಲೆ ಸ್ವಾಮಿಯವರಿಗೆ 27-09-2022 ರಿಂದ 05-10-2022 ರ ವರೆಗೆ ನಡೆದ ಬ್ರಹ್ಮೋತ್ಸವ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ.,ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ. ವಿ. ವೀರಬ್ರಹ್ಮ ಐ.ಎ.ಎಸ್., ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್. ಮತ್ತು ಇನ್ನಿತರ ಉನ್ನತಾಧಿಕಾರಿಗಳು ಪಾಲ್ಗೊಂಡರು.**











# ಭಗವದ್ಗೀತೆ



ಉತ್ಪನ್ನ ಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ।
ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 43)

**ಜನಾರ್ದನ, ಕುಲಧರ್ಮಗಳನ್ನೆಲ್ಲ ಹಾಳು ಮಾಡಿಕೊಂಡ ಮನುಷ್ಯರು ಯಾವಾಗಲೂ ನರಕದಲ್ಲಿರಬೇಕಾಗುವುದೆಂದು ಕೇಳಿದ್ದುಂಟು.**

ಕಮಲೆ ನಿನ್ನಯ ಪಾದ ಕಮಲದಲ್ಲೆನಗೆ
ವಿಮಲ ಮತಿಯನಿತ್ತು ಅಮಲನ್ನ ಮಾಡಿಸೇ

ಗಜರಾಜ ಗಮನೆಯೆ ತ್ರಿಜಗದ್ವಂದ್ಯಳೆಂದು
ಭಜಿಸಿ ನಿನ್ನಯ ಪಾದಾಂಬುಜವ ಆಶ್ರೈಸಿದೆ


ಅಷ್ಟ ಸೌಭಾಗ್ಯ ವಿಶಿಷ್ಟವ ಕೊಟ್ಟು
ಕಷ್ಟವ ತಿಳಿದು ಸಂತುಷ್ಟನ ಮಾಡಮ್ಮ

ಶ್ರೇಷ್ಠನ್ನ ಮಾಡು ಉತ್ಕೃಷ್ಟ ಜ್ಞಾನವನಿತ್ತು
ಶಿಷ್ಟನೆಂದೆನಿಸಿ ಶ್ರೀ ಕೃಷ್ಣನ್ನ ರಾಣಿ

ಅಜಭವ ಮೊದಲಾದ ದ್ವಿಜರಿಂದ ವಂದಿತಳೆ
ಭಜಿಸಿ ನಿನ್ನಯ ಪಾದಾಂಬುಜವ ಆಶ್ರೈಸಿದೆ


ದ್ವಿಜರಾಜಗಮನಳೆ ಭುಜಗಶಯನನಾದ
ವಿಜಯವಿಠ್ಠಲನಂಘ್ರಿ ರಜವ ಧರಿಸುವೆ

-ಶ್ರೀ ವಿಜಯದಾಸರು



(ಎಂಟನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಹಿತಮಿತಿ ಜಗದ್ದೃಷ್ಟ್ವಾಕ್ಲ್ಪೈರಕ್ಲ್ಪ್ತಫಲಾಂತರೈಃ ಅಮತಿವಿಹಿತೈರನ್ಯೈರ್ಧರ್ಮಾಯಿತೈಶ್ಚ ಯದೃಚ್ಛಯಾ
ಪರಿಣತಬಹುಚ್ಛದ್ಮಾ ಪದ್ಮಾಸಹಾಯದಯೇ ಸ್ವಯಂ ಪ್ರದಿಶಸಿ ನಿಜಾಭಿಪ್ರೇತಂ ನಃ ಪ್ರಶಾಮ್ಯದಪತ್ರಪಾ ॥ ೭೪ ॥

ಹಿಂದಿನ ಪದ್ಯದಲ್ಲಿ ದಯೆಯನ್ನು ಒಂದು ಏಣಿಯನ್ನಾಗಿ ರೂಪಿಸಿ, ಸರ್ವಫಲಗಳೂ ಶ್ರೀನಿವಾಸನ ದಯೆಯಿಂದಲೇ ಏರ್ಪಡುವುದೆಂದು ನಿರೂಪಿಸಿದರು. ಈ ಪದ್ಯದಿಂದ ಆರಂಭಿಸಿ ಈ ದಶಕ ಮುಗಿಯುವವರೆಗೂ ಏಣಿಯು ಜನಗಳನ್ನು ಮೆಟ್ಟಲು ಮೆಟ್ಟಲಾಗಿ ಹೇಗೆ ಮೇಲೇರಿಸುವುದೋ ಹಾಗೆಯೇ ದಯೆಯೂ ಕೂಡ ಚೇತನರನ್ನು ಮೆಟ್ಟಲು ಮೆಟ್ಟಲಾಗಿ ಉದ್ಧರಿಸುವ ರೀತಿಯು ವರ್ಣಿಸಲ್ಪಡುವುದು. ಅದರಲ್ಲಿ ಮೊದಲು ಪ್ರಪತ್ತಿ, ಭಕ್ತಿ ಮೊದಲಾದ ಉಪಾಯಾನ್ವಯಕ್ಕೆ ಮೊದಲು ದಯಾದೇವಿಯು ಮಾಡುವ ಉಪಕಾರವನ್ನು ತಿಳಿಸಿ, ಅನಂತರ ದಯಾದೇವಿಯು ಮಾಡುವ ಉಪಾಯಾನ್ವಯವನ್ನೂ, ತದುತ್ತರಕಾಲದಲ್ಲಿ ಉಂಟಾಗುವ ಫಲವನ್ನೂ ಮೋಕ್ಷ ಪ್ರಾಪ್ತಿಯನ್ನೂ ತಿಳಿಸಿ , ಕೊನೆಗೆ ಭಕ್ತಿ ಯೋಗವನ್ನು ಮಾಡುವುದರ ವಿಷಯದಲ್ಲಿ ದಯಾದೇವಿಯ ಅನುಗ್ರಹದ ರೀತಿಯನ್ನೂ ವರ್ಣಿಸಿ ಈ ದಶಕವನ್ನು ಮುಗಿಸುತ್ತಾರೆ. ಅದರಲ್ಲಿಯೂ ಈ ಪದದಲ್ಲಿ ಆಚಾರ್ಯ ಸಮಾಶ್ರಯಣಕ್ಕಿಂತಲೂ ಮೊದಲು ದಯಾದೇವಿಯು ಮಾಡುವ ಉಪಕಾರವು ವರ್ಣಿಸಲ್ಪಡುವುದು.

ಚೇತನರ ವಿಷಯದಲ್ಲಿ ಕೆಲವು ಸಮಯಗಳಲ್ಲಿ ಉಂಟಾಗುವ ಪ್ರಾಸಂಗಿಕ , ಅನುಷಂಗಿಕ, ಅಬುದ್ಧಿಪೂರ್ವ, ಯಾದೃಚ್ಛಿಕ, ಸಾಮಾನ್ಯ ಬುದ್ಧಿ ಮೂಲವೆಂಬ ಇಂತಹ ಸುಕೃತಗಳನ್ನು ತಾನು ರಕ್ಷಿಸುವುದಕ್ಕೆ ಒಂದು ವ್ಯಾಜವನ್ನಾಗಿ ಮಾಡಿಕೊಂಡು ದಯಾದೇವಿಯು ಚೇತನರನ್ನೂ ರಕ್ಷಿಸುತ್ತಾಳೆ. ರಕ್ಷಿಸುವಾಗ ತನಗೆ ಅಭಿಮತವಾದ ಪುರುಷಾರ್ಥವನ್ನು ಕೊಟ್ಟು ರಕ್ಷಿಸುತ್ತಾಳೆ. ದಯಾದೇವಿಗೆ ಅಭಿಮತವಾದ ಪುರುಷಾರ್ಥವೆಂದರೆ ನಿತ್ಯಾನಂದರೂಪವಾದ ಮೋಕ್ಷವೇ ಆಗಿರುತ್ತದೆ. ಅದನ್ನು ಅನುಗ್ರಹಿಸಿದರೆ ತಾನೇ ಪೂರ್ಣವಾಗಿ ರಕ್ಷಿಸಿದಂತಾಗುವುದು ದಯಾದೇವಿಯು ಅಂತಹ ಮೋಕ್ಷವನ್ನು ಅನುಗ್ರಹಿಸುವ ರೀತಿಯು ಮುಂದೆ ತಿಳಿಸಲ್ಪಡುವುದು. ಹೀಗೆ ರಕ್ಷಿಸುವಾಗ ಅವಳಿಗಿರುವ ಲಜ್ಜೆಯು ಹೋಗಿಬಿಡುವುದು. ಲಜ್ಜೆಯು ಹೋಗುವುದೆಂದರೆ - ನಾನು ಈ ಚೇತನನನ್ನು ರಕ್ಷಿಸಲಿಲ್ಲವಲ್ಲ! ರಕ್ಷಿಸಲು ಯಾವುದಾದರೊಂದು ಅವಕಾಶವೂ ಸಿಗಲಿಲ್ಲವಲ್ಲ! ಎಂದು ಚಿಂತಿಸಿ, ಮೇಲೆ ತಿಳಿಸಿರುವಂತಹ ಸುಕೃತಗಳಲ್ಲಿ ಯಾವದಾದರೊಂದನ್ನು ವ್ಯಾಜ್ಯವನ್ನಾಗಿ ಕಲ್ಪಿಸಿಕೊಂಡು ರಕ್ಷಿಸುವುದೇ ಆಗಿರುತ್ತದೆ. ಒಲಜ್ಜೆಯು ಹೋಗುವುದೆಂಬದನ್ನು ಕೆಲವರು ಇನ್ನೊಂದು ರೀತಿಯಿಂದ ವಿವರಿಸುತ್ತಾರೆ. ಅನೇಕ ದಿನಗಳಿಂದ ದೇಹಾತ್ಮಭ್ರಮದಿಂದಲೂ ಸ್ವತಂತ್ರಾತ್ಮಭ್ರಮದಿಂದಲೂ ಕೂಡಿರುವ ಚೇತನನನ್ನು ದಯಾದೇವಿಯು ರಕ್ಷಿಸಲು ಬರುವಾಗ 'ನಿನ್ನನ್ನು ಕರೆದವರಾರು? ಕರೆಯದೆ ಬರಲು ನಿನಗೆ ನಾಚಿಕೆಯಿಲ್ಲವೆ? ಎಂದುಚೇತನನು ಪ್ರಶ್ನಿಸಿದಾಗ - ನೀನು ಕೆಲವು ಸುಕೃತಗಳನ್ನು ಮಾಡಿರುತ್ತೀಯೆ . ಸುಕೃತವನ್ನು ಮಾಡಿದವನನ್ನು ರಕ್ಷಿಸುವುದೇ ನನ್ನ ಕೆಲಸ ನಿನ್ನ ಸುಕೃತವೇ ನನ್ನನ್ನು ಕರೆಯಿತು. ಆದ್ದರಿಂದ ಇದರಲ್ಲಿ ಲಜ್ಜೆಯೇನು? ಎಂದು ದಯಾದೇವಿಯು ಜೀವನನ್ನು ಸಮಾಧಾನಪಡಿಸಿ ರಕ್ಷಿಸುವಳು ಇದೇ ಲಜ್ಜೆಯಿಲ್ಲದಿರುವಿಕೆಯೆಂದು ಸ್ವಾರಸ್ಯವಾಗಿ ಹೇಳುವುದೂ ಉಂಟು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಕಾರ್ತಿಕ - ಮಾರ್ಗಶಿರ ಮಾಸ ಸಂಚಿಕೆ

ಸಂಪುಟ : 02 ನವೆಂಬರ್ - 2022 ಸಂಚಿಕೆ : 04



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ, (ಎಫ್.ಎ.ಸಿ.)
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ - ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ಜಗನ್ಮಾತೆಯು ಉದ್ಭವಿಸಿದ ಪಂಚಮೀ ತೀರ್ಥ | - ಸೂರ್ಯವಂಶಿ | 7 |
| ಮಹಾಲಕ್ಷ್ಮೀ ದೇವಿಯ ತತ್ತ್ವಗಳು | -- ಡಾ॥ ಎ.ಕುಮುದ | 10 |
| ತುಪ್ಪದ ದೀಪ ಹಚ್ಚಿ | - ಹನುಮಂತ ಮ. ದೇಶಕುಲಕರ್ಣಿ | 12 |
| ಕೊಲ್ಹಾಪುರದ ಅಧಿದೇವತೆ ಶ್ರೀ ಮಹಾಲಕ್ಷ್ಮೀ | - ವೇದ ವಿದ್ವಾನ್. ಶಿವರಾಮ ಜೋಗಳೇಕರ | 13 |
| ಕಾರ್ತೀಕ ದೀಪಾರಾಧನೆ | - ಡಾ॥ ಸುಮನ ಬದರೀನಾಥ್ | 16 |
| ಬಾಗೂರಿನ ವೇಣುಗೋಪಾಲಸ್ವಾಮಿ ದೇವಾಲಯ | - ಕೆಂಗೇರಿ ಚಕ್ರಪಾಣಿ | 20 |
| ವೈಭವದ ಉತ್ಸವಗಳಲ್ಲಿ | - ಶ್ರೀಮತಿ. ಬಿ. ಪದ್ಮಜ | 22 |
| ಆಕಾಶರಾಜನ ಪುತ್ರಿ 'ಪದ್ಮಾವತಿ' ತಿರುಚಾನೂರು ಪದ್ಮಾವತಿ | - ಕೆ.ಎಸ್. ರಾಮಮೂರ್ತಿ | 28 |
| ತುಳಸಿ ಮತ್ತು ಧಾತ್ರಿ | - ಶ್ರೀಮತಿ. ಮಾಧುರಿ ದೇಶಪಾಂಡೆ | 31 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 33 |
| ಮಧ್ವಭಾಷ್ಯದ ಪ್ರಥಮ ಶ್ರೋತೃ ಶ್ರೀ ಪದ್ಮನಾಭ ತೀರ್ಥರು | - ಶ್ರೀಧರ ರಾಯಸಂ | 34 |
| ವಿಜಯಪುರದ ವೆಂಕಟೇಶ್ವರ ದೇವಾಲಯಗಳು | - ಶ್ರೀರಂಗ ಪುರಾಣಿಕ | 36 |
| ಹರಿದಾಸರ ಕೃತಿಗಳಲ್ಲಿ ಶ್ರೀನಿವಾಸನ ವೈಭವ | - ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ | 38 |
| ಪರಮಕಾರ್ಣಿಕ ಕ್ಷೇತ್ರ ಕುಕ್ಕೆ ಶ್ರೀ ಸುಬ್ರಹ್ಮಣ್ಯ | - ಡಾ॥ ಸಗ್ರಿ ಆನಂದತೀರ್ಥ | 41 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 44 |
| ವ್ಯೂಹಲಕ್ಷ್ಮೀ ವೈಭವ | - ಶ್ರೀಮತಿ | 45 |
| ನೀತಿ ಕಥೆ - ಸ್ವರ್ಗಪ್ರಾಪ್ತಿ ಪುಣ್ಯಸಂಚಯದಿಂದ | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ -- ಅಲಮೇಲುಮಂಗ ಅನುಗ್ರಹ | - ದ್ವಾರಕನಾಥ್ | 52 |

ಮುಖಚಿತ್ರ - ಸ್ವಾಮಿಯವರ ಪುಷ್ಪಯಾಗ, ತಿರುಮಲೆ
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ, ತಿರುಚಾನೂರು

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

**ಸಂಪಾದಕೀಯ**

# ಅಧ್ಭುತ! ಪರಮಾದ್ಭುತ!!

ದಿವ್ಯವಾದ ತಿರುಚಾನೂರಿನಲ್ಲಿ ಪವಿತ್ರವಾದ ಪದ್ಮಸರೋವರದ ಪುಣ್ಯಜಲದಿಂದ ಬಂಗಾರದ ಸಹಸ್ರ ಪದ್ಮದಲ್ಲಿ ಉದ್ಭವಿಸಿದ ಆಲುಮೇಲುಮಂಗಮ್ಮನಿಗೆ ಪದ್ಮಾವತಿ ಎಂಬ ಹೆಸರಿನೊಂದಿಗೆ "ಸ್ವತಂತ್ರ ವೀರಲಕ್ಷ್ಮೀ" ಎಂಬ ಹೆಸರೂ ಪ್ರಸಿದ್ಧಿಯಾಗಿದೆ. ತಿರುಚಾನೂರಿನ ಶ್ರೀಮಹಾರಾಜ್ಞಿಯಾದ ಅಲಮೇಲುಮಂಗಮ್ಮನಿಗೆ ಪಾಂಚರಾತ್ರಾಗಮಶಾಸ್ತ್ರ ವಿಧಾನದಲ್ಲಿ "ಸ್ವತಂತ್ರವೀರಲಕ್ಷ್ಮ್ಯಾರಾಧನೆ" ಎಂಬ ಹೆಸರಿನಲ್ಲಿ ನಿತ್ಯಾರಾಧನೆಗಳು ಉತ್ಸವಗಳು, ಮೆರವಣಿಗೆಗಳು ಅತ್ಯಂತ ವೈಭವದಿಂದ ನಡೆಯುತ್ತವೆ.

ಪದ್ಮಾವತೀ ದೇವಿಯಾಗಿ ನೆಲಸಿರುವ ಈ ಆಲಯದೊಳಗೆ ಅಡಿಯಿರಿಸುತ್ತಲೆ ಪರಿಮಳದ ಸುಗಂಧ ದ್ರವ್ಯಗಳ ವಾಸನೆಯೊಂದಿಗೆ ಮಂಗಳವಾದ್ಯಗಳೊಂದಿಗೆ, ಅರ್ಚಕರ ಮಂತ್ರೋಚ್ಛಾರಣೆಗಳೊಂದಿಗೆ, ಪ್ರಸಾದದ ಸುವಾಸನೆಯೊಂದಿಗೆ ಬಹಳ ಸುಂದರವಾದ, ಮಂಗಳಕರವಾದ, ಆಹ್ಲಾದಕರವಾದ ಆಧ್ಯಾತ್ಮಿಕ ಶೋಭೆ ಎಲ್ಲೆಲ್ಲೂ ತುಂಬಿರುತ್ತದೆ. ಈ ಆಲಯವು ಪ್ರತಿನಿತ್ಯವೂ ಭಕ್ತ ಜನ ಸಂದೋಹದಿಂದ ಗೋವಿಂದ ನಾಮೋಚ್ಚರಣೆಯಿಂದ ತುಂಬಿ ತುಳುಕಾಡುತ್ತಿರುತ್ತದೆ. ಆಲಯದ ಪರಿಸರದಲ್ಲಿ ಪುಷ್ಕರಿಣಿಯ ಸೌಂದರ್ಯ, ಅನ್ನಪ್ರಸಾದ ವಿತರಣಾಶಾಲೆಯಲ್ಲಿ ತಯಾರಿಸುವ ಆಹಾರದ ಘಮಘುಮವಾಸನೆ, ಆಸ್ಥಾನಮಂಟಪದಲ್ಲಿ ನಿತ್ಯವೂ ನಡೆಯುವಂತಹಾ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮೊದಲಾವುಗಳೊಂದಿಗೆ ಆಧ್ಯಾತ್ಮಿಕ ವಾತಾವರಣ ಪ್ರತಿಬಿಂಬಿಸುತ್ತಿರುತ್ತದೆ. ಇಲ್ಲಿ ನಿತ್ಯವೂ ಅನೇಕ ವಿಧಗಳ ಉತ್ಸವಗಳು ನಡೆಯುತ್ತಿರುತ್ತದೆ.

ಈ ಕ್ರಮದಲ್ಲಿ ನವೆಂಬರು ೨೦ ರಿಂದ ೨೮ ರವರೆಗೂ ಅಮ್ಮನವರ ಬ್ರಹ್ಮೋತ್ಸವಗಳು ಬ್ರಹ್ಮಾಂಡವಾಗಿ ವೈಭವದಿಂದ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತ್ತಾ ನಡೆಯುತ್ತದೆ. ಆಲಯದ ಪರಿಸರದಲ್ಲೆಲ್ಲಾ ಹಬ್ಬದ ವಾತಾವರಣ ತುಂಬಿದ್ದು, ಕಳೆಕಳೆಯಾಗಿರುತ್ತದೆ. ವಿದ್ಯುತ್ ಕಾಂತಿಯ ಬೆಳಕಿನಲ್ಲಿ ಪುಷ್ಪಪ್ರದರ್ಶನದೊಂದಿಗೆ ಆಹ್ಲಾದಕರವಾಗಿರುತ್ತದೆ. ಬ್ರಹ್ಮೋತ್ಸವ ಆರಂಭದಲ್ಲಿ ಇಲ್ಲಿ ಅಮ್ಮನರಿಗೆ ಲಕ್ಷಕುಂಕುಮಾರ್ಚನೆ ಸೇವೆ ನಡೆಯುತ್ತದೆ. ಈ ಸೇವೆಯನ್ನು ಬ್ರಹ್ಮೋತ್ಸವದಲ್ಲಿ ಎಂತಹಾ ವಿಘ್ನಗಳು ಬರದಂತೇ ಮಂಗಳಕರವಾಗಿ ದಿಗ್ವಿಜಯವಾಗಿ ನಡೆಯಲಿ ಎಂದು ಅಮ್ಮನವರನ್ನು ಬೇಡಿಕೊಳ್ಳುತ್ತಾ ಈ ಸೇವೆಯನ್ನು ನಡೆಸುತ್ತಾರೆ.

ಇನ್ನು ಪ್ರತಿ ದಿನ ಅಮ್ಮನವರು ವಿವಿಧ ರೀತಿಯ ವಾಹನಗಳ ಮೇಲೆ ಆಸೀನಳಾಗಿ ನಾಲ್ಕು ರಥಬೀದಿಗಳಲ್ಲಿ ಸಾಗುತ್ತಾ ಭಕ್ತರನ್ನು ಕರುಣಿಸುತ್ತಾ, ಭಕ್ತರ ಹೃದಯದಲ್ಲಿ ಆಧ್ಯಾತ್ಮಿಕ ಭಕ್ತಿ ಭಾವವನ್ನು ಅಭಿವೃದ್ಧಿಗೊಳಿಸುತ್ತಾಳೆ. ಪ್ರತಿವಾಹನ ಸೇವೆಯಲ್ಲಿ ಉತ್ಸವ ಮೂರ್ತಿಗೆ ಶಾಂತಿನಿಲಯದಲ್ಲಿ ನೆಲೆಸಿರುವಂತಹಾ ಅಮ್ಮನವರಿಗೆ ನಿತ್ಯವೂ ವಿವಿಧ ರೀತಿಯ ಪರಿಮಳ ಭರಿತವಾದ ಪುಷ್ಪಗಳನ್ನು ಅತ್ಯುತ್ತಮವಾದ ರೇಶ್ಮೆ ಸೀರೆಗಳ ಸೊಬ್ಬಗಿನಿಂದ, ವೈವಿಧ್ಯಮಯವಾದ ಹಾರಗಳೊಂದಿಗೆ, ಎಷ್ಟೋ ವಿಧವಾದ ರತ್ನಾಭರಣಗಳಿಂದ ಅಮ್ಮನವರನ್ನು ಅಲಂಕರಿಸಿರುವುದನ್ನು ನೋಡುವುದೇ ಕಣ್ಣಿಗೆ ಹಬ್ಬದಂತಿರುತ್ತದೆ. ಅಲಂಕೃತಗೊಂಡಿರುವ ಅಮ್ಮನವರ ಸೌಂದರ್ಯವನ್ನು ಸಾಮಾನ್ಯ ಮಾನವರಾದ ನಾವು ವರ್ಣಿಸುವುದಕ್ಕೆಸಾಧ್ಯವೇ ಇಲ್ಲ. ಅಂತಹಾ ಪರಮಾದ್ಭುತವಾದ ರೂಪದಿಂದ ಜಗಜ್ಜನನಿ ಮೆರವಣಿಗೆಯಲ್ಲಿ ರಥಬೀದಿಗಳಲ್ಲಿ ಸಾಗುತ್ತಿರುವಾಗ ಭಕ್ತರು ಮನತುಂಬಿ ಬರುವ ಭಕ್ತಿಯಿಂದ ಗೋವಿಂದನಾಮವನ್ನು ಹರ್ಷದಿಂದ ಜಪಿಸುತ್ತಾರೆ. ಅದರೊಂದಿಗೆ ಅಮ್ಮನವರ ಮೆರವಣಿಗೆಯ ಮುಂದೆ ಸಾಗುವಂತಹಾ ಕೋಲಾಟದ ಬೃಂದಗಳು, ಭಜನಾ ಬೃಂದಗಳು, ವಿವಿಧ ವೇಷಭೂಷಣಗಳನ್ನು ಧರಿಸಿರುವಂತಹಾ ಮಕ್ಕಳು, ಹಿರಿಯರು, ವಯೋಭೇದವಿಲ್ಲದೇ ಅಮ್ಮನ ಸೇವೆಯಲ್ಲಿ ಧನ್ಯರಾಗುವಂತಹಾ ಎಷ್ಟೋ ಮಂದಿ ಭಕ್ತರನ್ನೂ ವೇದಪಾರಾಯಣ ಬೃಂದ, ಮಂಗಳವಾದ್ಯಗಳು ಮೊದಲಾದವುಗಳೊಂದಿಗೆ ತುಂಬಿರುವ ಆ ವಾತಾವರಣ ವೈಭವದಿಂದ ಕೂಡಿರುತ್ತದೆ.

ಹಾಗೆಯೇ ಈ ಮಾಸದಲ್ಲಿ ಪದ್ಮಾವತಿ ಅಮ್ಮನವರಿಗೆ, ತಿರುಮಲೆಯ ಶ್ರೀನಿವಾಸನಿಗೆ 'ಪುಷ್ಪಯಾಗ ಮಹೋತ್ಸವ", ಅನ್ನಪರಬ್ರಹ್ಮ ಸ್ವರೂಪವೆನ್ನುವಂತೆ ತಿರುಪತಿಯ ಕಪಿಲೇಶ್ವರ ಸ್ವಾಮಿಗೆ ಅನ್ನಾಭಿಷೇಕ, ತಿರುಮಲೆಯ ಆಲಯದಲ್ಲಿ ಕೈಶಿಕದ್ವಾದಶಿಯಂದು ಆಸ್ಥಾನ, ಸುಬ್ರಹ್ಮಣ್ಯ ಷಷ್ಠಿಯ ಸಂದರ್ಭದಲ್ಲಿ ಸ್ವಾಮಿಗೆ ಕಲ್ಯಾಣೋತ್ಸವ ಮೊದಲಾದ ಮಹೋತ್ಸವಗಳು ವೈಭವದಿಂದ, ಅತ್ಯದ್ಭುತವಾಗಿ ಪರಮಾದ್ಭುತವಾಗಿ ನಡೆಯುವುದು ವಿಶೇಷವೆನಿಸಿದೆ. ಅಮ್ಮನವರ ಬ್ರಹ್ಮೋತ್ಸವಗಳೊಂದಿಗೆ ಈ ವಿಶೇಷಸೇವೆಗಳೆಲ್ಲದರಲ್ಲೂ ನಾವೆಲ್ಲಾ ಪಾಲ್ಗೊಂಡು ಆಯಾದೇವತೆಗಳ ಕೃಪಾಶೀರ್ವಾದವನ್ನು ಪಡೆದು ಧನ್ಯರಾಗೋಣ.



**ಗೋವಿಂದ !! ಗೋವಿಂದ!!ಗೋವಿಂದ!!**

# ಜಗನ್ಮಾತೆಯು ಉದ್ಭವಿಸಿದ ಪಂಚಮೀ ತೀರ್ಥ

- ಸೂರ್ಯವಂಶಿ

ಲೋಕಕಲ್ಯಾಣಕ್ಕಾಗಿ ಸಪ್ತ ಋಷಿಗಳು ಆಚರಿಸಿದ ಹೋಮ ಸಂಪೂರ್ಣವಾಗಿತ್ತು. ಆ ಯಾಗದ ಫಲವನ್ನು ಯಾರಿಗೆ ನೀಡಬೇಕೆಂದು ಚರ್ಚೆ ನಡೆಯಿತು. ಆಗ ತ್ರಿಮೂರ್ತಿಗಳಲ್ಲಿ ಸತ್ವ ಗುಣ ಸಂಪನ್ನನಾದವರಿಗೆ ಈ ಯಾಗದ ಫಲವನ್ನು ನೀಡಬೇಕೆಂದು ನಿರ್ಧರಿಸಿದರು. ಆ ಕೆಲಸವನ್ನು ಭೃಗುಮುನಿಗೆ ಒಪ್ಪಿಸಿದರು. ಆಗ ಭೃಗುಮುನಿಯು ಮುಲ್ಲೋಕಗಳಿಗೂ ಪಯಣ ಬೆಳೆಸಿದರು.

ಆತ ಮೊದಲು ಬ್ರಹ್ಮಲೋಕ, ನಂತರ ಕೈಲಾಸ, ಅನಂತರ ವೈಕುಂಠಕ್ಕೆ ಹೋದರು. ಅಲ್ಲಿ ವಿಷ್ಣುವು ತನ್ನನ್ನು ಗಮನಿಸಲಿಲ್ಲವೆಂಬ ಕೋಪದಿಂದ ಮಹಾವಿಷ್ಣುವಿನ ವೃಕ್ಷಸ್ಥಳವನ್ನು ಕಾಲಿನಿಂದ ಒದ್ದರು. ಆದರೂ ವಿಷ್ಣುವು ಸ್ವಲ್ಪವೂ ಕೋಪಿಸಿಕೊಳ್ಳದೇ ಆತನನ್ನು ಪೂಜಿಸಿ, ಸತ್ಕರಿಸಿದ. ತನ್ನ ಅಜ್ಞಾನಕ್ಕೆ ಮರುಗಿದ ಭೃಗುಮುನಿ ದೇವದೇವನನ್ನು ಪರಿಪರಿಯಾಗಿ ಸ್ತುತಿಸಿ, ಶ್ರೀಮನ್ನಾರಾಯಣನೇ ಸತ್ವ ಗುಣಸಂಪನ್ನನೆಂದೂ, ಆ ಯಾಗದ ಫಲವನ್ನು ಆತನಿಗೇ ಸಮರ್ಪಿಸಬೇಕೆಂದು ನಿರ್ಧಾರ ಮಾಡಿ ಹೊರಟಹೋದ.

ಆದರೆ ತನ್ನ ನಿವಾಸ ಸ್ಥಳವಾದ ಮಹಾವಿಷ್ಣುವಿನ ವಕ್ಷಸ್ಥಳವನ್ನು ಒದ್ದ ಭೃಗುಮುನಿಯನ್ನು ಶಿಕ್ಷಿಸದೇ ಪೂಜಿಸಿದ್ದನ್ನು ಕಂಡ ಶ್ರೀಮಹಾಲಕ್ಷ್ಮೀ ದೇವಿ ಕೋಪಗೊಂಡು ವೈಕುಂಠವನ್ನು ಬಿಟ್ಟು ಹೊರಟುಹೋದಳು.

ಶ್ರೀಮಹಾಲಕ್ಷ್ಮೀದೇವಿ ಇಲ್ಲದ ವೈಕುಂಠದಲ್ಲಿ ತಾನೂ ಇರಲಾರೆನೆಂದು ಶ್ರೀಮನ್ನಾರಾಯಣನು ತನ್ನ ಮನದರಸಿಯನ್ನು ಹುಡುಕುತ್ತಾ ಸ್ವಾಮಿಯು ಶೇಷಾಚಲವನ್ನು ಸೇರಿದ. ಅಲ್ಲಿ ಲಕ್ಷ್ಮೀದೇವಿಗಾಗಿ ಸುವರ್ಣಮುಖೀ ನದೀ ತೀರದ ದಕ್ಷಿಣದಲ್ಲಿ ಒಂದು ಸರೋವರನ್ನು ತೋಡಿದ. ಆ ಸರೋವರದಲ್ಲಿ ಪದ್ಮಗಳನ್ನು ಅರಳಿಸುವ ತೋಟವನ್ನು ಬೆಳೆಸಿದ. ಆ ಪದ್ಮಗಳು ಸದಾ ಅರಳಿರುವಂತೆ ಸೂರ್ಯನಾರಾಯಣನನ್ನು ಪ್ರತಿಷ್ಠಾಪನೆ ಮಾಡಿದ. ಆ ರೀತಿ ಹನ್ನೆರಡು ವರ್ಷಗಳ ಕಾಲ ಘೋರವಾದ ತಪಸ್ಸನ್ನು ಆಚರಿಸಿದ.

ಆ ತಪಸ್ಸಿಗೆ ಲಕ್ಷ್ಮೀದೇವಿಯು ಕಾರ್ತೀಕಮಾಸದಲ್ಲಿ, ಶುಕ್ಲಪಕ್ಷದ ಪಂಚಮೀ ತಿಥಿ. ಉತ್ತರಾಷಾಡನಕ್ಷತ್ರ ಇರುವಂತಹಾ ಶುಕ್ರವಾರದಂದು, ಪದ್ಮಸರೋವರದ ನಡುವೆ ಸಾವಿರ ದಳಗಳಿರುವ ಸುವರ್ಣಪದ್ಮದಲ್ಲಿ ಆಸೀನಳಾಗಿ, ಕೈಗಳಲ್ಲಿ ಪದ್ಮಗಳನ್ನು ಧರಿಸಿ ಪದ್ಮದಂತಹಾ ವಿಶಾಲ ನಯನೆಗಾಗಿ ನಸುಗುಂಪಿನ ಪದ್ಮಗಳಂತಹಾ ಪಾದಗಳೊಂದಿಗೆ ಸಕಲಾಭರಣ ಭೂಷಿತಳಾಗಿ,ಸುಗಂಧದ್ರವ್ಯ ಮಿಶ್ರಿತವಾದ ಗಂಧದಂತಹಾ ತೇಜಸ್ಸನ್ನು ಹೊಂದಿ, ಮನೋಹರವಾದ ಸುಗಂಧ ಪುಷ್ಪಗಳನ್ನು ಧರಿಸಿ, ತನ್ನ ಸ್ವಾಮಿಗೆ ದರ್ಶನವನ್ನು ನೀಡಿದಳು.

ಆ ರೀತಿ ತನ್ನ ಲಕ್ಷ್ಮೀದೇವಿಯನ್ನು ಶಾಶ್ವತವಾಗಿ ಪಡೆಯುವುದಕ್ಕೆ ಕಾರಣವಾದ ಪದ್ಮಸರೋವರಕ್ಕೆ, "ನಿನಗೆ ಇಂದಿನಿಂದ "ಪದ್ಮವಾಸೀ, "ಪದ್ಮಂ" ಪದ್ಮ ಸರಸ್ಸು" ಎಂದು ಕರೆಯುತ್ತಾರೆ. ನೀನು "ಪದ್ಮಾ ವತೀ







(ಅಲರ್‌ಮೇಲ್‌ಮಂಗ) ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿ ಇಲ್ಲೇ ಸ್ಥಿರವಾದ ನಿವಾಸವನ್ನು ಹೊಂದಿರಬೇಕೆಂದು ಸ್ವಾಮಿಯು ವರವನ್ನು ನೀಡಿದ.

ಅಂತಹಾ ಈ ಪದ್ಮಸರೋವರವನ್ನು ಸಾಕ್ಷಾತ್ತು ಶ್ರೀಮಹಾಲಕ್ಷ್ಮಿ, ಶ್ರೀಮಹಾವಿಷ್ಣುವಿನ ಪ್ರಾರ್ಥನೆಯಂತೆ ಉದ್ಭವಿಸಿದಳು.

ಪ್ರತೀ ವರ್ಷವೂ ಕಾರ್ತೀಕ ಶುಕ್ಲ ಪಂಚಮಿಯ ದಿನದಿಂದ ಶ್ರೀಮಹಾಲಕ್ಷ್ಮೀದೇವಿಗೆ ವೈಭವದ ಉತ್ಸವಗಳನ್ನು ನಡೆಸುತ್ತಾರೆ. ಇದನ್ನು ಪಂಚಮೀ ತಿಥಿಯಂದು ಕಾರ್ತೀಕಮಾಸದಲ್ಲಿ ನಡೆಯುತ್ತದೆ.

ಈ ಕಾರ್ತೀಕ ಶುದ್ಧ ಪಂಚಮಿಯನ್ನು ಅವಭೃಥ ದಿನವೆಂದು ಕರೆಯುತ್ತಾ ನವರಾತ್ರೋತ್ಸವ ನಡೆಯುವಂತೆ ಬ್ರಹ್ಮೋತ್ಸವವೆಂದು ಆಚರಿಸುತ್ತಾರೆ. ಈ ಬ್ರಹ್ಮೋತ್ಸವದ ಕಾರ್ತೀಕ ಮಾಸದ ಕೃಷ್ಣ ಪಕ್ಷದ ಏಕಾದಶಿಯಾಗಲೀ ಅಥವಾ ದ್ವಾದಶಿಯಂದು ಅಂಕುರಾರ್ಪಣೆ ಮಾಡುತ್ತಾರೆ.

ಸಾಮಾನ್ಯವಾಗಿ ಬ್ರಹ್ಮೋತ್ಸವಗಳು ಎಲ್ಲಾ ದೇವಾಲಯಗಳಲ್ಲಿ ರಥೋತ್ಸವದೊಂದಿಗೆ ಸಂಪೂರ್ಣವಾಗುವಂತೆ ಮಾಡುತ್ತಾರೆ. ತೀರ್ಥಕ್ಕೆ (ಅವಭೃಥ ಸ್ನಾನ) ಬಹಳ ಪ್ರಾಧಾನ್ಯತೆ, ಪ್ರಾಮುಖ್ಯತೆ ಇರುವುದಿಲ್ಲ ಆದರೆ ತಿರುಚಾನೂರಿನಲ್ಲಿ ಮಾತ್ರಾ ಶ್ರೀಪದ್ಮಾವತಿ ಅಮ್ಮನವರಿಗೆ ಈ ಅವಭೃಥ ಸ್ನಾನವು ಒಂದು ಪ್ರತ್ಯೇಕತೆಯನ್ನು ಪಡೆದಿದೆ. ಇದಕ್ಕೆ ಪಂಚಮೀತೀರ್ಥವೆಂದು ಹೆಸರು. ಈ ಪಂಚಮೀ ತೀರ್ಥ ಮಹೋತ್ಸವ ಬಹಳ ವೈಭವದಿಂದ ನಡೆಯುತ್ತದೆ. ಭೃಗುಮಹರ್ಷಿಯ ಕಾರಣದಿಂದಾಗಿ ಬೇರೆಯಾಗಿದ್ದ ಲಕ್ಷ್ಮೀನಾರಾಯಣರು ಪುನಃ ಒಂದಾದ ಶುಭ ದಿನವಾದ್ದರಿಂದ ಪಂಚಮೀ ತೀರ್ಥ ಮಹೋತ್ಸವ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಇಂತಹಾ ಉತ್ಸವ ಒಂದು ತಿರುಚಾನೂರಿನಲ್ಲಿ ಇರುವ ಪದ್ಮಾವತಿ ಅಮ್ಮನವರನ್ನು ಬಿಟ್ಟು ಬೇರಾವ ಸ್ಥಳದಲ್ಲೂ ನಡೆಯುವುದಿಲ್ಲ.

ಈ ದಿನ ತಿರುಮಲೆಯಲ್ಲಿ ಶ್ರೀವೇಂಕಟೇಶ್ವರನು ಮದುಮಗನಂತೆ ಕಾಣುತ್ತಾನೆ. ತಿರುಚಾನೂರಿನಲ್ಲಿ ಇರುವ ಪದ್ಮಾವತಿ ಅಮ್ಮನವರು ಮದುಮಗಳಾಗಿ ಕಂಡು ಬರುತ್ತಾರೆ.

ಪಂಚಮೀತೀರ್ಥದ ಮೊದಲ ದಿನ ತಿರುಮಲೆಯಲ್ಲಿ ಶ್ರೀಹರಿಯ ಆಲಯದಲ್ಲಿ ಅಧ್ಯಯನೋತ್ಸವದಲ್ಲಿ "ರಾಪತ್ತು" ಕೊನೆಯ ದಿನ. ಈ ಉತ್ಸವ ಮುಗಿದು ಏಕಾಂತಸೇವೆ ನಡೆದು ಮರುದಿನ



ಅಂದರೆ ಪಂಚಮೀತೀರ್ಥದ ದಿನ ಸ್ವಾಮಿಗೆ ಸುಪ್ರಭಾತ ಸೇವೆ, ತೋಮಾಲಸೇವೆ ಅರ್ಚನೆಗಳನ್ನು ನಿರ್ವಹಿಸಿದ ನಂತರ ಅಮ್ಮನವರಿಗೆ ಕಳುಹಿಸುವಂತಹಾ ಅರಿಶಿನ, ತುಳಸಿ ಪೀತಾಂಬರ ಮುಂತಾದ ಮಂಗಳ ದ್ರವ್ಯಗಳನ್ನು ಶ್ರೀನಿವಾಸನಿಗೆ ಸಮರ್ಪಿಸುತ್ತಾರೆ.

ಶ್ರೀವೆಂಕಟೇಶ್ವರನು ಸ್ವತಃ ತಾನೇ ಶ್ರೀಪದ್ಮಾವತೀ ಅಮ್ಮನವರ ಪ್ರಾಣಪತಿಯಾದ್ದರಿಂದ ಆತ ತನ್ನ ಪ್ರಿಯಪತ್ನಿಗೆ ಆಕೆ ಅವತರಿಸಿದ ಸಮಯದಲ್ಲಿ ಅರಿಶಿನ, ರೇಷ್ಮೆ ವಸ್ತ್ರಗಳು ಮೊದಲಾದವುಗಳನ್ನು ಪ್ರೀತಿಯ ಕಾಣಿಕೆಯನ್ನಾಗಿ ಕಳಿಸುವುದು ಮಾಂಗಲ್ಯಕ್ಕೆ ಮಂಗಳಕರವಾದುದಲ್ಲವೇ ಮಾಂಗಲ್ಯವಿರುವ ಪ್ರತೀ ಸ್ತ್ರೀ ಬಯಸುವುದು ಇದೇ ಅಲ್ಲವೇ!

ಶ್ರೀನಿವಾಸನು ತನ್ನ ಪಟ್ಟದರಸಿಗೆ ಸ್ವತಃ ತಾನೇ ಕಳುಹಿಸಿದ ಅರಿಶಿನ, ತುಳಸಿ, ಪೀತಾಂಬರ, ರೇಷ್ಮೆ ವಸ್ತ್ರಗಳು ಪ್ರಸಾದ, ಛತ್ರ, ಚಾಮರಗಳೊಂದಿಗೆ, ತಾಳಮೇಳಗಳೊಂದಿಗೆ, ಆಲಯದ ಮರ್ಯಾದೆಗಳೊಂದಿಗೆ ಅರ್ಚಕರು, ಜಿಯ್ಯರುಗಳು, ಏಕಾಂಗಿ, ಆಚಾರ್ಯರು ಅಧ್ಯಾಪಕರು, ಅಧಿಕಾರಿಗಳು, ವೇದಪಾರಾಯಣದೊಂದಿಗೆ ಮೆರವಣಿಗೆಯೊಂದಿಗೆ ತರುತ್ತಾರೆ. ಪುನಃ ಏಕಾಂಗಿ ತಮ್ಮ ತಲೆಯ ಮೇಲೆ ಈ ಪವಿತ್ರವಾದ ವಸ್ತುಗಳನ್ನು ತಲೆಯ ಮೇಲೆ ಇರಿಸಿಕೊಂಡು ಕಾಲ್ನಡಿಗೆಯಲ್ಲಿ ತಿರುಪತಿಯ ಬಳಿ ಇರುವ ಅಲಿಪಿರಿಯನ್ನು ತಲುಪುತ್ತಾರೆ. ಆ ಅರಿಶಿನ,ತುಳಸಿ, ಪೀತಾಂಬರ ಇತ್ಯಾದಿಗಳನ್ನು ಆನೆಯ ಮೇಲೆ ಇರಿಸಿಕೊಂಡು ಏಕಾಂಗಿಯೂ ಆನೆಯ ಮೇಲೆ ಕುಳಿತು ಮೆರವಣಿಗೆಯಲ್ಲಿ ತಿರುಚಾನೂರು ಮಾರ್ಗದಲ್ಲಿ ತಿರುಚಾನೂರು ಸರಿಹದ್ದಿನಲ್ಲಿರುವ ಅರಿಶಿನದ ಮಂಟಪವನ್ನು ತಲುಪುತ್ತಾರೆ.

ಅಷ್ಟರಲ್ಲಿ ತಿರುಚಾನೂರಿನಲ್ಲಿ ಶ್ರೀಪದ್ಮಾವತಿ ಅಮ್ಮನವರಿಗೆ ಪಲ್ಲಕಿ ಉತ್ಸವವನ್ನು ಆಲಯದ ಬೀದಿಯಲ್ಲಿ ನಡೆಸುತ್ತಾರೆ. ಆಲಯದಲ್ಲಿ ಯಥಾವಿಧಿಯಾಗಿ ಅರ್ಚನಾದಿ ಕಾರ್ಯಕ್ರಮಗಳು, ಪೂರ್ಣಾಭಿಷೇಕ ನಡೆಯುತ್ತದೆ.

ನಂತರ ಅಮ್ಮನವರ ದೇವಾಲಯದ ಅಧಿಕಾರಿಗಳು, ಅರ್ಚಕರು, ಊರಿನ ಹಿರಿಯರು, ಅರಿಶಿನದ ಮಂಟಪಕ್ಕೆ ಬಂದು ತಿರುಪತಿಯಿಂದ ಆನೆಯ ಮೇಲೆ ಬಂದಿರುವಂತಹಾ ಕಾಣಿಕೆಗಳಿಗೆ ಎದಿರಾಗಿ ಬಂದು, ತಾವು ತಂದಿರುವಂತಹಾ ಬಾಳೆಯ ಹಣ್ಣುಗಳನ್ನು ಆನೆಗೆ ನೀಡಿ, ನಂತರ ಮೆರವಣಿಗೆಯಲ್ಲಿ ತಿರುಚಾನೂರಿನಲ್ಲಿರುವ ದೇವಾಲಯದ ಬೀದಿಯ ಮೂಲಕ ಶ್ರೀ ಅಮ್ಮನವರ ಸನ್ನಿಧಿಯನ್ನು ಸೇರುತ್ತಾರೆ.

ಪದ್ಮಾವತಿ ಅಮ್ಮನವರು, ಚಕ್ರತ್ತಾಳ್ವಾರರನ್ನು ಮೆರವಣಿಗೆಯಲ್ಲಿ ಪದ್ಮಸರೋವರಕ್ಕೆ ಕರೆದೊಯ್ಯುತ್ತಾರೆ. ಪಂಚಮೀತೀರ್ಥ ಮಂಟಪಕ್ಕೆ ತಲುಪಿದ ಅಮ್ಮನವರಿಗೆ, ಚಕ್ರತ್ತಾಳ್ವಾರರಿಗೆ ತಿರುಮಂಜನವನ್ನು ಪ್ರಾರಂಭಿಸುತ್ತಾರೆ. ಜಿಯ್ಯಂಗಾರರು ಸ್ನಪನ ಸಾಮಗ್ರಿಯನ್ನು ನೀಡುತ್ತಿರುವಾಗ ದೇವಾಲಯದ ಅರ್ಚಕರು ಸ್ನಪನ ತಿರುಮಂಜನವನ್ನು ನೆರವೇರಿಸುತ್ತಾರೆ.ವೇದಪಾರಾಯಣದಾರರು ಶ್ರೀ ಸೂಕ್ತಮು, ಪುರುಷಸೂಕ್ತಂ, ಮೊದಲಾದ ಪಂಚಸೂಕ್ತಗಳನ್ನು ತೈತ್ತಿರೀಯ ನಾರಾಯಣ ಉಪನಿಷತ್ತುಗಳನ್ನು ಪಠಿಸುತ್ತಿರುವಾಗ ಈ ಆಚರಣೆ ನಡೆಯುತ್ತದೆ.

ಈ ಸ್ನಪನ ತಿರುಮಂಜನ ಸಂಪೂರ್ಣವಾಗುತ್ತಲೇ ಶ್ರೀಚಕ್ರತ್ತಾಳ್ವಾರರನ್ನು ಅರ್ಚಕರು ತೆಗೆದುಕೊಂಡರು ಪದ್ಮಸರೋವರದಲ್ಲಿ ಚಕ್ರಸ್ನಾನವನ್ನು ಮಾಡಿಸುತ್ತಾರೆ. ಅದೇ ಸಮಯದಲ್ಲಿ ಭಕ್ತರು ಪದ್ಮಸರೋವರದಲ್ಲಿ ಮುಳುಗುತ್ತಾರೆ. ಈ ಸ್ನಾನವು ಪರಮ ಪುಣ್ಯಕರವಾದುದು. ಸಮಸ್ತ ಪಾಪಗಳನ್ನು ಪರಿಹರಿಸುತ್ತದೆ. ಸರ್ವರೋಗನಿವಾರಣೆ ಮಾಡುತ್ತದೆ. ಶುಭಫಲಗಳನ್ನು ಕರುಣಿಸುತ್ತದೆ. ಸಂಪದವನ್ನು ಕೈಗೂಡಿಸುತ್ತದೆ.

ಈ ಪದ್ಮಸರೋವರದಲ್ಲಿ ಸ್ನಾನವನ್ನು ಮಾಡುವುದರಿಂದ ಏಳು ಜನ್ಮಗಳು ಪಾಪಗಳು ಪರಿಹಾರವಾಗಿ ಪವಿತ್ರರಾಗಿ ಲಕ್ಷ್ಮೀಸಂಪನ್ನರಾಗಿರುತ್ತಾರೆ. ರಾಜ್ಯಭ್ರಷ್ಟರಾದವರು ನಲವತ್ತು ದಿನಗಳ ಕಾಲ ಈ ಸರಸ್ಸಿನಲ್ಲಿ ಇಂದ್ರೀಯ ನಿಗ್ರಹದಿಂದ ಸ್ನಾನ ಮಾಡಿದರೆ ಪುನಃ ರಾಜ್ಯ ಲಕ್ಷ್ಮೀಯನ್ನು ಪಡೆದುಕೊಳ್ಳುತ್ತಾರೆ. ಈ ಸರೋವರದಲ್ಲಿ ಸ್ನಾನ ಮಾಡಿ ಲಕ್ಷ್ಮೀದೇವಿಯನ್ನು ಸ್ತುತಿಸುವವರು ಆಯಸ್ಸು, ಐಶ್ವರ್ಯ, ದಿವ್ಯವಾದ ತೇಜಸ್ಸು, ಸಂತಾನವನ್ನು ಪಡೆದು ಇಹಲೋಕದಲ್ಲಿ ಎಲ್ಲಾ ರೀತಿಯ ಭೋಗ ಭಾಗ್ಯಗಳನ್ನು ಅನುಭವಿಸುತ್ತಾರೆ. ಕೊನೆಗೆ ಮೋಕ್ಷವನ್ನು ಪಡೆಯುತ್ತಾ ಈ ಸರೋವರವನ್ನು ಸ್ತುತಿಸಿದರೂ, ಸ್ನಾನ ಮಾಡಿದರು ಭೂಲೋಕ



ವಾಸಿಗಳ ಪಾಪಗಳು ಪರಿಹಾರವಾಗಿ ಸಮಸ್ತ ಸಂಪತ್ತು ಲಭ್ಯವಾಗುವುದರಲ್ಲಿ ಸಂಶಯವೇ ಇಲ್ಲ.

ಚಕ್ರಸ್ನಾನದ ನಂತರ ಜಿಯ್ಯಂಗಾರರು ಪ್ರಬಂಧಪಾರಾಯಣ ಮಾಡುತ್ತಾರೆ. ಅರ್ಚಕರು ಶ್ರೀಸ್ವಾಮಿಯ ಮೂಲಕ ಅಮ್ಮನವರಿಗೆ ತಲುಪಿರುವ ಅರಿಶಿನ, ತುಳಸಿಯನ್ನು ಅಧಿಕಾರಿಗಳಿಗೆ, ಭಕ್ತರಿಗೆ ಹಂಚುತ್ತಾರೆ. ವರ್ಷಕ್ಕೆ ಒಮ್ಮೆ ಈ ದಿನ ಬಿಟ್ಟು ಯಾವ ದಿನದಲ್ಲೂ ಶ್ರೀ ಹರಿಯ ತುಳಸಿ ದೊರೆಯುವುದು ಬಹಳ ಕಷ್ಟ.

ನಂತರ ಅಮ್ಮನವರನ್ನು ಪದ್ಮಸರೋವರದ ಎದಿರಿನಲ್ಲಿರುವ ಗಂಗುಂಡ್ರ ಮಂಟಪಕ್ಕೆ ಕರೆತಂದು ಸಂಜೆ ಅಮ್ಮನವರಿಗೆ ವಿಶೇಷವಾದ ವಸ್ತ್ರಾಲಂಕರಣಗಳಿಂದ, ಪುಷ್ಪಗಳಿಂದ ಅತ್ಯಂತ ವೈಭವದಿಂದ ಅಲಂಕಾರ ಮಾಡಿ ನೈವೇದ್ಯವನ್ನು ಸಮರ್ಪಿಸಿ, ಆಸ್ಥಾನವನ್ನು ನಡೆಸಿ ದೇವಾಲಯದ ಬೀದಿಗಳಲ್ಲಿ ಮೆರವಣಿಗೆ ಮಾಡಿ ದೇವಾಲಯವನ್ನು ತಲುಪುತ್ತಾರೆ ನಂತರ ಧ್ವಜಾವರೋಹಣದೊಂದಿಗೆ ಉತ್ಸವವನ್ನು ಪೂರ್ತಿಗೊಳಿಸುತ್ತಾರೆ.

ಅಂದು ಶ್ರೀವೇಂಕಟೇಶ್ವರಸ್ವಾಮಿ ನೆಲೆಸಿರುವ ಈ ತಿರುಮಲೆ ದೇವಾಲಯವನ್ನು ಬಿಟ್ಟು ಸ್ವತಃ ತಾನೇ ತಿರುಚಾನೂರಿಗೆ ಬಂದು ಪದ್ಮಾವತಿ ದೇವಿಯೊಂದಿಗಿರುತ್ತಾನೆಂದು ಪ್ರತೀತಿ.

ಹಿಂದಿನ ಕಾಲದಲ್ಲಿ ಪಂಚಮೀ ತೀರ್ಥದ ದಿನ ಚಕ್ರಸ್ನಾನ ಆಗುವವರೆಗೂ ತಿರುಮಲೆಯಲ್ಲಿನ ಶ್ರೀನಿವಾಸನ ಆಲಯವೂ ಮುಚ್ಚಿರುತ್ತಿದ್ದರಂತೆ.ಇದು ಅನಾದಿ ಕಾಲದಿಂದಲೂ ನಡೆದು ಬರುತ್ತಿರುವ ಸಂಪ್ರದಾಯವಾಗಿತ್ತೆಂದು. ಈಗ ಆ ಆಚರಣೆ ಇಲ್ಲವೆಂದು ಹಿರಿಯರು ಹೇಳುತ್ತಾರೆ.

**ಸರ್ವಂ ಶ್ರೀ ಶ್ರೀನಿವಾಸಾರ್ಪಣಮಸ್ತು.**



# ಮಹಾಲಕ್ಷ್ಮೀ ದೇವಿಯ ತತ್ತ್ವಗಳು

- ಡಾ॥ ಎ. ಕುಮುದ
97319 03752

ತತ್ತ್ವ ಎಂದರೆ ಯಾವುದಾದರೂ ಒಂದು ವಸ್ತುವಿನ ಸ್ವಭಾವ, ಪರಮಾತ್ಮನೂ ಒಂದು ತತ್ತ್ವ ಜೀವನೂ ಒಂದು ತತ್ತ್ವ. ಹಾಗೆಯೇ ಲಕ್ಷ್ಮಿ ಬ್ರಹ್ಮವಾಯು  ಮುಂತಾದವರೆಲ್ಲರೂ ತತ್ತ್ವವೇ. ಪ್ರಮಾಣ ಪ್ರಸಿದ್ಧವಾದ ಒಂದು ವಸ್ತುವಿನ ವಿಷಯವಾಗಿ ಅಜ್ಞಾನ, ಸಂಶಯ, ಭ್ರಮೆ ಇವುಗಳನ್ನು ಹೋಗಲಾಡಿಸಿ ಯತಾರ್ಥ ಜ್ಞಾನವನ್ನು ಹುಟ್ಟಿಸಿ ಅದನ್ನು ಧೃಢೀಕರಿಸುವುದೇ ತತ್ತ್ವ ವಿಜ್ಞಾನ ಎಂಬ ಉಲ್ಲೇಖವಿದೆ.

ಮಹಾಲಕ್ಷ್ಮಿಯು ಅವ್ಯಕ್ತ ತತ್ತ್ವಕ್ಕೂ, ತ್ರಿಗುಣಗಳಾದ ಸತ್ವ, ರಜೋ, ತಮ, ಗುಣಗಳಿಗೂ ಮತ್ತು ವೇದಗಳಿಗೂ ಅಭಿಮಾನಿ ದೇವತೆ. ಜ್ಞಾನ ಮಹಾಲಕ್ಷ್ಮೀಯ ಅಧೀನ. ಸಮೃದ್ಧಿ ಆಕೆಯ ಕುಡಿನೋಟದಿಂದಲೇ ಸಾಧ್ಯ. ಯಶಸ್ಸು ಲಕ್ಷ್ಮಿಯ  ಅನುಗ್ರಹ ಆ ದೇವಿಯ ಸ್ಪರ್ಶ ಮಾತ್ರದಿಂದಲೇ ಸಕಲ ತೀರ್ಥಗಳೂ ಪಾವನವಾಗುತ್ತದೆ ಎಂಬುದು ಲಕ್ಷ್ಮಿಯ ಆರಾಧಕರ ನಂಬಿಕೆ. ಧನ, ಧಾನ್ಯ ದೇಹಾರೋಗ್ಯ ಐಶ್ವರ್ಯ ಭೋಗ, ಭಾಗ್ಯ ಮುಂತಾದವು ಲಕ್ಷ್ಮೀದೇವಿಯ ಕುಡಿನೋಟವೆಂದೇ ಮಾನವ ಗಣಗಳ ಅಭಿಪ್ರಾಯ.

ವೈಕುಂಠದಲ್ಲಿ ಮಹಾಲಕ್ಷ್ಮಿಯಾಗಿ ವಿಷ್ಣುವನ್ನು ಭಕ್ತಿಯಿಂದ ಮನಸಾರೆ ಸೇವಿಸುವಳು ಪತಿಭಕ್ತಿಗೆ ಪ್ರತೀಕ ಲಕ್ಷ್ಮೀದೇವಿ. 'ಅವ್ಯಕ್ತ' ಎಂಬ ಹೆಸರುಳ್ಳ ಲಕ್ಷ್ಮೀದೇವಿಯು ದೇವತೆಗಳಲ್ಲೆಲ್ಲಾ ಶ್ರೇಷ್ಠಳೆನಿಸಿರುವಳು. ಅವ್ಯಕ್ತ ಎಂದರೆ ತನ್ನಿಚ್ಛೆಯಿಲ್ಲದೆ ಅನ್ಯರಿಗೆ ಕಾಣಿಸದೆ ಇರುವುದು. ಪ್ರಕೃತಿ ಕಾರಣಗಳಾದ ದೇಹಾದಿಗಳಿಲ್ಲದಿರುವುದು.

ಹರಿದಾಸರುಗಳು ಲಕ್ಷ್ಮೀದೇವಿಯ ತತ್ತ್ವಗಳನ್ನು ಬಹು ಸುಂದರವಾಗಿ ಚಿತ್ರಿಸಿದ್ದಾರೆ.

"ಭಾಗ್ಯದ ಲಕ್ಷ್ಮಿ ಬಾರಮ್ಮಾ"  ಎಂಬ ಕೃತಿಯು ಪುರಂದರ ದಾಸರ ಕೃತಿಗಳಲ್ಲಿ ಅತ್ಯಂತ ಜನಪ್ರಿಯವಾದುದು. ಈ ಕೃತಿಯು ಮೇಲ್ನೋಟಕ್ಕೆ ಸಾಧಾರಣವಾಗಿ ಕಂಡರೂ ಅದರ ಒಳಾರ್ಥಗಳನ್ನು ವಿಶ್ಲೇಷಿಸಿದಾಗ ಅದರಲ್ಲಿನ ಲಕ್ಷ್ಮೀತತ್ತ್ವಸಾರ ಇರುವುದು ಕಂಡು ಬರುತ್ತದೆ.

ಸಕ್ಕರೆ ತುಪ್ಪ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿ ರಂಗನ
ಚೊಕ್ಕಪುರಂದರ ವಿಠಲನ ರಾಣಿ॥

ಸಕ್ಕರೆಗೆ ಅಭಿಮಾನಿ ವಾಸುದೇವ. ತುಪ್ಪಕ್ಕೆ ಅಭಿಮಾನಿ ಲಕ್ಷ್ಮೀ ಗೋವಿಂದ. ಹಾಗೇ ತುಪ್ಪಕ್ಕೆ ಮೂಲ ಹಾಲು, ಸಕ್ಕರೆಗೆ ಮೂಲ ಕಬ್ಬು, ಸಕ್ಕರೆಯ ಕಾಲುವೆ ತುಪ್ಪದ ಕಾಲುವೆ ಹರಿಯುವುದೆಂದರೆ ಅದು ಸುಭಿಕ್ಷವಾದ ಕಾಲ. ಕ್ಷಾಮ ಬರಗಾಲ ಬಡತನಗಳನ್ನು ದೂರಮಾಡಿ ಸಮೃದ್ಧಿಯನ್ನು ದಯಪಾಲಿಸುವಳು ಎಂಬುದು ದಾಸರ ನಂಬಿಕೆ.

ಗೋಪಾಲದಾಸರ "ಸಕಲ ಆಪತ್ವಾರಿಣಿ" ಎಂಬ ಕೃತಿಯಲ್ಲಿ -

ಈ ಪರಿ ಹರಿಯ ದಯಾಪಾತ್ರಳೆ  ಶುಭ
ನೂಪುರಾದಿ ಸುಖಲಾಪೆ  ಶೋಭಿತೆ ಭ್ರೂ
ಚಾಪ ಚಲನದಿಂದಾ ಪವಮಾನನಿ
ಗೆ ಪದದೇ ಭವತಾಪಗಳಳಿದು ॥

ಎಂಬುದರಲ್ಲಿ ಕಾರುಣ್ಯ ಮೂರ್ತಿಯಾದ ಲಕ್ಷ್ಮೀದೇವಿಯು ಧನುಸ್ಸಿನಂತೆ ಬಾಗಿರುವ ತನ್ನ ಹುಬ್ಬಿನ ಚಲನ ಮಾತ್ರದಿಂದ ಜೀವೋತ್ತಮರಾದ ವಾಯು ದೇವರಿಗೆ ವಾಯು ಪದವಿಯನ್ನೂ, ಬ್ರಹ್ಮನಿಗೆ ಬ್ರಹ್ಮ ಪದವಿಯನ್ನೂ ನೀಡುವಳು. ಅಲ್ಲದೆ ಅವರಿಗೆ ಸಂಸಾರ ದುಃಖಗಳ ಸ್ಪರ್ಶವೇ ಇಲ್ಲದಂತೆ ಇಡುವುದೆ ಆಕೆಯ ತತ್ತ್ವ ಎಂಬುದೇ ಗೋಪಾಲದಾಸರ ಅಭಿಪ್ರಾಯ. ಈ ದಾಸ

ರದೇ ಮತ್ತೊಂದು ಕೃತಿಯಲ್ಲಿ ಮಹಾಲಕ್ಷ್ಮಿಯು ತನ್ನ ಪತಿಯಾದ ಶ್ರೀಹರಿಯ ಭೋಜನಕ್ಕೆ ಅಡಿಗೆಯನ್ನು ಸಿದ್ಧ ಪಡಿಸುವ ಪರಿಯನ್ನು ಈ ರೀತಿ ನಿರೂಪಿಸಿದ್ದಾರೆ.

ಶ್ರೀ ಮಹಾಲಕ್ಷ್ಮಿ ಮಾತೆ ತ್ರಿಭುವನ ಜನನಿ ॥ಪ॥
ಗುಣತ್ರಯಾತ್ಮಕ ಚೂಲಿಯನ್ನು ಅಲಂಕರಿಸಿ
ವನಜಭವಾಂಡ ಪಾತ್ರಿ ಅದರಲಿ ನಿಲಿಸೀ
ಗಣನೆ ಇಲ್ಲದ ಜೀವ ಧಾನ್ಯ ತುಂಬಿರಿಸಿ

ಜನರ ಯೋಗ್ಯತೆ ಉದಕವನಲ್ಲಿ ಬೆರೆಸಿ
ಮಿನುಗುವ ಕರ್ಮ ಇಂಧನ ಕಾಲವೆ ಮಹ
ಅನಳ ಜನರ ಸಾಧನ ದರ್ವೀಯಲಿಂದ
ಇನಿತು ಪಾಕವ ಮಾಡಿ ಘನ ಮಹಿಮನ ಭೋ
ಜನಕನುಕೂಲ ಮಾಡದೆ ವನರುಹನಯನೆ ॥


ಸತ್ವ, ರಜ, ತಮ ಎಂಬ ಮೂರು ಗುಣಗಳನ್ನೇ ಒಲೆಯಾಗಿಸಿ ಬ್ರಹ್ಮಾಂಡವೆಂಬ ಪಾತ್ರೆಯಲ್ಲಿ ಪರಮಾತ್ಮನೇ ಸೃಷ್ಟಿಸಿದ ಸಕಲ ಜೀವರಾಶಿಗಳನ್ನು ಧಾನ್ಯವನ್ನಾಗಿಸಿ ಜನರ ಯೋಗ್ಯತೆಯನ್ನು ನೀರನ್ನಾಗ ಮಾಡಿದಳು. ಸಕಲ ಜೀವಿಗಳೂ ಮಾಡಿದ ಕರ್ಮಗಳನ್ನು ಬೆಂಕಿಯನ್ನಾಗಿಸಿ ಮುಕ್ತಿ ಯೋಗ್ಯರ ಸಾಧನೆಯೆಂಬ ಸೌಟಿನಿಂದ ಪಾಕವನ್ನು ತಯಾರಿಸಿದಳು. ಇದು ಶ್ರೀಮನ್ನಾರಾಯಣನು ಪ್ರಳಯ ಕಾಲದಲ್ಲಿ ಮಾಡತಕ್ಕ ಭೋಜನಕ್ಕೆ ಸಿದ್ಧ ಪಡಿಸಿದ ಅಡುಗೆಯನ್ನು ದಾಸರು ಈ ರೀತಿಯಾಗಿ ನಿರೂಪಿಸಿದ್ದಾರೆ.

ವಿದ್ಯಾಪ್ರಸನ್ನತೀರ್ಥರು "ಕವಳಾ ತಾಯಿ ಕವಳ ಅಮ್ಮ" ಎಂಬ ಕೀರ್ತನೆಯಲ್ಲಿ ಶ್ರೀಹರಿಯ ಪ್ರಸಾದ ಬೇಕಾದಲ್ಲಿ ಲಕ್ಷ್ಮೀದೇವಿಯ ಅನುಗ್ರಹಬೇಕು. ಉದರ ಪೋಷಣೆಗೆ ಬೇಕಾದದು ಅನ್ನ. ಶ್ರೀಹರಿಗೆ 'ಅನ್ನ' ಎಂಬ ಹೆಸರೂ ಇದೆ. ಅನ್ನರಸವೂ ಸೇರಿದಂತೆ ಎಲ್ಲಾ ಸ್ಥೂಲಸ್ಥಾವರಕ್ಕೂ ಅಭಿಮಾನಿ ಲಕ್ಷ್ಮೀದೇವಿ.

ಲಕ್ಷ್ಮೀದೇವಿಯು ತನ್ನ ಆರಾಧಕರಾದ ಭಕ್ತರ ಆಧ್ಯಾತ್ಮಿಕ, ಆದಿದೈವಿಕ ಆದಿಭೌತಿಕಗಳೆಂಬ ಮೂರು ತಾಪಗಳನ್ನು ಸಂಪೂರ್ಣವಾಗಿ ಹಾಗೂ ಶಾಶ್ವತವಾಗಿ ಪರಿಹಾರ ಮಾಡುವಳು. ತನ್ನ ಭಕ್ತರನ್ನು ಸದಾ ಕಾಲ ಧರ್ಮಮಾರ್ಗದಲ್ಲಿ ಪ್ರೇರಿಸಿ ಪುಣ್ಯ ಭಾಜನರನ್ನಾಗಿ ಮಾಡಿ ಮುಕ್ತಿಯನ್ನು ಕೊಟ್ಟು ರಕ್ಷಿಸುವಳು. ಜ್ಞಾನಭಕ್ತ್ಯಾದಿ ಗುಣಗಳಿಂದ ಎಲ್ಲರಿಗಿಂತಲೂ ಉತ್ತಮಳೆನಿಸಿರುವಳು. ಸೀತಾ,ರುಕ್ಮಿಣಿ,ಸತ್ಯಭಾಮಾದಿ ರೂಪಗಳುಳ್ಳವಳು.ಸಕಲ ದೇವತಾ ಸ್ತ್ರೀಯರಿಂದಲೂ ಸೇವಿಲ್ಪಡುವಳು.ಹರಿದ್ವೇಷಿಗಳಿಗೆ ದುಃಖದಾಯಕಳಾಗಿ ಇರುವವಳು.

ತತ್ತ್ವಜ್ಞಾನ ಸಂಪಾದನೆಗಿಂತ ಮಿಗಿಲಾದ ಮತ್ತೊಂದು ಕರ್ತವ್ಯವಿಲ್ಲ ಎಂಬುದು ಮಧ್ವ ಸಂದೇಶವಾಗಿದೆ.

"ಜ್ಞಾನ ಭಕ್ತಿಗಳೇ ಸಕಲ ಕರ್ಮಗಳಿಗೂ ಮುಖ್ಯ"





# ತುಪ್ಪದ ದೀಪ ಹಚ್ಚಿ

– ಹನುಮಂತ ಮ. ದೇಶಕುಲಕರ್ಣಿ

94803 64915

ದೀಪ ಎಂದರೆ ಶಾಂತಿ, ದೀಪ ಎಂದರೆ ಸಮೃದ್ಧಿ, ದೀಪ ಎಂದರೆ ಬೆಳಕು, ದೀಪ ಎಂದರೆ ಆರೋಗ್ಯ, ದೀಪ ಎಂದರೆ ಸಂಪತ್ತು, ದೀಪ ಎಂದರೆ ಪ್ರಖರತೆ. ಹೀಗೆ ದೀಪ ಜೀವನದ ಒಂದು ಸಕಾರಾತ್ಮಕ ಬೆಳವಣಿಗೆ. ಇಂಥಹ ದೀಪವನ್ನು ಬೆಳಗಿಸುವುದು ದಿನವೂ ನಿಮ್ಮ ಜೀವನಕ್ಕೊಂದು ಸಂತೋಷ, ನೆಮ್ಮದಿ, ಶಾಂತಿಯನ್ನು ತರಬಲ್ಲುದು.

"ಶುಭಂ ಕರೋತಿ ಕಲ್ಯಾಣಃ ಆರೋಗ್ಯಮ್ ಧನ ಸಂಪಧಃ ಶತ್ರುಬುದ್ಧಿ ವಿನಾಶಾಯ ದೀಪಂಜ್ಯೋತಿ ನಮೋಸ್ತುತೆ ಜನಾರ್ಧನಃ ದೀಪೋ ಹರತಿ ಪಾಪಾನಿ ಸಂಧ್ಯಾ ದೀಪಂ ನಮೋಸ್ತುತೆ" ಒಂದು ಕಡೆ ಹಸುವಿನ ತುಪ್ಪದಿಂದ, ಮತ್ತೊಂದು ಕಡೆ ಎಳ್ಳಿನ ಎಣ್ಣೆಯಿಂದ ದೀಪಾರಾಧನೆ ಮಾಡಿದರೆ ಶ್ರೇಷ್ಠವಾದುದು. ಹಸುವಿನ ತುಪ್ಪದಲ್ಲಿ ಸೂರ್ಯನ ಶಕ್ತಿ ಹೆಚ್ಚಾಗಿರುತ್ತದೆ. ಇದರಿಂದ ಆರೋಗ್ಯ, ಐಶ್ವರ್ಯ, ಸುಖ ಮತ್ತು ಸಂತೋಷ ಪ್ರಾಪ್ತಿಯಾಗುತ್ತದೆ.

ಹಸುವಿನ ತುಪ್ಪದಲ್ಲಿ ಎರಡು ಚಮಚ ಬೇವಿನ ಎಣ್ಣೆಯನ್ನು ಬೆರೆಸಿ ಪರಶಿವನಾದ ಶಿವನ ಮುಂದೆ ದೀಪಾರಾಧನೆ ಮಾಡಿದರೆ ಯಾವುದೇ ಕೆಲಸದಲ್ಲಾದರೂ ವಿಜಯ ಸಿಗುತ್ತದೆ. ತುಪ್ಪದ ದೀಪಗಳನ್ನು ಸುಬ್ರಹ್ಮಣ್ಯ ಸ್ವಾಮಿ, ಸರ್ಪ ದೇವತೆಗಳ ಮುಂದೆ ಹಚ್ಚಿದರೆ, ಆ ಕುಟುಂಬದವರಿಗೆ ಎಂದೂ ಸರ್ಪದೋಷಗಳು ಬರುವುದಿಲ್ಲ. ಮಹಾಗಣಪತಿಗೆ 21 ದಿನ ತುಪ್ಪದ ದೀಪ ಹಚ್ಚಿದರೆ ನೆನೆದ ಕಾರ್ಯಗಳು ನೆರವೇರುತ್ತವೆ. ದೇವಿ ದೇವಾಲಯಗಳಲ್ಲಿ ಮಂಗಳವಾರ ಮತ್ತು ಶುಕ್ರವಾರ ತುಪ್ಪದ ದೀಪ ಹಚ್ಚಿ ಪ್ರಾರ್ಥಿಸಿದರೆ ಕುಜದೋಷ ನಿವಾರಣೆಯಾಗುತ್ತದೆ.

ಶ್ರೀಚಕ್ರ ದೇವತೆಗಳಿಗೆ, ಗಾಯತ್ರೀದೇವಿಗೆ, ಕಾಮಾಕ್ಷಿ ದೇವಿಗೆ, ಮೀನಾಕ್ಷಿ ದೇವಿ, ತ್ರಿಪುರಸುಂದರಿದೇವಿ. ಇತ್ಯಾದಿ ದೇವತೆಗಳಿಗೆ ತುಪ್ಪದ ದೀಪ ಹಚ್ಚಿದರೆ ನೆನೆದ ಕಾರ್ಯಗಳು ಕ್ಷಿಪ್ರವಾಗಿ ನೆರವೇರುತ್ತವೆ.

ಶ್ರೀರಾಮನವಮಿ ದಿವಸ ಶ್ರೀರಾಮಚಂದ್ರ ದೇವರಿಗೆ ತುಪ್ಪದ ದೀಪ ಹಚ್ಚಿ ಯಾರು ಪೂಜಿಸುತ್ತಾರೋ, ಅವರ ಮನೆಯಲ್ಲಿ ಅಣ್ಣ ತಮ್ಮಂದಿರ ಕಲಹಗಳು ಇರುವುದಿಲ್ಲ. ಶ್ರೀ ಕೃಷ್ಣಾಷ್ಟಮಿ ದಿವಸ ಶ್ರೀಕೃಷ್ಣನಿಗೆ ತುಪ್ಪದ ದೀಪ ಹಚ್ಚಿ, ಶ್ರೀ ಕೃಷ್ಣ ಯಾರು ವಿಷ್ಣು ಸಹಸ್ರನಾಮ ಹೇಳುತ್ತಾರೋ, ಅವರಿಗೆ ಪುತ್ರ ಸಂತಾನವಾಗುತ್ತದೆ.

ಕೊಬ್ಬರಿ ಎಣ್ಣೆಯಿಂದ ಅರ್ಧನಾರೀಶ್ವರ ದೇವರಿಗೆ ದೀಪಾರಾಧನೆ ಮಾಡುವುದರಿಂದ ಜೀವನದಲ್ಲಿ ದಂಪತಿಗಳಲ್ಲಿ ಅನ್ಯೋನ್ಯತೆ ಹೆಚ್ಚುತ್ತದೆ. ಗಣೇಶ ದೇವರ ಮುಂದೆ ಕೊಬ್ಬರಿ ಎಣ್ಣೆಯಿಂದ ದೀಪಾರಾಧನೆ ಮಾಡಿದರೆ ಕಷ್ಟಗಳು ದೂರಾಗುತ್ತವೆ. ಎಳ್ಳಿನ ಎಣ್ಣೆಯನ್ನು ಸಕಲ ದೇವರುಗಳು ಇಷ್ಟ ಪಡುತ್ತಾರೆ. ಕೆಟ್ಟ ಫಲಿತಾಂಶಗಳನ್ನು ದೂರ ಮಾಡಿ ಸಕಲ ಶುಭವನ್ನು ತಂದು ಕೊಡುತ್ತವೆ. ಯಾರಿಗೆ ಸಂತಾನ ಭಾಗ್ಯ ಇರುವುದಿಲ್ಲವೋ, ಅಂಥವರು ಶ್ರೀಷಷ್ಠೀ ದೇವತೆ ಪೂಜೆ ಮಾಡಿ ತುಪ್ಪದ ದೀಪ ಹಚ್ಚಿ, ಷೋಡಶೋಪಚಾರ ಪೂಜೆ ಮಾಡಿ, ಭಕ್ತಿಯಿಂದ ಪ್ರಸಾದ ಸ್ವೀಕರಿಸಿದರೆ, ದೈವ ಸಂಕಲ್ಪದಿಂದ ಸಂತಾನ ಭಾಗ್ಯವಾಗುತ್ತದೆ.

ಇಷ್ಟದೇವತೆ ಮತ್ತು ಕುಲದೇವತೆಯ ಮುಂದೆ ಯಾರು ತುಪ್ಪದ ದೀಪ ಹಚ್ಚಿ ಪೂಜಿಸುತ್ತಾರೋ, ಅವರ ಮನೆಯು ಉತ್ತರೋತ್ತರ ಅಭಿವೃದ್ಧಿಯಾಗುತ್ತದೆ.

ನವರಾತ್ರಿ ಸಮಯದಲ್ಲಿ ದೇವಿಗೆ ತುಪ್ಪದ ದೀಪ ಹಚ್ಚಿ ಯಾರು ಪೂಜಿಸುತ್ತಾರೋ, ಅವರಿಗಿರುವ ಸಕಲ ಶತ್ರುಕಾಟವು ನಿವಾರಣೆಯಾಗುತ್ತದೆ. ಸಕಲ ದುಃಖಗಳಿಂದ ಬಿಡುಗಡೆ ಹೊಂದುತ್ತಾರೆ.



# ಕೊಲ್ಲಾಪುರದ ಅಧಿದೇವತೆ ಶ್ರೀಮಹಾಲಕ್ಷ್ಮೀ

ಕೊಲ್ಲಾಪುರದ (ಕರವೀರ) ಕ್ಷೇತ್ರದ ಶ್ರೀಮಹಾ ಲಕ್ಷ್ಮೀಯು ಶಿವಶಕ್ತಿಪೀಠಸ್ಥಾನವಾಗಿ ವಿಷ್ಣು ಪತ್ನೀ ಲಕ್ಷ್ಮೀಯಾಗಿ ನೆಲೆ ನಿಂತಿದ್ದಾಳೆ. ಕ್ಷೇತ್ರಕ್ಕೆ ಕರವೀರ ಎಂದು ಇನ್ನೊಂದು ಹೆಸರಿದ್ದು-ಇಲ್ಲಿ ಕರವೀರ ನಿವಾಸಿನೀ ಮಹಾಲಕ್ಷ್ಮೀಯಾಗಿ ನೆಲೆ ನಿಂತಿದ್ದಾಳೆ.

**ಶಿವಶಕ್ತಿ ಪೀಠಸ್ಥಾನದ ಉಗಮ :**

ದಕ್ಷಯಜ್ಞದ ಸಂದರ್ಭದಲ್ಲಿ ಶಿವಪತ್ನಿ ಮಹಾಗೌರಿ ದಕ್ಷನಿಂದ ಅಪಮಾನಹೊಂದಿ. ಅವಳು ಯೋಗಾಗ್ನೀಯಲ್ಲಿ ತನ್ನ ದೇಹತ್ಯಾಗ ಮಾಡುತ್ತಾಳೆ. ಇದನ್ನು ತಿಳಿದ ಶಿವ ಕ್ರೋಧನಾಗಿ ದಕ್ಷಯಜ್ಞ ವಿಧ್ವಂಸಗೊಳಿಸಿ, ಸತಿಯ ದಗ್ಧ ದೇಹವನ್ನು ತನ್ನ ಭುಜದ ಮೇಲೆ ಹೊತ್ತು ಅಲೆಯತೊಡಗುತ್ತಾನೆ. ಶಿವನ ಈ ವಿಶ್ವರೂಪ ಅವಸ್ಥೆಯನ್ನು ನೋಡಿ ವಿಷ್ಣುವು ತನ್ನ ಸುದರ್ಶನ ಚಕ್ರದಿಂದ ಸತಿಯ ದೇಹವನ್ನು ಛಿದ್ರಗೊಳಿಸುತ್ತಾನೆ. ಅವು ಚದುರಿ ಹೋಗಿ ಅಲ್ಲಲ್ಲಿ ಭೂಮಿಯಲ್ಲಿ ಬಿದ್ದು ಅವು ಮಹಾ ಶಕ್ತಿ ಪೀಠವಾಗಿ ರೂಪ ಹೊಂದುತ್ತದೆ. ಅವು 108 ಶಕ್ತಿ ಪೀಠ ಸ್ಥಾನವೆಂದು ಗುರುತಿಸಲಾಗಿದೆ. ಅದರೊಳಗೆ 51 ಶಕ್ತಿ ಪೀಠಗಳು ಮಹತ್ವದ್ದು. ಅದರೊಳಗೆ ಈ ಕೊಲ್ಲಾಪುರದ ಕರವೀರ ಕ್ಷೇತ್ರದಲ್ಲಿ ಸತಿಯ ತ್ರಿನೇತ್ರ ಬಿದ್ದ ಉಲ್ಲೇಖವಿದೆ. ಅವಳು ಇಲ್ಲಿ ಮಹಿಷಾಮರ್ದಿನಿ ಎನಿಸಿದ್ದಾಳೆ. ಶಿವನ ರೂಪವಾಗಿ ಕ್ರೋಧೀಶ ಎಂಬ ಹೆಸರಿನ ಭೈರವನಿದ್ದಾನೆ. ದೇವಿ ಭಾಗವತದಲ್ಲಿ ಪೀಠದ ಮಹಾ ಶಕ್ತಿಯ 12 ಸ್ಥಾನದ ವರ್ಣನೆಯಲ್ಲಿ 'ಕರವೀರ ಮಹಾಲಕ್ಷ್ಮೀ' ಎಂಬ ಉಲ್ಲೇಖವಿದೆ.

**ಇನ್ನೊಂದು ಕತೆಯಂತೆ ವಿಷ್ಣುಪತ್ನಿ ಲಕ್ಷ್ಮೀಸ್ಥಾನ :**

ಭಾಗವತದ ಕಥೆಯ ಪ್ರಕಾರ ಸರ್ವ ದೇವರಲ್ಲಿ ಅತಿಶ್ರೇಷ್ಠ ದೇವರಾರು ಎಂದು ತಿಳಿಯಲು ಭೃಗು ಮಹರ್ಷಿಯು ಅನೇಕ ಲೋಕ ಭ್ರಮಣಿಸಿ ವೈಕುಂಠ ತಲುಪಿದ ಮಹಾವಿಷ್ಣುವು ಶೇಷಶಾಯಿಯಾಗಿ ಲಕ್ಷ್ಮೀಯಿಂದ ಸೇವಿಸಲ್ಪಡುತ್ತಿದ್ದನು. ಆಗ ಕುಪಿತಗೊಂಡ ಮಹರ್ಷಿಯು ಕಾಲಿನಿಂದ ವಿಷ್ಣುವಿನ ವೃಕ್ಷಸ್ಥಲಕ್ಕೆ ಒದ್ದನು. ಈ ಘಟನೆಯಿಂದ ಲಕ್ಷ್ಮೀಯು ಅಪಮಾನಗೊಂಡು ಅತ್ಯಂತ ದುಃಖಿತಳಾದಳು.

"ಮದಾಲಿಂಗಸ್ಥಲೇ ದೇವ ಪಾದೇನೈವ ಜಗತ್ಪತೇ
ಕರವೀರ ಪುರಂ ದಿವ್ಯಂ ಗಚ್ಛಾಮಿ ಗರುಡಧ್ವಜ ",

ಹೇ! ವಿಷ್ಣುವೇ, ನಾಥನೇ. ನನ್ನ ಆಲಿಂಗನಸ್ಥಾನದ ನನ್ನ ಪ್ರೀತಿ ಸ್ಥಾನವನ್ನು ಈ ಮಹರ್ಷಿಯು ಅವಮಾನಿಸಿದ್ದಾನೆ. ಆದ್ದರಿಂದ ನಾನು ವೈಕುಂಠ ತ್ಯಜಿಸಿ ಕರವೀರಪುರಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿ ಕರವೀರಕ್ಕೆ ಬಂದಳು. ಅವಳ ಹಿಂದೆಯೇ ಮಹಾಲಕ್ಷ್ಮಿಯನ್ನು ಒಲಿಸಲು ಮಹಾವಿಷ್ಣುವು ಕರವೀರ ಕ್ಷೇತ್ರಕ್ಕೆ ಬಂದನು. ಇಲ್ಲಿ ಹತ್ತು ವರ್ಷ ತಪಸ್ಸಿನ ನಂತರ ದೇವಿಯ ಆಜ್ಞೆಯಂತೆ ಭೋಗ ಗಿರಿಯಲ್ಲಿ ಹನ್ನೆರಡು ವರ್ಷ ತಪಾಚರಣೆಯ ನಂತರ ಪದ್ಮಾವಾಸೀ ತೀರ್ಥದಲ್ಲಿ ಶ್ರೀಲಕ್ಷ್ಮಿಯ ಸಹವಾಸವಾಯಿತು. ಅಂದರೆ ಅವಳ ದುಃಖ, ಕೋಪ, ತಾಪ ಶಮನವಾಯಿತು ಎಂದರ್ಥ.ಆದ್ದರಿಂದ ಕರವೀರಕ್ಷೇತ್ರದಲ್ಲಿ ಪರಬ್ರಹ್ಮಶಕ್ತಿಯ ಅವತಾರ ಸ್ಥಾನ, ದಕ್ಷತನಯಾ ಮಹಾಗೌರೀ ತ್ರಿನೇತ್ರ ಪೀಠಸ್ಥಾನ ಮತ್ತು ವಿಷ್ಣುಪತ್ನಿ ಅರ್ಥಾತ್ ಕಮಲಾಲಯೆಯ ಮಹಾ ವಿದ್ಯಾಸ್ಥಾನವು ಇದ್ದು ಇದು ಕರವೀರ ಕ್ಷೇತ್ರದ ವೈಶಿಷ್ಟ್ಯ ಪೂರ್ಣ ವಿಷಯ :-

**ಕೊಲ್ಲಾಪುರ ಹೆಸರಿನ ಉಗಮ :**

ಶ್ರೀಮಹಾಲಕ್ಷ್ಮಿಯು ಕೊಲಾಸುರ ಎಂಬ ರಾಕ್ಷಸನನ್ನು ವಧಿಸಿದ್ದಳು. ಅವನ ಜೀವಿತಾ

- ವೇದ ವಿದ್ವಾನ್ . ಶಿವರಾಮ
ಜೋಗಳೇಕರ
8275180641











ವಧಿಯ ಕಾಲದಲ್ಲಿ ಕೊಟ್ಟವರದಂತೆ ಅವನ ಹೆಸರಿನಲ್ಲೆ ಈ ಕ್ಷೇತ್ರವನ್ನು ಹೆಸರಿಸಿದ್ದಳು. ಕಾಲಾನಂತರದಲ್ಲಿ-ಕೊಲಾಸುರ=ಕೊಲಾಪುರ=ಕೊಲ್ಹಾಪುರ ಎಂದಾಗಿದೆ. ಆಗಿನಿಂದಲೇ ಕರವೀರ ಎಂಬ ಹೆಸರು ಇದೆ ಎಂಬುದು ಒಂದು ವಾದವಿದೆ. ಕಾಶೀ ಖಂಡದಲ್ಲಿ ಈ ಕ್ಷೇತ್ರಕ್ಕೆ 'ದಕ್ಷಿಣ ಕಾಶೀ' ಎಂದು ವರ್ಣಿಸಿದ್ದು ಅನೇಕ ಪುರಾಣಗಳಲ್ಲಿ ಇವಳಿಗೆ 'ಮಹಾಮಾತೃಕ ಪೀಠ', ಎನ್ನಲಾಗಿದೆ.

ಈ ಕ್ಷೇತ್ರದ ಮುಖ್ಯ ನದೀ ಪಂಚಗಂಗಾ - ಪಾಪನಾಶನಾರ್ಥಕ್ಕಾಗಿ ಈ ನದಿಯನ್ನು ಕಶ್ಯಪಾದಿ ಮುನಿಗಳು ಮಹತ್ ಪ್ರಯಾಸದಿಂದ ಇಲ್ಲಿಗೆ ತಂದರು.

ಮಹಾರಾಷ್ಟ್ರದಲ್ಲಿ ಆದಿಮಾಯೆಯ ಆದಿಶಕ್ತಿಯ-ಮೂರುವರೆ ಶಕ್ತಿಪೀಠವು ಬಹಳ ಮಹತ್ವವಿದ್ದು - ಅದು ಬಹಳ ಪ್ರಸಿದ್ಧವಿದೆ. ಅದರೊಳಗೆ 1 ನೇ ಶಕ್ತಿಪೀಠ ಕೊಲ್ಹಾಪುರದ ಮಹಾಲಕ್ಷ್ಮೀ 2.ತುಳಜಾಪುರದ - ತುಳಜಾಭವಾನಿ, 3.ಮಾಹೂರಗಡದ ರೇಣುಕಾ ಇವು ಮೂರು ಪೂರ್ಣ ಪೀಠವೆನಿಸಿದ್ದು "ವಣೀ" ಎಂಬಲ್ಲಿ ಸಪ್ತಶೃಂಗಿಯ ಅರ್ಧಪೀಠವೆನಿಸಿದೆ.

**ಮಹಾಲಕ್ಷ್ಮೀ ಅಂಬಾಬಾಯೀ :**

ಅವಳಿಗೇ ಇಲ್ಲಿ ಜಗದಂಬಾ ಎಂತಲೂ ವಿಶ್ವದನಾಥ - ವಿಶ್ವನಾಥ ಶಿವ ಈ ಜಗತ್ತಿಗೆ ಪಿತಾ, ಈ ಮಹಾಸತಿಯನ್ನು ಅಂಬಾ (ಗೌರೀ) ಜಗತ್ - ಅಂಬಾ, (ಜಗತ್ತಿಗೆ ತಾಯಿ) ಜಗದಂಬಾ ಅಥವಾ ಅಂಬಾಬಾಯೀ ಎನ್ನುತ್ತಾರೆ. ಜಗದಂಬಾ - ಅಥವಾ ಅಂಬಾಬಾಯೀ ಇದು ಮಹಾಲಕ್ಷ್ಮೀಯ ಪರ್ಯಾಯ ನಾಮಗಳು -

**ಅಂಬಾಬಾಯೀ ವ್ಯಾಖ್ಯೆ -**

ಜಗದಂಬಾ ಎಂಬ ಶಬ್ದವು ಕಾಲಾನುರೂಪವಾಗಿ - ಜಗತ್ ಎಂಬ ಶಬ್ದವು ಹೋಗಿ ಅಂಬಾ ಎಂಬ ಶಬ್ದವು ರೂಢವಾಯಿತು. ಈ ಶಬ್ದಕ್ಕೆ ಸ್ತ್ರೀ ದೇವತೆಯ ವಾಚಕ ಶಬ್ದವಾದ 'ಬಾಯೀ' ಎಂಬ ಶಬ್ದವು ಜೋಡಿಸಲ್ಪಟ್ಟು 'ಅಂಬಾಬಾಯೀ' ಎಂದು ಸ್ಥಾನಿಕವಾಗಿ ಹೆಸರಾಯಿತು ಎಂಬುದು ಊಹಿಸಬಹುದಾಗಿದೆ.



## ಮಹಾಲಕ್ಷ್ಮೀಯ ಪ್ರಾಚೀನತೆ ಮತ್ತು ಶಿಲಾಲೇಖ

ಕ್ರಿ.ಶ. - 9 ನೇ ಶತಮಾನದಿಂದ 13 ನೇ ಶತಕದ ಕೊನೆಯ ತನಕ 4 ಶತಕಗಳ ಕಾಲ ದಕ್ಷಿಣ ಭಾರತದಲ್ಲಿ ವಿವಿಧ ರಾಜವಂಶರು ಆಳಿಹೋದರು. ಅದರೊಳಗೆ ರಾಷ್ಟ್ರ ಕೂಟರು, ಕದಂಬ, ಶಿಲಾಹಾರರೆಂಬ, ಚಾಲುಕ್ಯ ರಾಜ್ಯ ಕರ್ತೃರುಗಳು, ಕರವೀರಕ್ಷೇತ್ರದ ಮಹಾಲಕ್ಷ್ಮೀಯಲ್ಲಿ ತುಂಬಾ ಶ್ರದ್ಧೆಯಿಟ್ಟಿದ್ದರು ಎಂದು ತಿಳಿದು ಬರುತ್ತದೆ. ಒಂದು ಸಂಶೋಧನೆಯ ಪ್ರಕಾರ - 980 ರ ಶಿಲಾಹಾರ ರಾಜನಿಂದ ಪ್ರಕಟಿಸಿದ ತಾಮ್ರಪಟ ಮತ್ತು ರಾಷ್ಟ್ರಕೂಟರ 1 ನೇ ರಾಜಾ ಅಮೋಘ ವರ್ಷನು 793 ರ ಇಸ್ವಿಯ, ಮತ್ತು 871 ಇ. ತಾಮ್ರಪಟ ಈಗಿನ ಮುಂಬಯಿ ಬಳಿಯ ಠಾಣೆ ಜಿಲ್ಲೆಯ ಸಜಾಣ ಎಂಬ ಊರಲ್ಲಿ ಸಿಕ್ಕಿದ್ದು ಇವೆರಡೂ ಸೂಕ್ಷ್ಮ ತುಂಬಾ ಪ್ರಾಚೀನ ಎನ್ನಲಾಗಿದೆ. 980 ರ ಇಸ್ವಿಯ ಶಿಲಾಹಾರ ತಾಮ್ರ ಪಟದಲ್ಲಿ ಕೊಲ್ಹಾಪುರದ ಉಲ್ಲೇಖವಿದೆ. ಅದರಂತೆ ಗೋಮಂತಕೀಯ ಕದಂಬ ಮನೆತನದ ಪ್ರಥಮ ಪೃಷ್ಠರಾಜನು ಕೊಲ್ಹಾಪುರಕ್ಕೆ ಬಂದು ಮಹಾಲಕ್ಷ್ಮೀಯನ್ನು ಆರಾಧಿಸಿದ್ದು ಆ ಸಂದರ್ಭ ಮಾರಶೆಲ್ಲಾ ತಾಮ್ರಪಟದಲ್ಲಿ ಕಾಣಸಿಗುತ್ತದೆ. ಚಾಲುಕ್ಯರಾಜ ಜಯಸಿಂಹ (ದ್ವಿತೀಯ) ಇಸ್ವಿ 1024 ರ ಮಿರಜ ತಾಮ್ರಪಟದಲ್ಲಿ ಕೊಲ್ಹಾಪುರ ಎಂಬ ಉಲ್ಲೇಖ ಕಾಣಸಿಗುತ್ತದೆ. ಅಜಮಾಸು 11-12 ರ ಶತಕದ ವಿಕ್ರಮಾದಿತ್ಯ 1143 ರ ತಾಮ್ರ ಪಟದಲ್ಲಿ "ಮಹಾಲಕ್ಷ್ಮಿ ಲಬ್ಧವರಪ್ರಸಾದ" ಎಂಬ ಅಭಿಮಾನದ ಬಿರುದುಗಳನ್ನು ಕಾಣ ಸಿಗುತ್ತದೆ.

ಕ್ರಿ.ಶ. - 1266 ರ ಈಗಿನ ನವಗ್ರಹ ಮಂಟಪದ ಶಿಲಾಲೇಖದಲ್ಲಿ "ಕೊಲ್ಹಾಪುರ ಮಹಾಲಕ್ಷ್ಮೀಚ್ಯಾ ಸ್ಥಳಾ" ಎಂಬ ಪಂಚಮಮಠ ಹೆಸರಿನ ಮಠ ಎಂದು ಉಲ್ಲೇಖಿಸಿದೆ. 1288 ರ ರಾಮಚಂದ್ರ ಯಾದವರ ಶಿಲಾಲೇಖದಲ್ಲಿ ಕೊಲ್ಹಾಪುರ ಎಂಬ ಉಲ್ಲೇಖ, ಯಾದವ ರಾಜನ ಶಕ್ಕೆ 1172 ರ ಶಿಲಾಲೇಖದಲ್ಲಿ ಕೊಲ್ಹಾಪುರದ 'ಉಲ್ಲೇಖ ಸಿಕ್ಕಿದ್ದು, ಆಗಿಂದಲೆ ಅಧಿಕೃತವಾಗಿ ಇದು ಕೊಲ್ಹಾಪುರ ಎಂಬ ಹೆಸರಿನಿಂದ ಹೆಸರುವಾಸಿಯಾಗಿತ್ತು ಎಂದು ಊಹಿಸಬಹುದು. ನಾಮವ್ಯುತ್ಪತ್ತಿ ಪೌರಾಣಿಕ ಸಾಹಿತ್ಯದಲ್ಲಿ ನಾಮಾಂತರ ತ್ರಾಮಪಟ ಶಿಲಾಲೇಖನದ ಸಂದರ್ಭ ಇದರಿಂದ ಇದು ಉಪಾಸನೇಯ ಆದ್ಯ ಪೀಠವಾಗಿ ಮಹಾರಾಷ್ಟ್ರದ ಶಕ್ತಿಪೀಠ ಎನಿಸಿದೆ.

ಇಲ್ಲಿ ಬಹು ತೀರ್ಥಗಳಿಂದ ಆವೃತವಾಗಿದ್ದು ಮಹಾಕಾಳಿ, ಮಹಾ ಸರಸ್ವತೀ ಇತ್ಯಾದಿ ಬಹು ಗುಡಿಗಳಿವೆ. ಈ ಮಹಾಲಕ್ಷ್ಮೀ ಮಂದಿರವು ಹೆಮ್ಮಾಡಿ ಶೈಲಿಯಲಿದ್ದು, ಶ್ರೀಚಕ್ರಾಕಾರ ರಚನೆಯಲ್ಲಿದೆ. ಅಪೂರ್ವ ಸೌಂದರ್ಯ ಶಿಲ್ಪವನ್ನು ಇಲ್ಲಿ ಕಾಣಬಹುದು. ಇಲ್ಲಿ ಯಾತ್ರಾವಿಧಿ ಸಹಿತ, ತೀರ್ಥಸ್ನಾನ, - ತೀರ್ಥವಿಧಿಗಳನ್ನು ಮಾಡಬಹುದಾಗಿದೆ. ಇಲ್ಲಿ ಭಗವಾನ್ ದತ್ತಾತ್ರೇಯ ಗುರುಗಳ ಭಿಕ್ಷಾಸ್ಥಾನವಿದ್ದು ಶ್ರೀಭಗವಾನ್ ದತ್ತ ಗುರುಗಳು ಭಿಕ್ಷೆಗಾಗಿ ದಿನಂಪ್ರತಿ ಕರವೀರ ಕ್ಷೇತ್ರಕ್ಕೆ ಬರುತ್ತಾರೆ ಎಂಬುದು ಅತೀ ಪ್ರಾಚೀನ ನಂಬಿಕೆ ಇದೆ.







# ಕಾರ್ತೀಕ ದೀಪರಾಧನೆ

ಡಾ॥ ಸುಮನ ಬದರೀನಾಥ್
94820 94855



ಚಾಂದ್ರಮಾನ ಸಂವತ್ಸರವು ಚೈತ್ರಾದಿ ದ್ವಾದಶ ಮಾಸಗಳಿಂದ ಕೂಡಿದೆ. ಪ್ರತಿಯೊಂದು ಮಾಸಕ್ಕೂ ತನ್ನದೇ ಆದ ಮಹಿಮೆ,ಹಿರಿಮೆ,ಗರಿಮೆಗಳುಂಟು,ಇವುಗಳಲ್ಲಿ ಕಾರ್ತೀಕ ಮಾಸವು ಬಹು ಶ್ರೇಷ್ಠವೂ, ಶಿವಕೇಶವರಿಬ್ಬರಿಗೂ ಅತಿಶಯ ಪ್ರೀತಿಕರ ಮಾಸವೆನಿಸಿದೆ. ಕಾರ್ತೀಕ ಮಾಸ ಮಹಾತ್ಮೆಯು ಸ್ಕಾಂಧಪುರಾಣ,ಪದ್ಮಪುರಾಣ, ಬ್ರಹ್ಮಾಂಡ ಪುರಾಣ ಮುಂತಾದ ಪುರಾಣಗಳಲ್ಲಿ ವಿಶೇಷವಾಗಿ ವರ್ಣಿತವಾಗಿದೆ. ಕಾರ್ತೀಕ ಮಾಸ ಮಹಾತ್ಮೆ ಎಂಬ ಗ್ರಂಥವೂ ಇದೆ.

ನ ಕಾರ್ತೀಕ ಸಮೋಮಾಸಂ ನ ಕೃತೇನ ಸಮಂಯುಗಂ
ನ ವೇದ ಸದೃಶ್ಯಂ ಶಾಸ್ತ್ರಂ ನ ತೀರ್ಥಂ ಗಂಗಯಾ ಸಮಂ॥

ಎಂದು ಪುರಾಣೋಕ್ತಿಯಿದೆ. ಕಾರ್ತೀಕ ಮಾಸದಲ್ಲಿ ಕಾರ್ತೀಕಸ್ನಾನ, ತುಳಸೀ ಪೂಜೆ, ಧಾತ್ರೀಪೂಜೆ, ಭಾಗವತಾದಿ ಸದ್ಗ್ರಂಥಗಳ ಪಠಣ, ಶ್ರವಣಗಳೂ, ಅನೇಕ ವಿಧವಾದ ವ್ರತ ನಿಯಮಗಳೂ ಹೇಳಲ್ಪಟ್ಟಿವೆ.ಕಾರ್ತೀಕ ಮಾಸಮಹಾತ್ಮೆಯನ್ನು ಸ್ವತಃ ಬ್ರಹ್ಮದೇವರೇ ನಾರದರಿಗೆ ಉಪದೇಶಿಸಿದ್ದಾರೆ. ಸರ್ವ ತೀರ್ಥಗಳಲ್ಲಿ ಸ್ನಾನ ಮಾಡುವುದರಿಂದ,ಸಕಲ ದಾನಗಳನ್ನು ನೀಡುವುದರಿಂದ ಬರುವ ಪುಣ್ಯಕ್ಕಿಂತ ಅಧಿಕ ಪುಣ್ಯವು ಕಾರ್ತೀಕ ಮಾಸದಲ್ಲಿ ಮಾಡುವ ಸತ್ಕರ್ಮಗಳಿಂದ ದೊರೆಯುತ್ತದೆ.ಅಲ್ಪಪುಣ್ಯಕಾರ್ಯವನ್ನು ಮಾಡಿದರೂ ಅದು ಅಕ್ಷಯವಾಗುತ್ತದೆ. ಈ ವ್ರತ ನಿಯಮಗಳಲ್ಲಿ ಕಾರ್ತೀಕ ದೀಪಾರಾಧನೆಗೆ ವಿಶೇಷ ಪ್ರಾಶಸ್ತ್ಯವನ್ನು ನೀಡಲಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ದೀಪದ ಬೆಳಗುವಿಕೆಗೆ ವಿಶೇಷ ಮಹತ್ವವಿದೆ. ಪ್ರತಿಯೊಂದು ಶುಭ ಸಮಾರಂಭವೂ ಪೂಜಾದಿಗಳೂ ದೀಪ ಬೆಳಗುವಿಕೆಯಿಂದಲೇ ಪ್ರಾರಂಭಗೊಳ್ಳುತ್ತದೆ. ಉರಿಯುತ್ತಿರುವ ದೀಪವು ಜ್ಞಾನದ ಪ್ರಗತಿಯ ಶುಭದ ಸಂಪತ್ತು ಸಮೃದ್ಧಿಗಳ ಸಂಕೇತ. ಅದರಲ್ಲೂ ದೇವರ ಮುಂದೆ ಬೆಳಗುವ ದೀಪವು ಆಧ್ಯಾತ್ಮ ಪ್ರಗತಿಯ ಪ್ರತೀಕ. ಜ್ಞಾನವರ್ಧಕ, ಅಜ್ಞಾನದ ಕತ್ತಲೆಯನ್ನು ಕಳೆದು ಜ್ಞಾನದ ಬೆಳಕನ್ನು ನೀಡುವ ದೈವೀ ಸಂಕೇತ. ದೀಪ ಬೆಳಗುವಿಕೆ ಭಗವಂತನಿಗೆ ಅತಿಶಯ ಪ್ರೀತಿಕರವಾದುದು. ಕುಲದೇವರ ಮುಂದೆ ಬೆಳಗುವ ದೀಪವು ಕುಲವನ್ನೇ ಬೆಳಗಿ ವಂಶವನ್ನೇ ಕಾಪಾಡುತ್ತದೆ. ಸತ್ಸಂತಾನವನ್ನು ನೀಡುತ್ತದೆ.

ನಿಮಿಷಂ ನಿಮಿಷಾರ್ಧಂ ಘೃತ ದೀಪಂ ನಿವೇದಯೇತ್
ಕಲ್ಪ ಕೋಟಿ ಸಹಸ್ರಾಣಿ ವಿಷ್ಣು ಲೋಕೇ ಮಹೀಯತೇ॥

ಒಂದು ನಿಮಿಷವಾಗಲೀ, ಅರ್ಧನಿಮಿಷವಾಗಲೀ ದೇವರಿಗೆ ಅರ್ಪಿಸಿದ ದೀಪವು ಅನೇಕ ಕಲ್ಪಗಳವರೆಗೂ ವಿಷ್ಣು ಲೋಕದಲ್ಲಿ ಮೆರೆಯಲು ಕಾರಣವಾಗುವುದು.

ದೀಪದ ಸ್ತಂಭದಲ್ಲಿ 27 ನಕ್ಷತ್ರಾಭಿಮಾನಿ ದೇವತೆಗಳೂ, ನಾಳದಲ್ಲಿ ವಾಸುಕಿದೇವತೆ,ಪಾದದಲ್ಲಿ ಸೂರ್ಯ ಚಂದ್ರರು, ದೀಪ ಪಾತ್ರೆಯಲ್ಲಿ ಅಗ್ನಿದೇವತೆ ಇರುತ್ತಾರೆ.



ಇನ್ನೊಂದು ಪುರಾಣದ ಪ್ರಕಾರ ದೀಪದ ತುದಿಯಲ್ಲಿ ಲಕ್ಷ್ಮಿ, ಮಧ್ಯದಲ್ಲಿ ಶಾರದೆ, ಬುಡದಲ್ಲಿ ಗೌರಿ ಉಪಸ್ಥಿತರಿರುತ್ತಾರೆ. ಹೀಗಾಗಿ ದೀಪವು ದೇವತಾ ಸಾನ್ನಿಧ್ಯಮಯವಾದುದು. ಇಷ್ಟು ಮಹಿ ಮಾನ್ವಿತವಾದ ಶ್ರೇಷ್ಠವಾದ ದೀಪಗಳನ್ನು ಭಗವಂತನ ಮುಂದೆ ಬೆಳಗುವುದೇ ದೀಪಾರಾಧನೆ. ಕಾರ್ತೀಕ ಮಾಸವು ದೀಪಾರಾಧನೆಗೆ ಬಹು ಪ್ರಶಸ್ತವೂ ಮಹತ್ವದಾಯಕವೂ ಆದ ಮಾಸವಾಗಿದೆ.





ಕಾರ್ತೀಕ ದೀಪಾರಾಧನೆಯನ್ನು ಎರಡು ವಿಧವಾಗಿ ಆಚರಿಸಬಹುದು 1. ದೀಪಪ್ರಜ್ವಲನ, 2. ದೀಪದಾನ.

ಕಾರ್ತೀಕ ದೀಪ ಪ್ರಜ್ವಲನವನ್ನು ಸೂರ್ಯೋದಯಕ್ಕೆ ಮುನ್ನವೇ ಅಂದರೆ ನಕ್ಷತ್ರಗಳು ಇನ್ನೂ ಕಾಣುತ್ತಿರುವಾಗಲೇ, ಕತ್ತಲು ಇನ್ನೂ ಇರುವಂತೆಯೇ ಹಚ್ಚಬೇಕು. ಶುದ್ಧವಾಗಿ ಸ್ನಾನ ಮಾಡಿ, ಶುಚಿಯಾದ, ಒಗೆದ ವಸ್ತುಗಳನ್ನುಟ್ಟು, ದೇವರ ಮನೆಯಲ್ಲಿ ದೇವರ ಮುಂದೆ, ತುಳಸೀ ಬೃಂದಾವನದ ಮುಂದೆ ಅಥವಾ ದೇವಸ್ಥಾನಗಳಲ್ಲಿ ಹಚ್ಚಬೇಕು. ದೇವರ ದೀಪದಲ್ಲಿ ಭಗವಂತನ 13 ರೂಪಗಳಿರುತ್ತವೆ. ಬೆಳ್ಳಿಯ ಹಿತ್ತಾಳೆಯ ಅಥವಾ ಮಣ್ಣಿನ ಪ್ರಣತಿಗಳನ್ನು ದೀಪಾ ಹಚ್ಚಲು ಬಳಸಬಹುದು. ತುಪ್ಪ ಮತ್ತು ಎಳ್ಳೆಣ್ಣೆಗಳು ದೀಪಾ ಬೆಳಗಲು ಶ್ರೇಷ್ಠ. ಅವಿಲ್ಲದಿದ್ದರೆ ಕಡಲೆ ಕಾಯಿಎಣ್ಣೆ ಬಳಸಬಹುದು. ನಂತರ ದೇವರಿಗೆ ನಮ ಸ್ಕರಿಸಿ ದೀಪ ಪ್ರಜ್ವಲನವನ್ನು ಅರ್ಪಿಸಬೇಕು.

## ಕಾರ್ತೀಕ ದೀಪ ಹಚ್ಚುವ ವಿಧಾನಗಳು:

### ನಕ್ಷತ್ರ ದೀಪ :

ಸೂರ್ಯೋದಯಕ್ಕೆ ಮುನ್ನವೇ ನಕ್ಷತ್ರಗಳಿರುವಂತೆಯೇ 33 ಸಂಖ್ಯಾಕವಾಗಿ ದೀಪಗಳನ್ನು ಹಚ್ಚಬೇಕು. ನಕ್ಷತ್ರಗಳು ಇರುವ ಸಮಯದಲ್ಲೇ ಇದನ್ನು ಹಚ್ಚುವುದರಿಂದ ನಕ್ಷತ್ರದೀಪ ಎಂದು ಕರೆಯುತ್ತಾರೆ. ಈ 33 ದೀಪಗಳಿಗೆ 27 ನಕ್ಷತ್ರಗಳೂ, ಸೂರ್ಯಚಂದ್ರರೂ, ಲಕ್ಷ್ಮೀನಾರಾಯಣರೂ, ಶಿವಪಾರ್ವತಿಯರೂ ಅಭಿಮಾನಿ ದೇವತೆಗಳಾಗಿರುತ್ತಾರೆ. ಕತ್ತಲಿನಲ್ಲಿ ಹಚ್ಚಿದ ಈ ದೀಪಗಳು ನಕ್ಷತ್ರಗಳಂತೆಯೇ ಪ್ರಕಾಶಮಾನವಾಗಿ ಹೊಳೆಯುತ್ತವೆ. ಹೀಗೆ ಹಚ್ಚಿದರೆ 30 ದಿನಗಳಲ್ಲಿ ಸಹಸ್ರ ಸಂಖ್ಯಾಕವಾಗಿ ದೀಪಗಳನ್ನು ಹಚ್ಚಿದಂತಾಗುತ್ತದೆ. ಸಾಮಾನ್ಯವಾಗಿ ತುಳಸೀ ಬೃಂದಾವನದ ಮುಂದೆ ಹಚ್ಚುತ್ತಾರೆ.

### ಹೆಚ್ಚುದೀಪ :

ದೀಪ ಸಂಖ್ಯೆಯನ್ನು ಪ್ರತಿದಿನವೂ ಹೆಚ್ಚಿಸುತ್ತಾ ಹೋಗುವುದು. ಕಾರ್ತೀಕ ಪಾಡ್ಯದ ದಿನ ಎರಡು ದೀಪ, ಬಿದಿಗೆ 4, ತದಿಗೆ 6 ಹೀಗೆ ಹುಣ್ಣಿಮೆಯ ತನಕ ದಿನಕ್ಕೆ ಎರಡು ದೀಪಗಳಂತೆ ಹೆಚ್ಚಿಸುತ್ತಾ ಹೋಗುವುದು, ಹುಣ್ಣಿಮೆಯಂದು 30 ದೀಪಗಳನ್ನು ಹಚ್ಚುವುದು. ಮಾರನೆಯ ದಿನವೂ 30 ದೀಪಗಳನ್ನು ಹಚ್ಚಿ ಬಿದಿಗೆಯಿಂದ ದಿನಕ್ಕೆ ಎರಡು ದೀಪಗಳನ್ನು ಕಡಿಮೆ ಮಾಡುತ್ತಾ ಬಂದು ಅಮಾವಾಸ್ಯೆಯಂದು 2 ದೀಪ ಹಚ್ಚುವುದು. ನಂತರ ವ್ರತವನ್ನು ದೇವರಿಗೆ ಅರ್ಪಿಸುವುದು.

### ಸಂಧ್ಯಾದೀಪ ವ್ರತ :

ಸಾಯಂಕಾಲದ ಹೊತ್ತು ಕತ್ತಲಾಗುತ್ತಿದ್ದಂತೆಯೇ ದೇವರ ಮುಂದೆ ಒಂದು ಮಣೆ ಅಥವಾ ಪೀಠವನ್ನಿಟ್ಟು ಅದರ ಮೇಲೆ ಉದ್ದವಾದ ಎರಡು ದೀಪದ ಕಂಭಗಳಲ್ಲಿ ದೀಪ ಹಚ್ಚಿಟ್ಟು ಅವು



ಗಳನ್ನು ಅರಶಿನ, ಕುಂಕುಮ, ಅಕ್ಷತೆ, ಪುಷ್ಪಗಳಿಂದ ಪೂಜಿಸಿ ದೀಪಲಕ್ಷ್ಮೀ ಸ್ತೋತ್ರವನ್ನು ಪಠಿಸಿ ನಮಸ್ಕರಿಸುವುದು.ಹಾಗೆಯೇ ಮನೆಯ ಬಾಗಿಲಿನ ಎರಡೂ ಬದಿಗಳಲ್ಲೂ, ಹಾಗೂ ತುಳಸಿಯ ಮುಂದೂ ಎರಡೆರಡು ದೀಪಗಳನ್ನು ಹುಚ್ಚುವುದು ಇದೇ ಸಂಧ್ಯಾದೀಪ ವ್ರತ.

**ಲಕ್ಷ ದೀಪ ವ್ರತ :**

ಲಕ್ಷ ಸಂಖ್ಯಾಕವಾಗಿ ದೀಪಗಳನ್ನು ಬೆಳಗುವುದು.ಇದನ್ನು ಒಂದು ತಿಂಗಳಿನಲ್ಲಿ ಪೂರ್ಣಗೊಳಿಸುವುದು ಕಷ್ಟಸಾಧ್ಯವಾದ ಕೆಲಸ, ಅದರಿಂದ ಆಷಾಢದಲ್ಲಿ ಪ್ರಾರಂಭಿಸಿ ಕಾರ್ತೀಕದಲ್ಲಿ ಸಂಪನ್ನಗೊಳಿಸಬಹುದು ಅಥವಾ ಕಾರ್ತೀಕದಲ್ಲಿ ಪ್ರಾರಂಭಿಸಿ ಮಾಘದಲ್ಲಿ ಸಂಪನ್ನಗೊಳಿಸಬಹುದು.ಲಕ್ಷದೀಪ ವ್ರತವನ್ನು ಆಚರಿಸುವ ಸುಲಭ ವಿಧಾನವೊಂದಿದೆ. ಒಂದು ಬತ್ತಿಯಲ್ಲಿ ನೂರು ಎಳೆಗಳಿರುವಂತೆ ಬತ್ತಿಗಳನ್ನು ಎಳೆತೆಗೆದು ತಯಾರಿಸಿ ಅಂತಹ ಬತ್ತಿಗಳನ್ನು ದಿನವೂ 33 ದೀಪಗಳಂತೆ 30 ದಿನ ಹಚ್ಚಿದರೆ ಲಕ್ಷದೀಪ ಹಚ್ಚಿದಂತಾಗುತ್ತದೆ.

**ನಿತ್ಯದೀಪವ್ರತ:**

ಇವಾವುವೂ ಸಾಧ್ಯವಿಲ್ಲದಿದ್ದರೆ 5, 9,12 ಹೀಗೆ ಒಂದು ಸಂಖ್ಯೆಯನ್ನು ನಿರ್ಧರಿಸಿ ಅಷ್ಟು ದೀಪಗಳನ್ನು ದಿನವೂ ಹಚ್ಚಬಹುದು. ಇದು ನಿತ್ಯದೀಪ ವ್ರತ. ಅಥವಾ ಕಾರ್ತೀಕ ಹುಣ್ಣಿಮೆಯಂದು 108 ದೀಪಗಳನ್ನು ಹಚ್ಚಿ ದೇವರಿಗೆ ಅರ್ಪಿಸಬಹುದು.

ದೀಪ ಪ್ರಜ್ವಲನಕ್ಕೆ ಸಹಕರಿಸುವುದೂ ಪುಣ್ಯದಾಯಕವೆಂದೇ ಹೇಳಲಾಗಿದೆ. ದೀಪ ಹಚ್ಚುವವರಿಗೆ ಎಣ್ಣೆ, ತುಪ್ಪ, ಬತ್ತಿ ಮತ್ತು ದೀಪಪಾತ್ರೆಗಳನ್ನು ಕೊಡುವುದು, ಉರಿಯುತ್ತಿರುವ ದೀಪಗಳನ್ನು ಮತ್ತಷ್ಟು ಪ್ರಜ್ವಲಗೊಳಿಸುವುದು ಅಥವಾ ಮತ್ತಾವುದೇ ರೀತಿಯಲ್ಲಿ ಉದಾಹರಣೆಗೆ ಬತ್ತಿ ಹಾಕಿ ಕೊಡುವುದು. ದೀಪ ಪಾತ್ರೆಗಳನ್ನು ಬೆಳಗಿ ಕೊಡುವುದು ಮುಂತಾದ ಕಾರ್ಯಗಳೂ ಪುಣ್ಯದಾಯಕವೆಂದೇ ಹೇಳಲಾಗಿದೆ.

ಈ ವ್ರತಗಳನ್ನು ಆಶ್ವೀಜ ಶುದ್ಧ ಹುಣ್ಣಿಮೆಯಂದು ಪ್ರಾರಂಭಿಸಿ ಕಾರ್ತೀಕ ಹುಣ್ಣಿಮೆಯಂದು ಮುಕ್ತಾಯಗೊಳಿಸುವುದು ಸಾಮಾನ್ಯರೂಢಿ ಅಥವಾ ಕಾರ್ತೀಕ ಪಾಡ್ಯದಂದು ಪ್ರಾರಂಭಿಸಿ ಮಾರ್ಗಶಿರ ಪಾಡ್ಯದಂದೂ ಮುಕ್ತಾಯಗೊಳಿಸಬಹುದು.

ಕಡೆಗೆ ದಿನವೂ ಹಚ್ಚುವ ದೀಪಗಳೊಂದಿಗೆ ಹೆಚ್ಚಾಗಿ ಎರಡು ದೀಪಗಳನ್ನಾದರೂ ಕಾರ್ತೀಕ ದಾಮೋದರನ ಪ್ರೀತ್ಯರ್ಥವಾಗಿ ಹಚ್ಚಬೇಕು. ಈ ದೀಪ ಬೆಳಗುವಿಕೆಯಿಂದ ಇಹದಲ್ಲಿ ಜೀವನ ದೀಪದ ಪ್ರಕಾಶದಂತೆ ಉಜ್ವಲವಾಗುತ್ತದೆ.ಪರದಲ್ಲಿ ಮೋಕ್ಷಮಾರ್ಗಕ್ಕೆ ಹೆದ್ದಾರಿಯಾಗುತ್ತದೆ. ಜ್ಞಾನ, ಭಕ್ತಿ,ವೈರಾಗ್ಯ ವರ್ಧನೆಗೂ ಕಾರಣವಾಗಿ ಭಗವಂತನ ಕೃಪೆಯನ್ನು ದೊರಕಿಸಿ ಕೊಡುತ್ತದೆ.

**ದೀಪದಾನ :**

ಕಾರ್ತೀಕ ಮಾಸದಲ್ಲಿ ನಿತ್ಯವೂ ದೀಪದಾನ ಮಾಡಬೇಕೆಂದೇ ಹೇಳಲಾಗಿದೆ. ಶ್ರೋತ್ರಿಯನಾದ, ಸದಾಚಾರ ಸಂಪನ್ನನಾದ ಬ್ರಾಹ್ಮಣನನ್ನು ಆಹ್ವಾನಿಸಿ ಅವನನ್ನು ಗಂಧ ಮಾಲ್ಯಾದಿಗಳಿಂದ ಸತ್ಕರಿಸಿ ದೀಪದಾನ ಮಾಡಬೇಕು. ಹಿತ್ತಾಳೆಯ ಅಥವಾ ಬೆಳ್ಳಿಯ ತಟ್ಟೆಯಲ್ಲಿ ಅಕ್ಕಿಯನ್ನು ತುಂಬಿ ಅದರಲ್ಲಿ ಹಿತ್ತಾಳೆಯ ಅಥವಾ ಬೆಳ್ಳಿಯ ಎರಡು ದೀಪಗಳನ್ನು ಹಚ್ಚಿಟ್ಟು ಸದಕ್ಷಿಣ , ಸತಾಂಬೂಲವಾಗಿ ಸಂಕಲ್ಪಪೂರ್ವಕವಾಗಿ ದಾನ ಮಾಡಬೇಕು.

ದೀಪಸ್ತಮೋ ನಾಶಯತಿ
ದೀಪಃ ಕಾಂತಿಂ ಪ್ರಯಚ್ಛತಿ
ತಸ್ಮಾತ್ ದೀಪ ಪ್ರದಾನೇನ
ಮಮ ವಂಶಃ ಪ್ರವರ್ಧತಾಂ॥

ಈ ಶ್ಲೋಕವನ್ನು ಹೇಳಿ ದೀಪದಾನ ಮಾಡಬೇಕು. ಕೆಲವರು ಬತ್ತಿ, ತುಪ್ಪ, ಎಣ್ಣೆ, ದೀಪಪಾತ್ರೆ ಮುಂತಾದುವನ್ನೂ ದಾನ ಮಾಡುತ್ತಾರೆ. ನಕ್ಷತ್ರ ದೀಪ ಹಚ್ಚುವವರು 33 ಸಂಖ್ಯೆಯ ದೀಪಗಳನ್ನು ದಾನ ಮಾಡುವ ಪದ್ಧತಿಯೂ ಉಂಟು. ಅವರವರ ಶಕ್ತ್ಯಾನುಸಾರವಾಗಿ ಲಕ್ಷ, ಸಹಸ್ರ, 108 ಮುಂತಾದ ಸಂಖ್ಯೆಯಲ್ಲಿ ದೀಪದಾನ ಮಾಡಬಹುದು. ಕಾರ್ತೀಕ ಮಾಸದಲ್ಲಿ ನಿತ್ಯವೂ ದೀಪ ದಾನ ಶಕ್ಯವಿಲ್ಲದಿದ್ದಾಗ ದ್ವಾದಶಿ ಮತ್ತು ಹುಣ್ಣಿಮೆಯಂದಾದರೂ,ಕಡೆಗೆ ಒಂದು ದಿನವಾದರೂ ದೀಪದಾನ ಮಾಡಬೇಕು.ಕಾರ್ತೀಕ ದೀಪದಾನದಿಂದ ಇಡೀ ವರ್ಷದಲ್ಲಿ ಮಾಡಿದ ಸರ್ವ ವ್ರತಾನುಷ್ಠಾನಗಳಲ್ಲಿ ಏನಾದರೂ ಕೊರತೆ ಲೋಪದೋಷಗಳಿದ್ದಲ್ಲಿ ಅದು ಪರಿಹಾರ

ವಾಗುವುದು. ದೀಪದಾನದಿಂದ ತೇಜಸ್ಸು ಕಾಂತಿ ಬರುತ್ತದೆ. ಸೂರ್ಯೋದಯ ವಾದೊಡನೆ ಕತ್ತಲೆಯು ಓಡಿಹೋಗುವಂತೆ ಎಲ್ಲ ಪಾಪಗಳೂ ನಾಶವಾಗುತ್ತವೆ. ವಂಶಾಭಿವೃದ್ಧಿಯಾಗುತ್ತದೆ. ದೀಪ ದಾನ ಮತ್ತು ದೀಪ ಪ್ರಜ್ವಲನದ ಮಹಿಮೆಯನ್ನು ಅದಾರು ವರ್ಣಿಸಬಲ್ಲರು! ಇದೀಗ ಎಲ್ಲೆಡೆಗಳಲ್ಲೂ ಲಕ್ಷದೀಪೋತ್ಸವ ವಿಜೃಂಭಣೆ ಯಿಂದ ನಡೆಯುತ್ತದೆ. ಆಗ ಅಂತಹ ಉತ್ಸವಗಳಲ್ಲಿ ಪಾಲ್ಗೊಳ್ಳಬಹುದು.ಯಥಾಶಕ್ತಿ ಯಥಾಯೋಗ್ಯತೆ ದೀಪ ಪ್ರಜ್ವಲನ, ದೀಪದಾನಗಳನ್ನು ಆಚರಿಸಬಹುದು.

**ದೀಪ ಲಕ್ಷ್ಮೀ ಪೂಜೆ :**

ಹೆಂಗಳೆಯರು ಸಂಜೆಯ ಸಮಯದಲ್ಲಿ ಅದರಲ್ಲೂ ಗೋಧೂಳಿ ಲಗ್ನದಲ್ಲಿ ಉದ್ಭವವಾದ ಎರಡು ದೀಪದ ಕಂಭಗಳಲ್ಲಿ ದೀಪ ಹತ್ತಿಸಿ, ಅದಕ್ಕೆ ಅರಶಿನ ಕುಂಕುಮ ಪೂಜಿಸಿ ಸ್ತೋತ್ರಗಳನ್ನು ಪಠಿಸಿ ನಮಸ್ಕರಿಸಿದರೆ ಲಕ್ಷ್ಮೀಕಟಾಕ್ಷಕ್ಕೆ ಪಾತ್ರ ರಾಗುವರು. ಶುಕ್ರವಾರದ ದಿನ, ಪೂರ್ಣಿಮೆಯಂದು ಅದರಲ್ಲೂ ವಿಶೇಷವಾಗಿ ಕಾರ್ತೀಕ ಶುಕ್ಲಪಕ್ಷ ಪೌರ್ಣಿಮೆಯ ದಿನ ದೇವರ ಸನ್ನಿಧಿಯಲ್ಲಿ ಅಷ್ಟದಳ ಪದ್ಮದ ರಂಗವಲ್ಲಿ ಹಾಕಿ ಅದರ ಮೇಲೆ ಒಂದು ಪೀಠವನ್ನಿಟ್ಟು ಅದರ ಮೇಲೂ 2 ಅಷ್ಟದಳ ಪದ್ಮಗಳನ್ನು ಬರೆದು, ಆ ಪದ್ಮಗಳ ಮೇಲೆ ಐದು ಬತ್ತಿಗಳನ್ನು ಹತ್ತಿಸಬಹುದಾದ ಐದು ಮೂತಿಯ ಬೆಳ್ಳಿಯ ಅಥವಾ ಹಿತ್ತಾಳೆಯ ಎರಡು ದೀಪಸ್ತಂಭಗಳನ್ನಿಟ್ಟು ಹೂಮಾಲೆ ಗಳಿಂದ ಅಲಂಕರಿಸಿ ಅರಶಿನ, ಕುಂಕುಮ ಹಚ್ಚಿ ದೀಪಗಳನ್ನು ಬೆಳಗಬೇಕು. ಜ್ಯೋತಿ ಪ್ರಜ್ವಲಿತವಾದ ಆ ದೀಪಸ್ತಂಭವೇ ಲಕ್ಷ್ಮೀನಾರಾಯಣ ಸ್ವರೂಪವೆಂದು ಭಾವಿಸಿ ಅದಕ್ಕೆ ಹರಿದ್ರಾಕುಂಕುಮ ಪುಷ್ಪಗಳನ್ನು ಪೂಜಿಸಿ ಶಕ್ತ್ಯಾನುಸಾರ ನೈವೇದ್ಯ ವನ್ನರ್ಪಿಸಿ, ಪ್ರದಕ್ಷಿಣೆ ನಮಸ್ಕಾರ ಮಾಡಿ ಸ್ತೋತ್ರಗಳನ್ನು ಪಠಿಸಬೇಕು. ಇದೇ ದೀಪಲಕ್ಷ್ಮೀ ಪೂಜೆ, ಕನ್ಯೆಯರು ಮಾಡಿದರೆ ಉತ್ತಮ ಪತಿ ದೊರೆಯುವನು. ಸುಮಂಗಲಿಯರು ಮಾಡಿದರೆ ಸತ್ಸಂತಾನ ಪ್ರಾಪ್ತಿ, ಸೌಮಂಗಲ್ಯವರ್ಧನೆ, ಲಕ್ಷ್ಮೀ ಕಟಾಕ್ಷ ಉಂಟಾಗುತ್ತದೆ. ಈ ದೀಪೋತ್ಸವದಿಂದ ಮನೆ ತುಂಬ ಲಕ್ಷ್ಮೀನಾರಾಯಣರ ಸಾನ್ನಿಧ್ಯ ಉಂಟಾಗುತ್ತದೆ. ಈ ವ್ರತ ಸರ್ವಾಭೀಷ್ಟ ಫಲಪ್ರದವಾದುದು.ದೀಪದ ಕೆಳಗಿನ ಪೀಠವೇ ಕ್ಷೀರಾಬ್ಧಿ, ಕಂಭವೇ ತಾವರೆಹೂವಿನದಂಟು, ಬಟ್ಟಲೇ ತಾವರೆ ಹೂ, ಬೆಳಗುತ್ತಿರುವ ದೀಪವೇ ಲಕ್ಷ್ಮೀದೇವಿ. ದೀಪಲಕ್ಷ್ಮಿಯನ್ನು ಸಾಕ್ಷಿಯಾಗಿಟ್ಟು ಕೊಂಡು ದೇವರ ಕೈಂಕರ್ಯ ಮಾಡಿದರೆ ದೇವಿಯು ಅದನ್ನೆಲ್ಲಾ ದೇವರಿಗೆ ನಮ್ಮ ಪರವಾಗಿ ತಿಳಿಯ ಪಡಿಸುತ್ತಾಳೆ. ಆದ್ದರಿಂದ ಎಲ್ಲಾ ಶುಭ ಕಾರ್ಯಗಳಲ್ಲೂ ದೀಪ ಜ್ಯೋತಿಯನ್ನು ಸಾಕ್ಷಿಯಾಗಿಟ್ಟುಕೊಳ್ಳಬೇಕು. ದೇವಪೂಜಾ ಪ್ರಾರಂಭದಲ್ಲಿ ಮೊದಲು ದೀಪವನ್ನು ಬೆಳಗಬೇಕು. ಹಚ್ಚಿದೊಡನೆ ಅವುಗಳಿಗೆ ಅರಶಿನ,ಕುಂಕುಮ ಹಚ್ಚಿ ದೀಪಲಕ್ಷ್ಮಿ ನಮಃ ಎಂದು ಹೇಳಿ ಕೈ ಮುಗಿಯಬೇಕು, ಇದೇ ದೀಪಲಕ್ಷ್ಮಿ ಪೂಜೆ.

**ದೀಪಲಕ್ಷ್ಮೀ ಸ್ತೋತ್ರ**

ದೀಪ ಸ್ತ್ವಮೇವ ಜಗತಾಂ ದಯಿತಾ ರುಚಿಸ್ತೇ

ದೀರ್ಘಂ ತಮಂ ಪ್ರತಿ ನಿವರ್ತ್ಯಮಿದಂ ಯುವಾಭ್ಯಾಂ

ಸ್ತವ್ಯಂ ಸ್ತವ ಪ್ರಿಯಮತಃಶರಣೋಕ್ತಿ ವಶ್ಯಂ

ಸ್ತೋತುಂ ಭವಂತ ಮಖಿಲಕೃತಿ ಜಂತುರೇಷಃ

ದೀಪಃ ಪಾಪ ಹರೋ ನೃಣಂ ದೀಪಂ ಆಪನ್ನಿವಾರಕಃ

ದೀಪೋ ವಿಧತ್ತೇ ಸುಕೃತಂ



ದೀಪಃ ಸಂಪತ್ಪ್ರದಾಯಕಃ

ದೇವಾನಾಂ ತುಷ್ಟಿದೋ

ಪಿತೃಣಾಂ ಪ್ರೀತಿದಾಯಕಃ॥

ದೀಪ ಜ್ಯೋತಿ ಃ ಪರಂ

ಬ್ರಹ್ಮ ದೀಪಜ್ಯೋತಿ ಜನಾರ್ಧನಃ

ದೀಪೋ ಹರತು ಮೇ ಪಾಪಂ

ಸಂಧ್ಯಾದೀಪ ನಮೋಸ್ತುತೇ॥

ಶುಭಂ ಕುರುಷ್ಟ ಕಲ್ಯಾಣಂ

ಆರೋಗ್ಯಂ ಸುಖಸಂಪದಂ

ಮಮ ಬುದ್ಧಿ ಪ್ರಕಾಶಂ ಚ

ದೀಪಜ್ಯೋತಿ ರ್ನಮೋಸ್ತುತೇ ॥

ಹೀಗೆ ವಿಧವಿಧವಾಗಿ ಕಾರ್ತೀಕ ದೀಪ ಪ್ರಜ್ವಲನವನ್ನೂ, ದೀಪದಾನ ವನ್ನೂ ಆಚರಿಸಬಹುದು.ಕಾರ್ತೀಕ ಮಾಸ ಶಿವಕೇಶವರಿಬ್ಬರಿಗೂ ಪ್ರಿಯವಾದ ಮಾಸ. ದೀಪ ಬೆಳಗುವಿಕೆ ಇಬ್ಬರಿಗೂ ಅತಿ ಶಯವಾಗಿ ಪ್ರೀತಿಕರವಾದುದು. ಇಂತಹ ಶ್ರೇಷ್ಠವಾದ ಮಾಸವನ್ನು ವ್ಯರ್ಥವಾಗಿ ಕಳೆಯದೆ ಶಕ್ತ್ಯಾನುಸಾರ ದೀಪಾರಾಧನೆ ಯನ್ನು ಮಾಡಿ ಸಾಧಕರು ಪುಣ್ಯ ಭಾಜನ ರಾಗಲು ಪ್ರಯತ್ನಿಸಬೇಕು.



# ಬಾಗೂರಿನ ವೇಣು ಗೋಪಾಲಸ್ವಾಮಿ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886



24

**ಕರ್ನಾಟಕದ ವೈಷ್ಣವ ದೇವಾಲಯಗಳು**

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾ, ಬಾಗೂರು ಒಂದು ಪ್ರಾಚೀನ ಗ್ರಾಮ, ಹತ್ತನೆಯ ಶತಮಾನದ ಶಾಸನದಲ್ಲಿ ಬಾಗಿಯೂರು, ಹೊಯ್ಸಳರ ಕಾಲದಲ್ಲಿ ಬಾಗೂರು - 12 ಹಾಗೂ ವಿಜಯನಗರೋತ್ತರ ಕಾಲದಲ್ಲಿ ಆಣಿ ಬಾಗೂರು ಎಂಬ ಹೆಸರುಗಳಿದ್ದವು.

ಬಾಗೂರಿನಲ್ಲಿ ಮಾವಿನ ಹೂಗಳು ತುಂಬಿದ ಮರಗಳಿಂದಲೂ, ದೊಡ್ಡಕೆರೆ ಹಾಗೂ ಅದರ ಸುತ್ತಲೂ ಎಲ್ಲೆಲ್ಲೂ ಸುವಾಸನೆಯುಕ್ತ ಸಂಪಿಗೆ ಮರಗಳು, ಮುಂತಾದ ವೃಕ್ಷಗಳಿಂದಲೂ ಕಂಗೊಳಿಸುತ್ತಿತ್ತೆಂದು ಹಾಗೂ ಅಲ್ಲಿ ಇಂಪಾದ ಕೋಗಿಲೆಯ ನಾದವು ಸದಾ ಕೇಳಿಸುತ್ತೆಂದು ಹೊಯ್ಸಳರ ಕಾಲದ ಒಂದು ಶಾಸನದಲ್ಲಿ ಬಣ್ಣಿಸಲಾಗಿದೆ. ಬಾಗೂರು 12 ಎಂಬ ಪ್ರದೇಶಕ್ಕೆ ಬಾಗೂರು ಒಂದು ಆಡಳಿತ ಕೇಂದ್ರವಾಗಿತ್ತು.

ಬಾಗೂರಿನಲ್ಲಿ ಶ್ರೀವೇಣುಗೋಪಾಲಸ್ವಾಮಿ, ಶ್ರೀನಾಗೇಶ್ವರ ಹಾಗೂ ಶ್ರೀಮಾರುತಿ ದೇವಾಲಯಗಳಿವೆ.

## ಶ್ರೀ ವೇಣುಗೋಪಾಲ ದೇವಾಲಯ....

ಬಾಗೂರಿನ ಊರ ನಡುವೆ ಇರುವ ವೇಣುಗೋಪಾಲ ದೇವಾಲಯ ಬಾಗೂರಿಗೆ ಬರುವ ಪ್ರವಾಸಿಗರಿಗೆ ಪ್ರಮುಖ ಆಕರ್ಷಣೆ ಆಗಿದೆ. ದೇವಾಲಯವು ಎತ್ತರವಾದ ದಿಣ್ಣೆಯ ಮೇಲಿದ್ದು, ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಹಾಗೂ ಸುತ್ತಲೂ ಎತ್ತರವಾದ ಪ್ರಾಕಾರವನ್ನು ಹೊಂದಿರುವ ಬೃಹತ್ ರಚನೆಯಾಗಿದೆ.

ಈ ದೇವಾಲಯದ ಗರ್ಭಗುಡಿಯಲ್ಲಿ ಅತ್ಯಂತ ಮನೋಹರ ವಾದ ವೇಣುಗೋಪಾಲನ ಮೂರ್ತಿಯಿದೆ. ಕ್ರಿ.ಶ. 1650 ರಲ್ಲಿ ಮೈಸೂರು ರಾಜ ಕಂಠೀರವ ನರಸಿಂಹರಾಜ ಒಡೆಯರ ಕಾಲದಲ್ಲಿ ಕೊಟ್ಟೂರಾಯನೆಂಬ ಪ್ರಾಂತ್ಯಾಧಿಕಾರಿಯು ನವರಂಗ, ಪಡಸಾಲೆ ಹಾಗೂ ಪ್ರಾಕಾರಗಳನ್ನು ಕಟ್ಟಿಸಿರುತ್ತಾನೆ.

ಬಾಗೂರಿನ ವೇಣುಗೋಪಾಲ ದೇವಾಲಯವು ಸುಮಾರು ಹದಿನಾರನೆಯ ಶತಮಾನದ ಆಲಯವಾದರೂ,

ದೇವಾಲಯದ ಗರ್ಭಗುಡಿಯಲ್ಲಿರುವ ಮೂರ್ತಿ ಹೊಯ್ಸಳರ ಕಾಲಕ್ಕೆ ಸೇರುತ್ತದೆ. ಸುಮಾರು ಐದು ಅಡಿ ಎತ್ತರವಿರುವ ವೇಣು ಗೋಪಾಲನು ತ್ರಿಭಂಗಿಯಲ್ಲಿದ್ದು ನಯನ ಮನೋಹರ ವಾಗಿರುವುದಲ್ಲದೆ ಗೋಪಾಲನು ಕೊಳಲು ನುಡಿಸುತ್ತಿರುವ ಭಂಗಿಯೂ ಸಹ ಮೋಹಕವಾಗಿದೆ. ಕಿರೀಟ ಮಕುಟವನ್ನು ಧರಿಸಿರುವ ಸ್ವಾಮಿಯು ಸೂಕ್ಷ್ಮ ಕೆತ್ತನೆಗಳಿಂದ ಕೂಡಿರುವನು. ದೇವನು ಧರಿಸಿರುವ ಕಂಠಾಭರಣ, ವೈಜಂತಿಮಾಲೆ, ಉಪವೀತ, ಕೇಯೂರ, ಮೇಕಲಾ, ಕಾಲ್ಕಡಗ, ಕೊಳಲು, ಕೈಬೆರಳುಗಳಲ್ಲಿರುವ ಆಭರಣಗಳು ಅತ್ಯಂತ ಕಲಾತ್ಮಕವಾಗಿವೆ. ಮದನಗೋಪಾಲನ ಮುರಳಿಯ ನಾದಕ್ಕೆ ಮನಸೋತು ದೇವನ ಇಕ್ಕೆಲಗಳಲ್ಲಿರುವ ಗೋವುಗಳು, ಗೋಪಿಕೆ, ಗೋಪಾಲಕರು ತಲ್ಲೀನರಾಗಿರುವಂತೆ ನೈಜವಾಗಿ ಚಿತ್ರಸಲಾಗಿದೆ. ಒಟ್ಟಿನಲ್ಲಿ ಬಾಗೂರಿನ ವೇಣುಗೋಪಾಲ ಸ್ವಾಮಿಯನ್ನು ನೋಡಿದೊಡನೆ ಒಮ್ಮೆಲೆ ಪುರಂದರದಾಸರ ಕೀರ್ತನೆ "ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ ಗೋಪಿ ಜನಪ್ರಿಯ ಗೋಪಾಲಗಲ್ಲದೆ" ಎಂಬ ದಾಸವಾಣಿ ನೆನೆಪಾಗುತ್ತದೆ.

ಈ ದೇವಾಲಯದಲ್ಲಿ ಮಹಾಲಕ್ಷ್ಮಿಗೆ ಪ್ರತ್ಯೇಕ ಗುಡಿಯಿದೆ. ಗರ್ಭಗುಡಿಯಲ್ಲಿರುವ ಲಕ್ಷ್ಮೀದೇವಿಯು ಆಸೀನ ಭಂಗಿಯಲ್ಲಿದ್ದು ತನ್ನ ಮೇಲಿನ ಎರಡೂ ಕೈಗಳಲ್ಲಿ ಕಮಲವನ್ನು ಹಿಡಿದಿರುವಳು ಹಾಗೂ ಕೆಳ ಕೈಗಳು ಅಭಯ, ವರದ ಹಸ್ತಗಳಲ್ಲಿದೆ. ದೇವಿಯ ಮುಖಾರ ವಿಂದವು ಬಹಳ ಆಕರ್ಷಕವಾಗಿದೆ.

ಬಾಗೂರಿನ ವೇಣುಗೋಪಾಲಸ್ವಾಮಿಗೆ ಗೋಕುಲಾಷ್ಟಮಿ, ಉತ್ಥಾನದ್ವಾದಶಿ, ಕಾರ್ತಿಕಮಾಸ, ಸಂಕ್ರಾಂತಿ ಮುಂತಾದ ದಿನ ಗಳಲ್ಲಿ ವಿಶೇಷ ಸೇವಾಕೈಂಕರ್ಯವು ಜರುಗುವುದು.

ಬಾಗೂರನ್ನು ಪ್ರವೇಶಿಸಿದೊಡನೆ ನಮಗೆ ಮೊದಲು ಸಿಗುವುದು ಆಂಜನೇಯ ದೇವಾಲಯ ವೇಣುಗೋಪಾಲಸ್ವಾಮಿಯ ಗುಡಿಗೆ ನೇರವಾಗಿ ಪಶ್ಚಿಮ ದಿಕ್ಕಿನಲ್ಲಿರುವ ಮಾರುತಿಯನ್ನು ಹೆಬ್ಬಾಗಿಲು ಆಂಜನೇಯ ಎಂದು ಕರೆಯುವರು. ಬಾಗೂರಿನ ಊರ ಹೊರಗೆ ಕೆರೆಯಂಚಿನಲ್ಲಿ ಪೂರ್ವಾಭಿಮುಖವಾಗಿರುವ ನಾಗೇಶ್ವರ ದೇವಾಲಯವು ಕಾಲದ ದೃಷ್ಟಿಯಿಂದ ಬಾಗೂರಿನ ಇತರ ದೇವಾಲಯಕ್ಕಿಂತಲೂ ಪ್ರಾಚೀನವಾದುದು. ಗರ್ಭಗುಡಿ ಯಲ್ಲಿ ನಾಗೇಶ್ವರ ಲಿಂಗವು ನಾಲ್ಕು ಅಡಿ ಎತ್ತರವಿದೆ. ನವ ರಂಗ ದಲ್ಲಿರುವ ಗಣಪತಿಯ ಮೂರ್ತಿಯೂ ವಿಶೇಷವಾಗಿದೆ.

**ಈ ದೇವಾಲಯದಲ್ಲಿ ಮಹಾಲಕ್ಷ್ಮಿಗೆ ಪ್ರತ್ಯೇಕ ಗುಡಿಯಿದೆ. ಗರ್ಭಗುಡಿಯಲ್ಲಿರುವ ಲಕ್ಷ್ಮೀದೇವಿಯು ಆಸೀನ ಭಂಗಿಯಲ್ಲಿದ್ದು ತನ್ನ ಮೇಲಿನ ಎರಡೂ ಕೈಗಳಲ್ಲಿ ಕಮಲವನ್ನು ಹಿಡಿದಿರುವಳು ಹಾಗೂ ಕೆಳ ಕೈಗಳು ಅಭಯ, ವರದ ಹಸ್ತಗಳಲ್ಲಿದೆ. ದೇವಿಯ ಮುಖಾರ ವಿಂದವು ಬಹಳ ಆಕರ್ಷಕವಾಗಿದೆ.**



**ಹೀಗೆ ಬನ್ನಿ**

**ಹಾಸನಜಿಲ್ಲೆ, ಚನ್ನರಾಯಪಟ್ಟಣ ನಗರದಲ್ಲಿ ಹಾಸನ - ಬೆಂಗಳೂರು ರಸ್ತೆ ಯಲ್ಲಿಯೇ ಬಾಗೂರು ತಿರುವು ಸಿಗುವುದು, ಅಲ್ಲಿ ಬಲಕ್ಕೆ ತಿರುಗಿ ಗುಣಸಿಂದ, ಹರಳಳ್ಳಿ, ಕುರುವಂಕ ಮುಖಾಂತರ ಬಾಗೂರಿಗೆ ಬರಬಹುದು. ಬಾಗೂರಿನಿಂದ ಚನ್ನರಾಯ ಪಟ್ಟಣಕ್ಕೆ ಸುಮಾರು 12 ಕಿ.ಮೀ. ದೂರ ವಿರುತ್ತದೆ.**

**ಈ ತಿಂಗಳು ತಿರುಚಾನೂರು ಅಮ್ಮನವರ ಬ್ರಹ್ಮೋತ್ಸವದ ಪ್ರಯುಕ್ತ ವಿಶೇಷ ಸಂಚಿಕೆಯನ್ನು ನೀಡಲಾಗಿದೆ. ಆದ್ದರಿಂದ ಧಾರವಾಹಿಗಳನ್ನು ಪ್ರಕಟಿಸಲಾಗಲಿಲ್ಲ**

# ವೈಭವದ ಉತ್ಸವಗಳಲ್ಲಿ




**-ಶ್ರೀಮತಿ. ಬಿ. ಪದ್ಮಜ**

ಪುಣ್ಯಕ್ಷೇತ್ರವಾದ ತಿರುಚಾನೂರಿನಲ್ಲಿ ಪವಿತ್ರವಾದ ಪದ್ಮ ಸರೋವರದ ಪುಣ್ಯಜಲದ ನಡುವೆ ಸಹಸ್ರದಳಗಳನ್ನು ಹೊಂದಿದ್ದ ಬಂಗಾರದ ಪದ್ಮದಿಂದ ಉದ್ಭವಿಸಿದ ಅಲುಮೇಲುಮಂಗಮ್ಮನಿಗೆ ಪದ್ಮಾವತಿ ಎಂಬ ಹೆಸರಿನೊಂದಿಗೆ "ಸ್ವತಂತ್ರ ವೀರಲಕ್ಷ್ಮಿ" ಎಂಬ ಹೆಸರೂ ಪ್ರಸಿದ್ಧವಾಗಿದೆ. ತಿರುಚಾನೂರಿನಲ್ಲಿ ಶ್ರೀಮಹಾರಾಜ್ಞಿಯಾದ ಅಲುಮೇಲುಮಂಗಮ್ಮನಿಗೆ ಪಾಂಚರಾತ್ರಗಮ ಶಾಸ್ತ್ರದ ಪ್ರಕಾರ, "ಸ್ವತಂತ್ರ ವೀರ ಲಕ್ಷ್ಮ್ಯಾರಾಧನೆ" ಎಂಬ ಹೆಸರಿನಲ್ಲಿ ನಿತ್ಯಾರಾಧನೆ, ಉತ್ಸವಗಳು,ಮೆರವಣಿಗೆಗಳು, ವೈಭವದಿಂದ ನಡೆಯುತ್ತದೆ. ಆವಿಶಿಷ್ಟವಾದ ಸೇವೆಗಳ ಬಗೆಗೆ ತಿಳಿದು ಕೊಳ್ಳೋಣ.

**ನಿತ್ಯೋತ್ಸವಗಳು :**

ಪ್ರತಿ ದಿನವೂ ನಡೆಯುವ ಸೇವೆಗಳನ್ನು ನಿತ್ಯೋತ್ಸವಗಳೆನ್ನುತ್ತಾರೆ.

**ಅವುಗಳು:-**

**ಸುಪ್ರಭಾತಸೇವೆ:**

ವೇದಪಂಡಿತರು, ಆಧ್ಯಾತ್ಮಿಕ ತತ್ತ್ವ ವಿಶಾರದರು, ಪರಿಚಾರಕರು, ಅಧಿಕಾರಿಗಳು,ಅರ್ಚಕರು ಇತ್ಯಾದಿ ಪರಿವಾರದವರು ಪ್ರಾತಃಕಾಲದಲ್ಲೇ ಆಲಯದಲ್ಲಿ ನಡೆಯುವ ಸುಪ್ರಭಾತದೊಂದಿಗೆ ಆಲಯದ ದ್ವಾರಗಳನ್ನು ತೆರೆದು, ಒಳಗೆ ಪ್ರವೇಶಿ, ಅಮ್ಮನವರ ಧ್ಯಾನಮಾಡಿ,ವಿಶೇಷವಾದ ಉಪಚಾರಗಳನ್ನು ನಿರ್ವಹಿಸಿ, ಅಮ್ಮನವರನ್ನು ನಿದ್ದೆಯಿಂದ ಎಚ್ಚರಗೊಳಿಸುವ ಸೇವೆಯನ್ನು "ಸುಪ್ರಭಾತಸೇವೆ" ಎಂದು ಕರೆಯುತ್ತಾರೆ. ಈ ಸೇವೆಯಲ್ಲಿ ಅಮ್ಮನವರಿಗೆ ಹಾಲು, ಹಣ್ಣುಗಳನ್ನು ನೈವೇದ್ಯ ಮಾಡುತ್ತಾರೆ.

**ಸಹಸ್ರನಾಮಾರ್ಚನೆ:**

ಇದು ಭಗವತ್‌ಶಕ್ತಿ ದಿನವೂ ಅಭಿವೃದ್ಧಿಯಾಗುವುದಕ್ಕಾಗಿ ಮಾಡುವ ಪ್ರಮುಖವಾದ ಆರಾಧನೆ. ಇದನ್ನು ಆಗಮ ಶಾಸ್ತ್ರೋಕ್ತವಾಗಿ ನೆರವೇರಿಸುತ್ತಾರೆ. ಇದರಲ್ಲಿ ಅನೇಕ ಮಂಗಳಕರವಾದ ಔಷಧಿ ದ್ರವ್ಯಗಳು , ಪುಷ್ಪಗಳಿಂದ ಮೂಲಮೂರ್ತಿಯನ್ನು ಸಹಸ್ರನಾಮಗಳಿಂದ ಅರ್ಚಿಸುತ್ತಾರೆ. ಈ ಅರ್ಚನೆ ಲೋಕಕಲ್ಯಾಣಕ್ಕಾಗಿ ಸರ್ವಜನ ಸುಭಿಕ್ಷಾರ್ಥವಾಗಿ, ಸಮಸ್ತ ಸನ್ಮಂಗಳಕ್ಕಾಗಿ ನಡೆಯುತ್ತದೆ.

**ಪದ್ಮಾವತಿ ಪರಿಣಯ (ಕಲ್ಯಾಣೋತ್ಸವ)**

ಕಲ್ಯಾಣವೆಂದರೆ ಸಕಲ ಸಂಪತ್ತು ಎಂದರ್ಥ. ಆ ರೀತಿ ಭಕ್ತರ ಆಸೆಗಳನ್ನೆಲ್ಲಾ ಈಡೇರಿಸುವ ಕಲ್ಪವಲ್ಲಿ ಈ ಅಲುಮೇಲುಮಂಗಮ್ಮ. ಅದಕ್ಕೆ ಪ್ರತಿದಿನವೂ ಆ ಜಗನ್ಮಾತೆಯನ್ನು ಸಂಪ್ರದಾಯ ಪದ್ಧತಿಯಲ್ಲಿ, ಸುಮಧುರವಾದ ಮಂತ್ರ - ತಂತ್ರ - ಗದ್ಯ - ಪದ್ಯಗಳೊಂದಿಗೆ ಕೊಂಡಾಡುತ್ತಾ ಕಲ್ಯಾಣೋತ್ಸವವನ್ನು ನಡೆಸುತ್ತಾರೆ.

ಈ ಕಲ್ಯಾಣವು ಸಕಲ ಶುಭಪ್ರದವಾದದ್ದು. ಈ ಸಮಯದಲ್ಲಿ ಅತಿರಸ, ಸಕ್ಕರೆಪೊಂಗಲ್, ಪುಳಿಯೋಗರೆಯನ್ನು ನೈವೇದ್ಯ ಮಾಡುತ್ತಾರೆ.





**ಸಹಸ್ರದೀಪಾಲಂಕರಣ:**

ಇದಕ್ಕೆ ಡೋಲೋತ್ಸವ, ಊಂಜಲ್‌ಸೇವೆ ಎಂದು ಕರೆಯುತ್ತಾರೆ. ಈ ಸೇವೆಯನ್ನು ಪ್ರತೀ ದಿನವೂ ಸಂಜೆ ನಡೆಸುತ್ತಾರೆ. ಈ ಮಂಟಪದಲ್ಲಿ ಅನೇಕ ತುಪ್ಪದ ದೀಪಗಳು ಬೆಳಗುತ್ತಿರುವಾಗ ಆ ಜಗಜ್ಜನನಿ ತೂಗು ಯ್ಯಾಲೆಯಲ್ಲಿ ಕುಳಿತು. ವೇದ ಮಂತ್ರಗಳು ನಕ್ಷತ್ರದ ಆರತಿ,ಕರ್ಪೂರದ ಆರತಿಗಳನ್ನು ಸ್ವೀಕರಿಸುತ್ತಾಳೆ. ಈ ಸಮಯದಲ್ಲಿ ಕಡಲೆ ಕಾಳಿನ ಉಸಲಿಯನ್ನು (ಸುಂಡಲ್) ನೈವೇದ್ಯ ಮಾಡುತ್ತಾರೆ.

**ಏಕಾಂತ ಸೇವೆ:**

ಅಮ್ಮನವರಿಗೆ ನಡೆಯುವ ನಿತ್ಯೋತ್ಸವಗಳಲ್ಲಿ ದಿನದ ಕೊನೆಯಲ್ಲಿ "ಏಕಾಂತ ಸೇವೆ" ಯನ್ನು ನಡೆಸುತ್ತಾರೆ. ಷಟ್ಕಾಲದಲ್ಲಿ ಕೊನೆಯದಾಗಿ ನಡೆಸುವ ಸೇವೆ ಇದಾಗಿದೆ. ಆ ಸಮಯದಲ್ಲಿ ಉತ್ಸವ ಮೂರ್ತಿಯನ್ನು ಮಂಚದ ಮೇಲೆ ಮಲಗಿಸುತ್ತಾರೆ. ಈ ಪ್ರಮುಖವಾದ ಆರಾಧನೆಯಲ್ಲಿ ಅಮ್ಮನವರಿಗೆ ಉಗುರು ಬೆಚ್ಚಗಿನ ಹಾಲು, ಪಂಚಕಜ್ಜಾಯವನ್ನು ನಿವೇದಿಸುತ್ತಾರೆ.

**ಕುಂಕುಮಾರ್ಚನೆ:**

ಸಕಲ ಸೌಭಾಗ್ಯಕ್ಕೂ ಪ್ರತೀಕವಾದುದು "ಕುಂಕುಮ". ಈ ಕುಂಕುಮದೊಂದಿಗೆ ಅಮ್ಮನವರನ್ನು ಮಂತ್ರನಾಮಾರ್ಚನೆಗಳಿಂದ ಪೂಜಿಸುತ್ತಾರೆ ನಂತರ ಈ ಕುಂಕುಮವನ್ನು ಭಕ್ತರಿಗೆ ಹಂಚುತ್ತಾರೆ. ಇದನ್ನು ಧರಿಸಿದರೇ ಸಕಲ ಸೌಭಾಗ್ಯವೂ ಸಿದ್ಧಿಸುತ್ತದೆಂದು ಭಕ್ತರಲ್ಲಿ ಅಚಂಚಲವಾದ ವಿಶ್ವಾಸವಿದೆ.

**ವಾರೋತ್ಸವಗಳು :**

ವಾರಕ್ಕೆ ಒಮ್ಮೆ ನಡೆಸುವ ಈ ಸೇವೆಯನ್ನು ವಾರೋತ್ಸವಗಳು ಎನ್ನುತ್ತಾರೆ. ಅದರಲ್ಲಿ,

**ಮೊದಲಿಗೆ:**

ಸೋಮವಾರ-ಅಷ್ಟದಳ ಪಾದಪದ್ಮಾರಾಧನೆ, ಅಷ್ಟದಳಗಳೊಂದಿಗೆ ಕೂಡಿರುವಂತಹಾ ನೂರಾ ಎಂಟು ಬಂಗಾರದ ಪುಷ್ಪಗಳನ್ನು ಒಂದೊಂದು ನಾಮವನ್ನೇ ಉಚ್ಚರಿಸುತ್ತಾ ಅಮ್ಮನವರ ಪಾದಪದ್ಮಗಳ ಮೇಲೆ ಅರ್ಚಿಸುತ್ತಾ "ಅಷ್ಟದಳ ಪಾದಪದ್ಮಾರಾಧನೆ" ಮಾಡುತ್ತಾರೆ. ಇದಕ್ಕೆ "ಸ್ವರ್ಣ ಪುಷ್ಪಾರ್ಚನೆ" ಎಂದೂ ಕರೆಯುತ್ತಾರೆ.

**ಗುರುವಾರ - ತಿರುಪ್ಪಾವಡ ಸೇವೆ (ಅನ್ನಕೂಟೋತ್ಸವ):**

ಚಿತ್ರಾನ್ನವನ್ನು (ಪುಳಿಯೋಗರೆ) ಅಮ್ಮನವರ ಮುಂದೆ ರಾಶಿಯಾಗಿ ಹಾಕಿ ನೈವೇದ್ಯ ಮಾಡುತ್ತಾರೆ. ದೇಶದ ಪ್ರಜೆಗಳೆಲ್ಲರೂ ಹಚ್ಚ ಹಸಿರಾಗಿ ಸುಖ ಸಂತೋಷದಿಂದ ಇರಬೇಕೆಂದು, ಆಹಾರಕ್ಕೆ ಎಂತಹಾ







ಕಷ್ಟಗಳೂ ಉಂಟಾಗಬಾರದೆಂದು, ಸರ್ವಸೌಭಾಗ್ಯಗಳೂ ಲಭಿಸ ಬೇಕೆಂದು, ಬೆಳೆಗಳು-ಧಾನ್ಯಗಳು ಸಮೃದ್ಧಿಯಾಗಿರಲೆಂದು ಎಂತಹಾ ಈತಿ ಬಾಧೆಗಳೂ ಉಂಟಾಗಬಾರದೆಂದು ಸಂಕಲ್ಪವನ್ನು ಮಾಡುತ್ತಾರೆ. ಈ ಸೇವೆಯಲ್ಲಿ ಪುಳಿಯೋಗರೆಯೊಂದಿಗೆ ಪ್ರತ್ಯೇಕವಾಗಿ ಜಿಲೇಬಿಯನ್ನು ಮಾಡಿ ನಿವೇದಿಸುತ್ತಾರೆ.

**ಶುಕ್ರವಾರ - ವಸ್ತ್ರಾಲಂಕರಣ ಸೇವೆ :**

ಭಕ್ತರು ಬಹಳ ಭಕ್ತಿ ಶ್ರದ್ಧೆಗಳೊಂದಿಗೆ ಅಮ್ಮನವರಿಗೆ ಸಮರ್ಪಿಸುವ ವಸ್ತ್ರಗಳನ್ನು ಆ ತಾಯಿಗೆ ಬಹಳ ಸುಂದರವಾಗಿ, ವೈಭವದಿಂದ ವಿವಿಧ ರೀತಿಯಲ್ಲಿ ಅಲಂಕರಿಸುತ್ತಾರೆ. ಈ ರೀತಿ ಮಾಡಿದರೆ ಆಪತ್ತಿನ ಸಮಯದಲ್ಲಿ ಆ ತಾಯಿ ನಮ್ಮನ್ನು ವಸ್ತ್ರವು ನಮ್ಮನ್ನು ಹೇಗೆ ಕಾಪಾಡುತ್ತದೋ ಹಾಗೇ ತನ್ನ ರಕ್ಷಣಾ ಕವಚ ವನ್ನು ಹೊದ್ದಿಸಿ ಕಾಪಾಡುತ್ತಾಳೆಂದು ಭಕ್ತರ ವಿಶ್ವಾಸ.

**ಶುಕ್ರವಾರ ಅಭಿಷೇಕ**

ಅಮ್ಮನವರ ಮೂಲಮೂರ್ತಿಗೆ ಈ ಅಭಿಷೇಕ ಸೇವೆ ಯನ್ನು ಮಾಡುತ್ತಾರೆ ಇದರಲ್ಲಿ ಅನೇಕ ಸುಗಂಧ ದ್ರವ್ಯಗಳನ್ನು ಮಿಶ್ರಣ ಮಾಡಿ ಅಭಿಷೇಕವನ್ನು ಮಾಡುತ್ತಾರೆ. ಈ ಸೇವೆ ಯಿಂದ ಸರ್ವಸಂಪತ್ತೂ ಲಭಿಸುತ್ತವೆಂದೂ ಪುರಾಣಗಳು ಸಾರುತ್ತಿವೆ.

**ಶುಕ್ರವಾರ ಲಕ್ಷ್ಮೀಪೂಜೆ**

ಪ್ರತಿ ಶುಕ್ರವಾರ ಕಲ್ಯಾಣೋತ್ಸವಕ್ಕೆ ಮೊದಲು ಕಲ್ಯಾಣ ಮಂಟಪ ದಲ್ಲಿ "ಲಕ್ಷ್ಮೀಪೂಜೆ " ನಡೆಯುತ್ತದೆ. ಈ ಜಗನ್ಮಾಯ ಕಿಗೆ ಸಕಲ ಷೋಡಶೋಪಚಾರಗಳಿಂದ ಪೂಜಿಸಿದರೆ ಸಕಲ ಸಂಪತ್ಪ್ರದಾಯಕವೆಂದು ನಂಬಿಕೆ. ಎಲ್ಲರ ಮನೋಭೀಷ್ಟೆ ಗಳನ್ನು ನೆರವೇರಿಸುವಂತಹಾ ಸೇವೆ ಎಂದು ಪ್ರತೀತಿ.

**ಶುಕ್ರವಾರ ಸಹಸ್ರದೀಪಾಲಂಕರಣ**

ನಿತ್ಯಕಲ್ಯಾಣದ ನಂತರ ಅಮ್ಮನವರನ್ನು ಗುಡಿಯ ದಕ್ಷಿಣ ಭಾಗದಲ್ಲಿ ಇರುವ ಶುಕ್ರವಾರದ ತೋಟಕ್ಕೆ ಮೆರವಣಿಗೆಯಲ್ಲಿ ಕರೆದೊಯ್ದು, ಆ ತೋಟದಲ್ಲಿ ಅರಿಶಿನ, ಗಂಧ, ಮೊದಲಾದ ದ್ರವ್ಯಗಳೊಂದಿಗೆ ಅಭಿಷೇಕ ಮಾಡುತ್ತಾರೆ. ಅಲ್ಲಿಂದ ಆಸ್ಥಾನ ಮಂಟಪಕ್ಕೆ ಬಂದು ಅಲ್ಲಿ ಊಂಜಲ್ ಸೇವೆ ಮಾಡುತ್ತಾರೆ. ಆದಾದ ನಂತರ ಪ್ರತಿ ಶುಕ್ರ ವಾರವೂ ಮೆರವಣಿಗೆಯಲ್ಲಿ ಗ್ರಾಮೋತ್ಸವ ನಡೆಯುತ್ತದೆ.

**ಶನಿವಾರ - ಪುಷ್ಪಾಂಜಲೀ ಸೇವೆ:**

ಮೂಲಮೂರ್ತಿಗೆ ಎಷ್ಟೋ ವಿಧಗಳಲ್ಲಿ ಪುಷ್ಪಗಳಿಂದ ಅಲಂಕಾರ ನಡೆಯುತ್ತದೆ. ಅಮ್ಮನವರ ನಿರ್ಮಲವಾದ ಮನಸ್ಸು ಶಾಂತಿಯಿಂದಲೂ ಕೂಡಿರಬೇಕೆಂದು ಈ ಸೇವೆ ಯನ್ನು ಮಾಡುತ್ತಾರೆ.

**ಮಾಸೋತ್ಸವಗಳು :**

ತಿಂಗಳಿಗೆ ಒಮ್ಮೆ ನಡೆಯುವ ಸೇವೆಗಳನ್ನು ಮಾಸೋ ತ್ಸವಗಳು ಎಂದು ಕರೆಯುತ್ತಾರೆ. ಅವುಗಳಲ್ಲಿ,

**ಅಷ್ಟೋತ್ತರ ಶತಕಲಶಾಭಿಷೇಕ : (ಪ್ರತೀ ತಿಂಗಳು ಮೊದಲ ಬುಧವಾರ)**

ಮೂಲ ಮೂರ್ತಿಗೆ ವೈಭವದಿಂದ ನಡೆಯುವ ಸೇವೆ ಹಾಲು-ಮೊಸರು-ಜೇನುತುಪ್ಪ-ಅರಿಶಿನ, ಗಂಧ ಮೊದಲಾದ ದ್ರವ್ಯಗಳೊಂದಿಗೆ ಅಭಿಷೇಕ, ವಿಶೇಷವಾದ ಹೋಮ, ನೈವೇದ್ಯ ವನ್ನು ಮಾಡುತ್ತಾರೆ. ನೂರಾ ಎಂಟು ಕಲಶಗಳನ್ನು ಅಮ್ಮನವರ ಅಭಿಷೇಕದಲ್ಲಿ ಉಪಯೋಗಿಸುತ್ತಾರೆ. ಆದ್ದರಿಂದ ಇದ್ದಕ್ಕೆ ಈ ಹೆಸರು ಸಾರ್ಥಕವಾಗಿದೆ. ಇದು ಅತ್ಯುತ್ತಮವಾದ ಅಭಿಷೇಕ ವಿಧಾನವೆಂದು ಆಗಮಶಾಸ್ತ್ರದಲ್ಲಿ ಉಲ್ಲೇಖವಿದೆ.

**ನಕ್ಷತ್ರೋತ್ಸವಗಳು:**

ಅಮ್ಮನವರ ಜನ್ಮನಕ್ಷತ್ರವಾದ ಉತ್ತರಾಷಾಢ, ಏಕಾದಶಿಯ ದಿನಗಳೆಂದು ಅಮ್ಮನವರ ಉತ್ಸವಮೂರ್ತಿಗೆ ಏಕಾಂತವಾಗಿ ಅಭಿಷೇಕ ಮಾಡುತ್ತಾರೆ.

**ಸಂವತ್ಸರೋತ್ಸವಗಳು :**

ವರ್ಷಕ್ಕೆ ಒಮ್ಮೆ ನಡೆಯುವ ಉತ್ಸವಗಳನ್ನು ಸಂವತ್ಸರೋತ್ಸವಗಳೆಂದು ಹೇಳುತ್ತಾರೆ.

**ವಸಂತೋತ್ಸವ :**

ವೈಶಾಖಮಾಸದ ಹುಣ್ಣಿಮೆಗೆ ಮೂರು ದಿನಗಳಂತೆ ಈ ವಸಂತೋತ್ಸವಗಳು ನಡೆಯುತ್ತವೆ. ವಸಂತ ಋತುವಿನಲ್ಲಿ ಅಮ್ಮನವರಿಗೆ ನಡೆಯುವ ಈ ಉತ್ಸವವನ್ನು ವಸಂತೋತ್ಸವವೆಂದು ಕರೆಯುತ್ತಾರೆ. ಸುಗಂಧಭರಿತ ಪುಷ್ಪಗಳೊಂದಿಗೆ ಅಮ್ಮನವರನ್ನು ಆರಾಧಿಸಿ, ವಿವಿಧ ರೀತಿಯ ಫಲಗಳನ್ನು ಅಮ್ಮನವರಿಗೆ ನೈವೇದ್ಯ ಮಾಡುವುದು ಈ ವಸಂತೋತ್ಸವದಲ್ಲಿ ಮಾಡುವ ಪ್ರಧಾನವಾದ ಆರಾಧನೆ ಹುಣ್ಣಿಮೆಯ ದಿನದಂದು ಸ್ವರ್ಣರಥೋತ್ಸವ ನಡೆಯುತ್ತದೆ.

**ವರಮಹಾಲಕ್ಷ್ಮೀ ವ್ರತ :**

ತಿರುಚಾನೂರಿನಲ್ಲಿ ನೆಲೆಸಿರುವ ಅಮ್ಮನವರಿಗೆ ಶ್ರಾವಣ ಮಾಸದಲ್ಲಿ ಬರುವ ವರಮಹಾಲಕ್ಷ್ಮೀವ್ರತದಂದು ಆಸ್ಥಾನ ಮಂಟಪದಲ್ಲಿ ಅಮ್ಮನವರನ್ನು ಆಸನದಲ್ಲಿ ಕುಳ್ಳಿರಿಸಿ ಅಲಂಕರಿಸಿ, ಈ ವ್ರತವನ್ನು ಅತ್ಯಂತ ವೈಭವದಿಂದ ಆಚರಿಸುತ್ತಾರೆ. ಆ ದಿನ ವ್ರತದಲ್ಲಿ ಪಾಲ್ಗೊಳ್ಳ ಬಯಸುವ ಎಲ್ಲಾ ಭಕ್ತರಿಗೂ ಸಾಮೂಹಿಕ ವ್ರತವನ್ನು ಮಾಡಿಸುತ್ತಾರೆ ಅರ್ಚಕರು ವೇದಮಂತ್ರಗಳೊಂದಿಗೆ, ಸರ್ವ ಶುಭಸಂಕಲ್ಪದೊಂದಿಗೆ ಪೂಜೆಯನ್ನು ಮಾಡಿಸುತ್ತಾರೆ. ಅದರಲ್ಲಿ ಭಕ್ತರು ಭಾಗವಹಿಸಿ, ಆ ತಾಯಿಯ ಕೃಪೆಗೆ ಪಾತ್ರರಾಗುತ್ತಾರೆ.

**ಪವಿತ್ರೋತ್ಸವ :**

ಪ್ರತಿವರ್ಷ ಭಾದ್ರಪದಮಾಸದ ಹುಣ್ಣಿಮೆಗೆ ಮೂರು ದಿನಗಳಾಗುವಂತೆ ಪವಿತ್ರೋತ್ಸವಗಳನ್ನು ನೆರವೇರಿಸುತ್ತಾರೆ. ನಿತ್ಯವೂ ನಡೆಯುವ ಅರ್ಚನೆಯಲ್ಲಿ ಯಾವುದಾದರೂ ದೋಷಗಳಿದ್ದರೆ ಅವುಗಳಿಂದ ನಿವೃತ್ತಿ ಹೊಂದುವುದಕ್ಕಾಗಿ ಈ ಉತ್ಸವವನ್ನು ನಡೆಸುತ್ತಾರೆ.

ರೇಷ್ಮೆಯ ದಾರಗಳೊಂದಿಗೆ ಪವಿತ್ರವನ್ನು ತಂದು ವೈದಿಕ ಕ್ರಿಯೆಗಳಿಂದ ಅವುಗಳನ್ನು ಸಂಸ್ಕರಿಸಿ, ವೇದಮಂತ್ರಗಳೊಂದಿಗೆ ಹೋಮವನ್ನು ನಿರ್ವಹಿಸಿ, ಸುಮುಹೂರ್ತದಲ್ಲಿ ಪವಿತ್ರಗಳನ್ನು ಅಮ್ಮನವರಿಗೆ ಸಮರ್ಪಿಸುವುದೇ ಪವಿತ್ರೋತ್ಸವದ ಮುಖ್ಯ ಆಚರಣೆ. ಇದರಲ್ಲಿ ಪಾಲ್ಗೊಂಡವರು ನಕಾರಾತ್ಮಕ ಶಕ್ತಿಗಳಿಂದ ಮುಕ್ತಿ ಹೊಂದಿ ಸುಖಸಂತೋಷಗಳಿಂದ ಬಾಳುತ್ತಾರೆಂದು ಭಕ್ತರ ನಂಬಿಕೆ.

**ಲಕ್ಷಕುಂಕುಮಾರ್ಚನೆ:**

ಅಮ್ಮನವರಿಗೆ ಪ್ರತೀವರ್ಷವೂ ನಡೆಯುವ ವಾರ್ಷಿಕ ಬ್ರಹ್ಮೋತ್ಸವಕ್ಕೆ ಮೊದಲು ಅತ್ಯಂತ ವೈಭವದಿಂದ ಈ ಲಕ್ಷ ಕುಂಕುಮಾರ್ಚನೆ ನಡೆಯುತ್ತದೆ. ಶತಸಹಸ್ರನಾಮಗಳಿಂದ, ಅಷ್ಟೋತ್ತರ ಶತನಾಮಗಳಿಂದ, ವೇದಮಂತ್ರಗಳಿಂದ





ಅರ್ಚಕರು ಪ್ರತೀ ಕುಂಕುಮದ ಬಿಂದುವಿನಲ್ಲಿ ಅಮ್ಮನವರ ಪ್ರಾಶಸ್ತ್ಯವನ್ನು ತಿಳಿಯ ಪಡಿಸುತ್ತಾ ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ. ಸ್ತ್ರೀಯರ ಸೌಭಾಗ್ಯದ ಚಿಹ್ನೆ ಕುಂಕುಮವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತಹಾ ಪರಮ ಪವಿತ್ರವಾದ ಸೌಭಾಗ್ಯವನ್ನು ಅಮ್ಮನವರಿಗೆ ಅರ್ಪಿಸಿ, ಆ ತಾಯಿ ಪ್ರತಿ ಘಳಿಗೆಯಲ್ಲೂ ಪ್ರಶಾಂತವಾಗಿ ಇದ್ದರೆ, ಬ್ರಹ್ಮೋತ್ಸವಗಳು ನಿರ್ವಿಘ್ನವಾಗಿ, ಆನಂದ ದಾಯಕವಾಗಿ ನೆರವೇರುತ್ತದೆಂದು ಹಿರಿಯರ ನಂಬಿಕೆ. ಇದರಲ್ಲೂ ಅನೇಕ ಭಕ್ತರು ಪಾಲ್ಗೊಂಡು ತಮ್ಮ ಸೌಭಾಗ್ಯವನ್ನು ಕಾಪಾಡಬೇಕೆಂದು ಆ ತಾಯಿಯನ್ನು ಬೇಡಿಕೊಂಡು ಕಟಾಕ್ಷಸಿದ್ಧಿಯನ್ನು ಪಡೆಯುತ್ತಾರೆ.

**ಬ್ರಹ್ಮೋತ್ಸವಗಳು :**

ತಿರುಚಾನೂರು ಪದ್ಮಾವತೀ ಅಮ್ಮನವರಿಗೆ ನವೆಂಬರು ತಿಂಗಳು ಅಂದರೆ ಕಾರ್ತೀಕ ಮಾಸದಲ್ಲಿ ವೈಭವದಿಂದ ಬ್ರಹ್ಮೋತ್ಸವಗಳು ನೆರವೇರುತ್ತವೆ. ಆ ಬ್ರಹ್ಮೋತ್ಸವಗಳಲ್ಲಿ ಅಮ್ಮನವರು ಅನೇಕ ವಿಧವಾದ ವಾಹನಗಳ ಮೇಲೆ ಮೆರವಣಿಗೆಯಲ್ಲಿ ಬಂದು ಭಕ್ತರನ್ನು ಅನುಗ್ರಹಿಸುತ್ತಾರೆ. ಈ ಬ್ರಹ್ಮೋತ್ಸವದಲ್ಲಿ ಪಂಚಮೀ ತೀರ್ಥವು ಅತ್ಯಂತ ಮುಖ್ಯವಾದುದು. ಈ ಉತ್ಸವಕ್ಕೆ ಹಾಜರಾಗಿ ಅಮ್ಮನವರೊಂದಿಗೆ ಪುಷ್ಕರಿಣಿಯಲ್ಲಿ ಮುಳುಗಿ ತಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡು ಭಕ್ತರು ಪುನೀತರಾಗುತ್ತಾರೆ.

**ಪುಷ್ಪಯಾಗ:**

ತಿರುಚಾನೂರಿನಲ್ಲಿ ನಡೆಯುವ ಪಂಚಮೀತೀರ್ಥದ ಮರುದಿನ ಅಮ್ಮನವರಿಗೆ ಅತ್ಯಂತ ವೈಭವದಿಂದ ಪುಷ್ಪಯಾಗವನ್ನು ನಿರ್ವಹಿಸುತ್ತಾರೆ. ನಿತ್ಯವು ಪೂಜೆಯಲ್ಲಿ ನಡೆಯುವ ಮಂತ್ರಪುಷ್ಪಗಳೊಂದಿಗೆ ಬ್ರಹ್ಮೋತ್ಸವಗಳು ಮೊದಲಾದ ವಿಶೇಷ ಉತ್ಸವಗಳನ್ನು ನೆರವೇರಿಸಿದ ನಂತರ ಆಚರಿಸುವ ಅದ್ಭುತವಾದ ಯಾಗವೇ "ಪುಷ್ಪಯಾಗ" ಆಯಾ ಕಾಲದಲ್ಲಿ ಲಭಿಸುವ ವಿವಿಧ ರೀತಿಯ ಪುಷ್ಪಗಳೊಂದಿಗೆ ವೈಭವದಿಂದ ಈ ಯಾಗವನ್ನು ನಿರ್ವಹಿಸುತ್ತಾರೆ. ಅಂತಹಾ ಪ್ರಾಮುಖ್ಯತೆ ಇರುವ ಹೂಗಳೊಂದಿಗೆ ಪೂಜಿಸುವಂತಹಾ ವಿಧಾನ ಬಹಳ ಪವಿತ್ರವಾದದ್ದು. ಲೋಕಕಲ್ಯಾಣಕ್ಕಾಗಿ, ದಿವ್ಯವಾದ ಈ ವಿಧಾನದಿಂದ ಸಮಸ್ತ ಜೀವರಾಶಿಗಳು ಸುಖಸಂಪತ್ತು, ಶಾಂತಿ, ಸೌಭಾಗ್ಯಗಳಿಂದ ಸುಖವಾಗಿ ಜೀವಿಸಬೇಕೆಂದು ನಡೆಸುವಂತಹಾ ವೈಭವದ ಆಚರಣೆ ಇದಾಗಿದೆ.

**ತೆಪ್ಪೋತ್ಸವ :**

ಇದಕ್ಕೆ ಕ್ಷೀರ್ಣಾವಉತ್ಸವ, ಪ್ಲವೋತ್ಸವವೆಂದು ಹೆಸರು. ಜ್ಯೇಷ್ಠಮಾಸದ ಹುಣ್ಣಿಮೆಗೆ ಐದು ದಿನಗಳ ಕಾಲ ಈ ಉತ್ಸವಗಳು ನಡೆಯುತ್ತವೆ.

ಮೊದಲ ದಿನ ಏಕಾದಶಿಯಂದು ಶ್ರೀಕೃಷ್ಣನಿಗೆ, ಎರಡನೆಯ ದಿನ ದ್ವಾದಶಿಯಂದು ಶ್ರೀಸುಂದರರಾಜಸ್ವಾಮಿಗೆ, ಕೊನೆಯ ಮೂರು ದಿನಗಳು ಪದ್ಮಾವತಿ ಅಮ್ಮನವರಿಗೆ ಅಲ್ಲಿರುವ ಪದ್ಮಸರೋವರದಲ್ಲಿ ತೆಪ್ಪೋತ್ಸವಗಳು ನಡೆಯುತ್ತವೆ. ಈ ಸೇವೆಯನ್ನು ಸಂದರ್ಶಿಸುವವರಿಗೆ ಅವರಲ್ಲಿ ಮನೆಮಾಡಿರುವ ಅಜ್ಞಾನದ ಕತ್ತಲೆಯನ್ನು ಹೊಡೆದೊಡಿಸಿ, ನಿರ್ಮಲವಾದ ಜ್ಞಾನದ ಬೆಳಕನ್ನು ನೀಡಿ ಸಮಸ್ತ ಸಂಪತ್ತನ್ನು ಪ್ರಸಾದಿಸುತ್ತದೆಂದು ಭಕ್ತರ ನಂಬಿಕೆ.

ಈ ರೀತಿ ಶ್ರೀಶ್ರೀನಿವಾಸನ ಹೃದಯದ ಅರಸಿಯಾದ, ಪಟ್ಟದ ರಾಣಿಯಾದ ಪದ್ಮಾವತಿ ಅಮ್ಮನವರು ಆರ್ಚಾಮೂರ್ತಿಯಾಗಿ ನೆಲೆಸಿರುವ ಈ ತಿರುಚಾನೂರು ಕ್ಷೇತ್ರವು ಪ್ರತಿ ನಿತ್ಯವೂ ವೈಭವದಿಂದ, ನಿತ್ಯವೂ ಉತ್ಸವಗಳೊಂದಿಗೆ ಶೋಭಾಯಮಾನವಾಗಿ ಪ್ರಸಿದ್ಧ ಪುಣ್ಯಕ್ಷೇತ್ರವೆನಿಸಿಕೊಂಡಿದ್ದು ತೀರ್ಥರಾಜನೆಂದು ಹೆಸರುಗಳಿಸಿದೆ.

## ತಿರುಮಲೆ ತಿರುಪತಿ ದೇವಸ್ಥಾನಗಳು

**ತಿರುಮಲೆ ಸ್ವಾಮಿಯವರಿಗೆ 27-09-2022 ರಿಂದ 05-10-2022 ರ ವರೆಗೆ ನಡೆದ ಬ್ರಹ್ಮೋತ್ಸವ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ.,ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ. ವಿ. ವೀರಬ್ರಹ್ಮ ಐ.ಎ.ಎಸ್., ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್. ಮತ್ತು ಇನ್ನಿತರ ಉನ್ನತಾಧಿಕಾರಿಗಳು ಪಾಲ್ಗೊಂಡರು.**












# ಆಕಾಶ ರಾಜನ ಪುತ್ರಿ ಪದ್ಮಾವತಿ
# ತಿರುಚಾನೂರು ಪದ್ಮಾವತಿ

ತೆಲುಗು ಮೂಲ : ಕೆ. ಬಾಲಸುಬ್ರಹ್ಮಣ್ಯ
ಅನುವಾದ ಕೆ. ಎಸ್. ರಾಮಮೂರ್ತಿ

ಅನಂತವಾದ ಬ್ರಹ್ಮಾಂಡದಲ್ಲಿ ಸಾಟಿಯಿಲ್ಲದ ಮೇರು ದೈವವೇ ಸಪ್ತಗಿರಿವಾಸ ಶ್ರೀವೆಂಕಟೇಶ. ಈ ಸ್ವಾಮಿಯನ್ನು ವೇದಗಳು ಸಹ ಸ್ತುತಿಸಲಾಗದೆ, ಓ ಸ್ವಾಮಿಯೆ ನೀನು ಯಾರಾಗಿರುವೆಯೋ ಅದೇ ಆಗಿದ್ದೀಯ ಎಂದು ಹೊಗಳಲ್ಪಟ್ಟಿರುವ ವೆಂಕಟೇಶನಿಗೆ ಈ ಕಲಿಯುಗದಲ್ಲಿ ಇಬ್ಬರು ಪತ್ನಿಯರು.

ಈ ಇಬ್ಬರು ಪತ್ನಿಯರ ಹೆಸರುಗಳೂ ಪದ್ಮಾವತಿ ಒಬ್ಬಾಕೆ ಮಣ್ಣಿನೊಳಗೆ ಪದ್ಮದಲ್ಲಿ ಎಳೆಕೂಸಾಗಿ ಹುಟ್ಟಿದ್ದು, ಮತ್ತೊಬ್ಬಾಕೆ ನೀರಿನೊಳಗಿನ ಪದ್ಮದಲ್ಲಿ ಹದಿನಾರು ವರ್ಷದ ಹುಡುಗಿಯಾಗಿ ಹುಟ್ಟಿದವಳು. ಇವರಿಬ್ಬರಿಗೂ ಅನೇಕ ಹೋಲಿಕೆಗಳು, ಭೇದಗಳು ಇದ್ದರೂ ಸಹ ಕೊನೆಯ ಹಂತದಲ್ಲಿ ಇವರಿಬ್ಬರೂ ಒಂದಾಗಿ ಬೆರತು ಒಂದೇ ರೂಪವನ್ನು ತಳೆದು "ವ್ಯೂಹಲಕ್ಷ್ಮಿ" ಎಂಬ ಹೊಸ ಹೆಸರಿನಿಂದ ಶ್ರೀನಿವಾಸ ಪ್ರಭುವಿನ ಹೃದಯವನ್ನು ಅಲಂಕರಿಸಿ ಸಂತೋಷದಿಂದಿದ್ದಾರೆ. ಇದರಿಂದ ತಮ್ಮ ಒಡೆಯನಿಗೆ ಶ್ರೀನಿವಾಸ ಎಂಬ ಸಾರ್ಥಕವಾದ ದೊಡ್ಡ ಹೆಸರನ್ನು ತಂದು ಕೊಟ್ಟಿದ್ದಾರೆ.

ವಿಚಿತ್ರ ಹಾಗೂ ಆಶ್ಚರ್ಯದಿಂದ ಕೂಡಿರುವ ಈ ಇಬ್ಬರು ಪದ್ಮಾವತಿಯರ ಕಥೆಯನ್ನು ಸ್ವಲ್ಪ ವಿವರವಾಗಿ ತಿಳಿದು ಆನಂದಿಸೋಣ.

### ಆಕಾಶ ರಾಜನ ಪುತ್ರಿ ಪದ್ಮಾವತಿ :

ತಿರುಪತಿಗೆ 50 ಕಿ.ಮೀ. ದೂರದಲ್ಲಿರುವ ನಾರಾಯಣವನಕ್ಕೆ ಅರಸನಾಗಿದ್ದ ಆಕಾಶರಾಜ. ಈತ ಸಂತಾನಕ್ಕಾಗಿ ಪುತ್ರಕಾಮೇಷ್ಟಿಯಾಗವನ್ನು ಕೈಗೊಂಡ ಹೊಲದಲ್ಲಿ ಉಳುವಾಗ ಮಣ್ಣಿನಲ್ಲಿ ಬಂಗಾರದ ಪದ್ಮ ದೊರೆಯಿತು. ಅದರಲ್ಲೊಂದು ಪುಟ್ಟ ಮಗುವಿತ್ತು. ಪದ್ಮದಲ್ಲಿ ದೊರೆತ ಆ ಮಗುವಿಗೆ ಪದ್ಮಾವತಿಯೆಂದು ಹೆಸರಿಟ್ಟು ಪೋಷಿಸಿದ.

ಇದೇ ಸಮಯದಲ್ಲಿ ವೈಕುಂಠವನ್ನು ತೊರೆದು ಭೂಲೋಕಕ್ಕೆ ಬಂದ ಶ್ರೀಮಹಾಲಕ್ಷ್ಮಿಯನ್ನು ಅರಸುತ್ತ ಶ್ರೀ ಮಹಾವಿಷ್ಣು ಭೂಲೋಕದಲ್ಲಿರುವ ಆದಿವರಾಹ ಕ್ಷೇತ್ರವನ್ನು ಸೇರಿ ವಕುಳಮಾತೆಯ ಆಶ್ರಯದಲ್ಲಿದ್ದ.

ಒಂದು ದಿನ ಬೇಟೆಗೆ ಹೊರಟ ವೆಂಕಟೇಶನು ಆಕಾಶ ರಾಜನ ಮಗಳಾದ ಪದ್ಮಾವತಿಯನ್ನು ನೋಡಿ, ಮೋಹಿಸಿ ಆಕೆಯನ್ನು ವಿವಾಹವಾಗಲು ಬಯಸಿ ತನ್ನ ಮನದಿಂಗಿತವನ್ನು ತಾಯಿಯ ಬಳಿ ನಿವೇದಿಸಿದ. ಆಕೆ ರಾಜಕುಮಾರಿಯೆಂದು ಶಂಕಿಸಿದ ವಕುಳ ಮಾತೆಯೊಂದಿಗೆ ಈಕೆ ರಾಮಾಯಣ ಕಾಲದ ವೇದವತಿ, ಲಂಕೆಯಲ್ಲಿ ಕಷ್ಟಗಳನ್ನು ಅನುಭವಿಸಿದ ಸೀತೆಯ ಕೋರಿಕೆಯಂತೆ ಕಲಿಯುಗದಲ್ಲಿ ಶ್ರೀವೆಂಕಟೇಶನಾಗಿ ಹುಟ್ಟಿ ಮದುವೆಯಾಗುವೆನೆಂದು ಮಾತು ಕೊಟ್ಟಿರುವೆ. ಆ ವೇದವತಿಯೇ ಈಗ ಮಣ್ಣಿನಲ್ಲಿರುವ ಪದ್ಮದಲ್ಲಿ ಪದ್ಮಾವತಿಯಾಗಿ ಅವತರಿಸಿರುವಳು ಎಂದು ಹೇಳಿದ. ಆಗ ವಕುಳ ಮಾತೆ ಆಕಾಶರಾಜನ ರಾಜ್ಯಕ್ಕೆ ಹೋಗಿ ನಡೆದ ಕಥೆಯನ್ನು ರಾಜನೊಂದಿಗೆ ಹೇಳಿ ಶ್ರೀವೆಂಕಟೇಶನ ವಿವಾಹವನ್ನು ವೈಭವದಿಂದ ನೆರವೇರಿಸಿದಳು.

ಸ್ವಲ್ಪ ಕಾಲದ ನಂತರ, ಪದ್ಮಾವತಿಯನ್ನು ವೆಂಕಟೇಶನು ವಕುಳಮಾತೆಗೆ ಒಪ್ಪಿಸಿ, ಅಮ್ಮಾ ನಾನು ಲೋಕಕಲ್ಯಾಣಕ್ಕಾಗಿ ಬಂದಿರುವ ಶ್ರೀಮಹಾಲಕ್ಷ್ಮಿಯ ಬಳಿಗೆ ಹೋಗಬೇಕಾಗಿದೆ ಆಕೆ ಕೊಲ್ಹಾಪುರದಲ್ಲಿದ್ದಾಳೆ. ಅಲ್ಲಿಗೆ ಹೋಗಿ ಆಕೆಯನ್ನು ಇಲ್ಲಿಗೆ ಕರೆದುಕೊಂಡು ಬರುವೆನೆಂದು ಹೇಳಿ ಹೊರಟ ಆದರೆ ಆಕೆ ಕಾಣಿಸ ಲಿಲ್ಲ. ಆಗ ಅಶರೀರವಾಣಿಯೊಂದು 'ಓ ವೆಂಕಟೇಶನೆ ಇಲ್ಲಿ ನಿನಗೆ ಮಹಾಲಕ್ಷ್ಮಿಯ ದರ್ಶನ ಲಭಿಸದು. ಸ್ವರ್ಣಮುಖಿ ತೀರದಲ್ಲಿ ಪದ್ಮಸರೋವರವನ್ನು ನಿರ್ಮಿಸಿ ತಪಸ್ಸು ಮಾಡು ಅಲ್ಲಿ ಆಕೆ ನಿನಗೆ ಪ್ರತ್ಯಕ್ಷಳಾಗುವಳು' ಎಂದು ನುಡಿಯಿತು.

**ತಿರುಚಾನೂರು ಪದ್ಮಾವತಿ :**

ಕೂಡಲೆ ಶ್ರೀವೆಂಕಟೇಶನು ಸ್ವರ್ಣಮುಖಿ ತೀರಕ್ಕೆ ಬಂದು ಪದ್ಮಸರೋವರದ ಬಳಿ ಲಕ್ಷ್ಮೀದೇವಿಗಾಗಿ ಹನ್ನೆರಡು ವರ್ಷ ತಪಸ್ಸು ಮಾಡತೊಡಗಿದ.ಕಾರ್ತೀಕ ಶುದ್ಧ ಪಂಚಮಿಯ ಶುಕ್ರವಾರದ ಉತ್ತರಾಷಾಢ ನಕ್ಷತ್ರಯುಕ್ತ ಅಭಿಜಿತ್ ಲಗ್ನದಲ್ಲಿ (ಮಧ್ಯಾಹ್ನ 12 ಗಂಟೆಗೆ) ಪದ್ಮ ಸರೋವರದ ಮಧ್ಯದಲ್ಲಿ ಸಾವಿರದಳಗಳುಳ್ಳ ಬಂಗಾರದ ಪದ್ಮದಲ್ಲಿ ಹದಿನಾರು ವರ್ಷದ ಕನ್ಯೆಯಾಗಿ ದಿವ್ಯಕಾಂತಿಗಳಿಂದ ಕೂಡಿದ ಶ್ರೀಮಹಾಲಕ್ಷ್ಮೀ ಆವಿರ್ಭವಿಸಿದಳು. ನೀರಿನೊಳಗಿನ ಪದ್ಮದಲ್ಲಿ ಅವತರಿಸಿದ ಈಕೆಯನ್ನು ದೇವತೆಗಳು ಪದ್ಮಾವತಿಯೆಂದು ಸ್ತುತಿಸಿದರು.

'ಅಲರ್‌ಮೇಲೇಮಂಗ' ಎಂದು ಕರೆದರು. ಅಂದರೆ ಪುಷ್ಪದ ಮೇಲೆ ಪ್ರಕಾಶಿಸುವ ದಿವ್ಯವನಿತೆ ಎಂದರ್ಥ.ದೇವತೆಗಳು, ಋಷಿಗಳು, ಯಕ್ಷಕಿನ್ನರ, ಗಂಧರ್ವರು, ಮಾನವರು ಅನೇಕ ಬಗೆಗಳಲ್ಲೂ ಪದ್ಮಾವತಿಯನ್ನು ಕೊಂಡಾಡಿದ್ದಾರೆ.

ಓಂ ನಮಶ್ರಿಯೈ ಲೋಕಧಾತ್ರ್ಯೈ ಬ್ರಹ್ಮಮಾತ್ರೆ ನಮೋ ನಮಃ
ನಮಸ್ತೆ ಪದ್ಮನೇತ್ರಾಯೈ ಪದ್ಮಮುಖ್ಯೈ ನಮೋ ನಮಃ
ಪ್ರಸನ್ನ ಮುಖಪದ್ಮಾಯೈ ಪದ್ಮಕಾಂತ್ಯೈ ನಮೋ ನಮಃ
ನಮೋ ಬಿಲ್ವವನ ಸ್ಥಾಯೈ ವಿಷ್ಣುಪತ್ನ್ಯೈ ನಮೋ ನಮಃ
ವಿಚಿತ್ರ ಕ್ಷೌಮಧಾರಿಣ್ಯೈ ಪೃಥುಶ್ರೇಣ್ಯೈ ನಮೋ ನಮಃ
ಪಕ್ವಬಿಲ್ವ ಫಲಾಪಿನ ತುಂಗಸ್ತನ್ಯೈ ನಮೋ ನಮಃ
ಸುರಕ್ತ ಪದ್ಮ ಪತ್ರಾಭ ಕರಪಾದತಲೇ ಶುಭೌ ಸುರತ್ನಾಂಗದ ಕೇಯೂರ
ಕಾಂಚಿನೂಪುರ ಶೋಭಿತೆ
ಯಕ್ಷ ಕರ್ದಮ ಸಂಲಿಪ್ತ ಸರ್ವಾಂಗೆ ಕಟಕೋಜ್ವಲೇ
ಮಾಂಗಲ್ಯಾಭರಣೈ ಶ್ಚಿತ್ರೈಃ ಮುಕ್ತಾ ಹೊರೈ ರ್ವಿಭೂಷಿತೇ
ತಾಟಂಕೈ ರವತಂ ಸೃಶ್ಚ ಶೋಭಮಾನ ಮುಖಾಂಬುಜೆ
ಪದ್ಮಹಸ್ತೆ ನಮಸ್ತುಭ್ಯಂ ಪ್ರಸೀದ ಹರಿವಲ್ಲಭೆ
ಋಗ್ಯಜುಸ್ಸಾಮ ರೂಪಾಯೈ ವಿದ್ಯಾಯೈ ತೇ ನಮೋ ನಮಃ
ಪ್ರಸಿದಾಸ್ಮಾನ್ ಕೃಪಾದೃಷ್ಟಿಪಾತೈ ರಾಲೋಕಯಾಬ್ಧಿಜೆ
ಯೆ ದೃಷ್ಟಾ ಸ್ತೆ ತ್ವಯಾ ಬ್ರಹ್ಮಾ ರುದ್ರೇಂದ್ರತ್ವಂ ಸಮಾಪ್ನ ಯುಃ

ಬ್ರಹ್ಮಾದಿದೇವತೆಗಳ ಪ್ರಾರ್ಥನೆಯ ಮೇರೆಗೆ ಅಲಮೇಲುಮಂಗ ಪದ್ಮಾವತಿಯಾಗಿ ಪೂಜಿಸಲ್ಪಡುತ್ತಿರುವಳು. ಪೂರ್ವದಲ್ಲಿ ಈ ಪ್ರದೇಶವು ಶ್ರೀಶುಕಮಹರ್ಷಿಯ ಆಶ್ರಮವಾಗಿತ್ತಂತೆ. ಕಾಲಾನಂತರ ತಿರುಶುಕನೂರು ಎಂದು ಕರೆಯಲ್ಪಟ್ಟು ತಿರುಚಾನೂರು ಎಂದು ಬದಲಾಯಿತು ಎಂದು ಹಿರಿಯರು ಹೇಳುತ್ತಾರೆ.

ಅಂದಿನಿಂದ ಆಕೆ ಅವತರಿಸಿದ ಕಾರ್ತೀಕ ಶುದ್ಧ ಪಂಚಮಿಗೆ ಪೂರ್ತಿಯಾಗುವಂತೆ ಹತ್ತು ದಿನಗಳ ಕಾಲ ಬ್ರಹ್ಮಾದಿ ದೇವತೆಗಳ ಅಧ್ವರ್ಯದಲ್ಲಿ ತಿರುಚಾನೂರು ಪದ್ಮಾ ವತಿಗೆ ಉತ್ಸವಗಳು ನಡೆಯುತ್ತಿವೆ. ಅಂದಿನಿಂದ ಪಂಚಮಿಯಂದು ತಿರುಮಲೆಯ ಶ್ರೀನಿವಾಸನಿಂದ ಸೀರೆ ಮೊದಲಾದ ಮಂಗಳ ದ್ರವ್ಯಗಳು ಕಳುಹಿಸಲಾಗುತ್ತಿದೆ.

ಕೂಡಲೆ ವೆಂಕಟೇಶ್ವರನು ಅಲಮೇಲುಮಂಗಳನ್ನು ಆಲಂಗಿಸಿ ತನ್ನ ಹೃದಯದ ಮೇಲೆ ವ್ಯೂಹಲಕ್ಷ್ಮಿಯಾಗಿ ಪ್ರತಿಷ್ಠಾಪಿಸಿ ವೆಂಕಟಾಚಲಕ್ಕೆ ತೆರಳಿದ. ಅಲ್ಲಿದ್ದ ಆಕಾಶರಾಜನು ಪದ್ಮಾವತಿಯನ್ನು ಸಹ ವ್ಯೂಹ ಲಕ್ಷ್ಮಿಯಲ್ಲಿ ಐಕ್ಯ ಮಾಡಿದ. ಅಂದಿನಿಂದ ವೆಂಕಟೇಶ್ವರನು ಅಷ್ಟಲಕ್ಷ್ಮಿ ಸುಸಂಪನ್ನನಾಗಿ ಶ್ರೀನಿವಾಸ ಎಂಬ ಸಾರ್ಥಕವಾದ ಹೆಸರಿನಿಂದ ಅದ್ಭುತವಾದ ಸಾಲಗ್ರಾಮ ಶಿಲಾಮೂರ್ತಿಯಾಗಿ ರೂಪ ತಳೆದು ಭಕ್ತರೆಲ್ಲರಿಂದ ಕೀರ್ತಿಸಲ್ಪಡುತ್ತಾ ವರಗಳನ್ನು ನೀಡುತ್ತಿರುವನು.


ವಕ್ರಾಬ್ಜೆ ಭಾಗ್ಯಲಕ್ಷ್ಮೀಃ ಕರತಲಕಮಲೆ
ಸರ್ವದಾ ದಾನಲಕ್ಷ್ಮೀಃ
ದೂರ್ದಂಡೆ ವೀರಲಕ್ಷ್ಮೀಃ
ಹೃದಯ ಸರಸಿಜೆ ಭೂತಕಾರುಣ್ಯ ಲಕ್ಷ್ಮೀಃ
ಖಡ್ಗಾಗ್ರೇ ಶೌರ್ಯಲಕ್ಷ್ಮೀಃ
ನಿಖಿಲಗುಣ ಗಣಾಡಂಬರೇ ಕೀರ್ತಿಲಕ್ಷ್ಮೀಃ
ಸರ್ವಾಂಗೇ ಸೌಮ್ಯಲಕ್ಷ್ಮೀಃ
ಮಯಿತು ವಿಜಯತಾಂ ಸರ್ವಸಾಮ್ರಾಜ್ಯ
ಲಕ್ಷ್ಮೀಃ
ಓಂ ಶ್ರೀಯೈ ನಮಃ



**ತಿರುಮಲೆ ಸ್ವಾಮಿಯವರಿಗೆ 27-09-2022 ರಿಂದ 05-10-2022 ರ ವರೆಗೆ ನಡೆದ ಬ್ರಹ್ಮೋತ್ಸವ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ.,ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ. ವಿ. ವೀರಬ್ರಹ್ಮ ಐ.ಎ.ಎಸ್., ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್. ಮತ್ತು ಇನ್ನಿತರ ಉನ್ನತಾಧಿಕಾರಿಗಳು ಪಾಲ್ಗೊಂಡರು.**










# ತುಳಸಿ ಮತ್ತು ಧಾತ್ರಿ





– ಶ್ರೀಮತಿ. ಮಾಧುರಿ ದೇಶಪಾಂಡೆ

9481070245

ತುಳಸಿ ಮತ್ತು ಧಾತ್ರಿ ಬಹಳ ಉಪಯುಕ್ತ ಗಿಡಮೂಲಿಕೆಗಳು, ಇವಕ್ಕೆ ಔಷಧೀಯ ಗುಣಗಳಷ್ಟೇ ಅಲ್ಲದೇ ಧಾರ್ಮಿಕ ಮಹತ್ವ ಕೂಡ ಇದೆ.ಅದರಲ್ಲೂ ಕಾರ್ತೀಕ ಮಾಸದಲ್ಲಿ ವಿಶೇಷವಾಗಿ ತುಳಸಿಯನ್ನು ಉತ್ಥಾನ ದ್ವಾದಶಿಯಂದು ಮತ್ತು ಧಾತ್ರಿಯನ್ನು ವೈಕುಂಠ ಚತುರ್ದಶಿಯಂದು ಪೂಜಿಸಲಾಗುತ್ತದೆ. ಆಷಾಢಮಾಸದ ಏಕಾದಶಿಯಂದು ಆರಂಭವಾಗುವ ಚಾತುರ್ಮಾಸವು ಭಗವಂತನ ಯೋಗ ನಿದ್ರೆಯಿಂದ ಆರಂಭವಾಗಿ ಉತ್ಥಾನ ದ್ವಾದಶಿಯಂದು ಭಗವಂತ ಮಗ್ಗಲು ಬದಲಿ ಸುವ ದಿನದಂದು ಮುಗಿಯುತ್ತದೆ ಎಂಬ ನಂಬಿಕೆ ಇದೆ. ಉತ್ಥಾನ ದ್ವಾದಶಿಯಂದು ದಾಮೋದರನೊಂದಿಗೆ ತುಳಸಿ ವಿವಾಹವನ್ನು ಸಂಜೆ ಸಮಯದಲ್ಲಿ ಮಾಡಲಾಗುತ್ತದೆ.

ಹಿಂದೆ ಜಲಂಧರನೆಂಬ ರಾಕ್ಷಸನು ಇದ್ದನು ಅವನಿಗೆ ವೃಂದಾ ಎಂಬ ಮಹಾಪತಿವ್ರತೆಯಾದ ವಿಷ್ಣು ಭಕ್ತಳಾದ ಪತ್ನಿ ಇದ್ದಳು ಅವಳ ಬಲದಿಂದ ಜಲಂಧರನನ್ನು ಸೋಲಿಸಲು ಆಗುತ್ತಿರಲ್ಲಿಲ್ಲ. ಅವನ ಉಪದ್ರವ ತಾಳಲಾರದೆ ದೇವತೆಗಳು ಭಗವಂತನ ಬಳಿ ಪ್ರಾರ್ಥನೆ ಮಾಡಿದಾಗ ಭಗವಂತನು ವೃಂದೆಯ ಬಳಿ ಜಲಂಧರನ ರೂಪದಲ್ಲಿ ಹೋಗುತ್ತಾನೆ. ಭಗವಂತನ ಭಕ್ತಿಯಿದ್ದರೂ ಪತಿವ್ರತೆಯು ದೇವರನ್ನು ಗುರುತಿಸಿದಳು. ಆದರೂ ಜಲಂಧರನನ್ನು ರುದ್ರದೇವರು ಸಂಹಾರ ಮಾಡಿದ ಮೇಲೆ ವೃಂದೆ ಗಿಡವಾಗುತ್ತಾಳೆ. ಅವಳ ಭಕ್ತಿ ಮತ್ತು ತ್ಯಾಗಕ್ಕಾಗಿ  ದೇವರು ಅವಳನ್ನು ವರಿಸಿ ಉದ್ಧಾರ ಮಾಡುತ್ತಾನೆ ಎಂಬುದು ಒಂದು ಕಥೆಯಾದರೆ, ಇನ್ನೊಂದು ಕಥೆಯ ಪ್ರಕಾರರಾಧೆಯು ಶಾಪಗ್ರಸ್ಥಳಾಗಿ ತುಳಸಿ ಆಗಿದ್ದಾಳೆ ಎಂಬ ನಂಬಿಕೆಯು ಇದೆ. ದ್ವಾದಶಿಯಂದು ರಾಧಾ ದಾಮೋದರರನ ಮದುವೆಯನ್ನು ವಿಜೃಂಭಣೆಯಿಂದ ಮಾಡುತ್ತಾರೆ. ತುಳಸಿ ಇಲ್ಲದೆ ಏನನ್ನೂ ಪರಮಾತ್ಮನು ಸ್ವೀಕರಿಸುವುದಿಲ್ಲ.

ಇಷ್ಟು ಮಹತ್ವ ಇರುವ ತುಳಸಿಯಲ್ಲಿ ಔಷಧೀಯ ಗುಣಗಳಿವೆ. ತುಳಸಿಗಿಡ ಇರುವಲ್ಲಿ ಯಾವುದೇ ರೀತಿಯ ಕೀಟಗಳು ಬರುವುದಿಲ್ಲ ಮತ್ತು ಸೋಂಕು ನಿರೋಧಕ ಶಕ್ತಿ ಇರುವುದರಿಂದ ನೀರನ್ನು ಶುದ್ಧಗೊಳಿಸಲು,ಕಷಾಯಗಳನ್ನು ತಯಾರಿಸಲು ಕೂಡ ಬಳಸಲಾಗುತ್ತದೆ.

ಇನ್ನು ಧಾತ್ರಿ, ಕನ್ನಡದಲ್ಲಿ ಧಾತ್ರಿಗೇ ನೆಲ್ಲಿಕಾಯಿ ಎನ್ನುತ್ತಾರೆ. ಆರೋಗ್ಯ ದೃಷ್ಟಿಯಿಂದ ನೆಲ್ಲಿಕಾಯಿ ರೋಗ ನಿರೋಧಕ ವೈಜ್ಞಾನಿಕವಾಗಿ ಪ್ರಮುಖವಾಗಿರುವ ನೆಲ್ಲಿಕಾಯಿಯನ್ನು ಧಾರ್ಮಿಕವಾಗಿಯೂ ಕೂಡ ಅಷ್ಟೇ ಮಹತ್ವದಿಂದ ಪೂಜಿಸಲಾಗುತ್ತದೆ. ಧಾತ್ರಿಯ ಉತ್ಪತ್ತಿ ಪ್ರಳಯ ಕಾಲದಲ್ಲಿ ವಿಶ್ವವೆಲ್ಲ ಮುಳುಗಿತು. ಬ್ರಹ್ಮ ದೇವರು ಶ್ರೀಹರಿಯ ಕುರಿತು ತಪಸ್ಸು ಮಾಡು ತ್ತಿದ್ದ ಪದ್ಮಪೀಠದಲ್ಲಿ ಕುಳಿತಿದ್ದ ದೇವರು ಬ್ರಹ್ಮ ದೇವರ ತಪಸ್ಸಿಗೆ ಪ್ರಸನ್ನರಾಗಿ ಆಶೀರ್ವಾದಿಸಿ ವರ ನೀಡಿದಾಗ ಬ್ರಹ್ಮ ದೇವರ ಆನಂದ ಭಾಷ್ಪದಿಂದ ಜನಿಸಿದ್ದ ಧಾತ್ರಿ ವೃಕ್ಷವಾಯಿತು.

ಧಾತ್ರಿ ಮಹಿಮೆಯ ವೃತ್ತಾಂತವನ್ನು ಹೇಳುತ್ತಾರೆ. ಒಮ್ಮೆ ಕಾವೇರಿ ತೀರದಲ್ಲಿ  ದೇವಶರ್ಮ ಎಂಬ ಬ್ರಾಹ್ಮಣ ಇದ್ದನು. ಅವನಿಗೆ ಒಬ್ಬ ಮಗ ಅವನು ಉದ್ಧಟ ಇದ್ದನು. ಹಿರಿಯರಿಗೆ ಗೌರವಿಸುತ್ತಿರಲಿಲ್ಲ. ಕ್ರೂರಿಯಾಗಿದ್ದನು ಮಗನ ದುಶ್ಕೃತ್ಯಗಳಿಂದ ಬೇಸೊತ್ತು ಇಲಿ ಯಾಗೆಂದು ಶಾಪವನ್ನು ನೀಡಿದನು. ನಂತರ ತನ್ನ ತಪ್ಪಿನ ಅರಿವಾಗಿ ಕ್ಷಮೆ ಕೇಳಿದ ಮಗನಿಗೆ ಕಾರ್ತೀಕ ಮಾಸ ಮಹಾತ್ಮೆ ಕೇಳಿದ ನಂತರ ಶಾಪ ವಿಮೋಚನೆ ಎಂದು ಆಶೀರ್ವದಿಸಿದನು.ಒಂದು ಧಾತ್ರಿ ವೃಕ್ಷದಲ್ಲಿ ವಾಸವಿದ್ದನು. ಕಾಲಾನಂತರ ವಿಶ್ವಾಮಿತ್ರ ಋಷಿಗಳು ನದಿ ಸ್ನಾನಕ್ಕೆ ಬಂದಾಗ ಆಗ ಅಲ್ಲಿ ಕಾರ್ತಿಕ ಮಾಸ ಮಹಾತ್ಮೆಯನ್ನು ಶಿಷ್ಯರಿಗೆ ಹೇಳುವಾಗ ಆ ಮಹಾತ್ಮೆ ಕೇಳಿ ಇಲಿ ಜನ್ಮದಿಂದ ಮುಕ್ತನಾದನು.

ಚಾತುರ್ಮಾಸ ಸಮಯದಲ್ಲಿ ವ್ರತ ಮಾಡದೇ ಆರೋಗ್ಯದಲ್ಲಿ ಏರುಪೇರು ಆಗದಂತೆ ಇರಲು ಕಾರ್ತೀಕ ಮಾಸದ ಶುಕ್ಲ ಚತುರ್ದಶಿಯಿಂದ ಕಾರ್ತಿಕ ಮಾಸದ ಕೃಷ್ಣ ಪಂಚಮಿಯವರೆಗೂ ಎಂದು ಧಾತ್ರಿ ಹೋಮವನ್ನು ಮಾಡಲಾಗುತ್ತದೆ. ವೈಕುಂಠ ಚತುರ್ದಶಿಯಂದು ಶ್ರೇಷ್ಠ. ಮಂಗಳವಾರ, ಶುಕ್ರ ವಾರ ಮತ್ತು ಆದಿತ್ಯ ವಾರಗಳಂದು ಹೋಮ ಮಾಡಬಾರದು ಹೋಮದಲ್ಲಿ ನೆಲ್ಲಿಕಾಯಿಯ ಖಾದ್ಯವನ್ನು ಮಾಡಿಕೊಂಡು ಊಟ ಮಾಡಲಾಗುತ್ತದೆ. ಎಲ್ಲರೂ ಕೂಡಿ ವನಭೋಜನ ಮಾಡುತ್ತಾರೆ. ಹೋಮದಲ್ಲಿ ರಾಧಾದಾಮೋದರ ಭಿನ್ನ ಲಕ್ಷ್ಮೀನಾರಾಯಣರನ್ನು ಪೂಜಿಸಲಾಗುತ್ತದೆ. ಎಲ್ಲ ಭಾಂದವರೊಂದಿಗೆ ಕೂಡಿ ವನಭೋಜನ ಮಾಡುತ್ತಾರೆ.



# ತಿರುಮಲ ತಿರುಪತಿ ದೇವಸ್ಥಾನಗಳು

## ವಿಜ್ಞಪ್ತಿ

'ಸಪ್ತಗಿರಿ' ಬಗ್ಗೆ ತೋರಿಸುವ ಅಭಿಮಾನ ಅನನ್ಯ ಸಾಮಾನ್ಯ

ತಿ.ತಿ.ದೇ. ಹಾಗೂ ಪಾಠಕರಿಗೆ ಮಧ್ಯ ವಾರಧಿಯಾಗಿ ಇರುವ 'ಸಪ್ತವರ್ಣ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

'ಸಪ್ತಗಿರಿ' ಪತ್ರಿಕೆ ಬೆಲೆಯಲ್ಲಿ ಬದಲಾವಣೆ

ನಿಮ್ಮ ಮನೆಗೆ ಸಪ್ತಗಿರೀಶನು ಬಂದ ಅನುಭೂತಿಯನ್ನು ಪಡೆಯಿರಿ.

'ಸಪ್ತಗಿರಿ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆಗೆ ಚಂದಾದಾರರಾಗಿ ಕಟ್ಟಿ.



ಸ್ವಾಮಿಯವರ ಅಕ್ಷರ ಪ್ರಸಾದವನ್ನು ಪ್ರತಿ ತಿಂಗಳು ಪಡೆದು ಕೊಳ್ಳಿ





# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರಮಾಸಪತ್ರಿಕೆ

(ತೆಲುಗು, ತಮಿಳು, ಕನ್ನಡ, ಹಿಂದಿ, ಆಂಗ್ಲ, ಸಂಸ್ಕೃತ ಭಾಷೆಗಳು)

..... ಚಂದಾ ವಿವರಗಳು.....

ಬಿಡಿ ಪ್ರತಿ ರೂ. 20/-

ವಾರ್ಷಿಕ ಚಂದಾ : ರೂ. 240/-

ಆಜೀವ ಚಂದಾ : (12 ವರ್ಷಗಳು) ರೂ. 2,400/-

ವಿದೇಶಿ ವಾರ್ಷಿಕ ಚಂದಾ : ರೂ. 1030/-

ಬೆಲೆಯಲ್ಲಿ ಬದಲಾವಣೆ ಸೆಪ್ಟೆಂಬರ್, 2022 ರಿಂದ ಜಾರಿಗೆ ಬಂದಿದೆ.
ನೂತನ ಚಂದಾದಾರರಿಗೆ ಮಾತ್ರವೇ ಈ ಬದಲಾವಣೆ ವರ್ತಿಸುತ್ತದೆ.

ವಿವರಗಳಿಗೆ:

ಪ್ರಧಾನ ಸಂಪಾದಕರು, ತಿ.ತಿ.ದೇ., ಪ್ರೆಸ್ ಕಾಂಪೌಂಡ್ ಕೆ.ಟಿ.ರೋಡ್ಡು, ತಿರುಪತಿ : 517 507.

ಫೋನ್ : 0877 - 2264363 ,2264543



## ನವೆಂಬರ್ ತಿಂಗಳ

# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್

**ಮೇಷ**

ಜನ್ಮರಾಶಿಯ ರಾಹುವಿನಿಂದಾಗಿ ಮುಖ ಕಳಾಹೀನವಾಗಿರುತ್ತದೆ. ಕುಜ ವಕ್ರಿಯಾಗಿರುವುದರಿಂದ ಮಾತುಗಳನ್ನು ಹಿಡಿತದಲ್ಲಿರಿಸಿಕೊಳ್ಳುವುದು ಒಳ್ಳೆಯದು ಇತರರಿಗಾಗಿ ನಿಮ್ಮ ಬಿಡುವಿನ ವೇಳೆಯನ್ನು ವಿನಿಯೋಗಿಸುವಿರಿ ಮೋಜು ಮಸ್ತಿಗಳು ಕಂಡು ಬರುತ್ತವೆ. ದೈವಾರಾಧನೆಯಲ್ಲಿಯೂ , ಸಾಂಘಿಕ ಕಾರ್ಯಕ್ರಮಗಳಲ್ಲಿಯೂ ಚುರುಕಾಗಿ ಪಾಲ್ಗೊಳ್ಳುವಿರಿ ಗೃಹದಲ್ಲಿ ಶುಭಯೋಗ ಉಂಟಾಗಲಿದೆ ಕುಟುಂಬದ ಹಿರಿಯರ ಮನ್ನಣೆ ಸಿಗಲಿದೆ.

**ವೃಷಭ**

ಮನಸ್ಸಿನ ಧೈರ್ಯ ಹಾಗೂ ಸ್ವಶಕ್ತಿಯಿಂದ ಕಾರ್ಯಜಯವಾಗಲಿದೆ. ಉನ್ನತ ಅಧ್ಯಯನದಲ್ಲಿ ಮಕ್ಕಳು ವಿರಾಜಿಸುತ್ತಾರೆ. ಹೊರದೇಶ ಪ್ರಯಾಣಕ್ಕೆ ಅನುಕೂಲ ದೊರೆಯಲಿದೆ. ನಿಮಗೊದಗುವ ಹೊರದೇಶ ಪ್ರಯಾಣದಿಂದಾಗಿ ಉನ್ನತ ವಿದ್ಯೆಯ ಜೊತೆಗೆ ಮನೋರಂಜನೆಯೂ ದೊರೆಯಲಿದೆ ಸುಬ್ರಮಣ್ಯ, ಸೂರ್ಯದೇವರ ಆರಾಧನೆಯಿಂದಾಗಿ ದೇಹದ ಆರೋಗ್ಯ ಚೆನ್ನಾಗಿರುತ್ತದೆ.

**ಮಿಥುನ**

ಗೃಹದಲ್ಲಿನ ಸಮಸ್ಯೆಗಳು ತೊಲಗುತ್ತವೆ. ಕುಟುಂಬದಲ್ಲಿನ ವಾತಾವರಣ ಅನುಕೂಲಕರವಾಗಿರುತ್ತದೆ. ಸಂತಾನ ವಿಷಯದಲ್ಲಿ ಉನ್ನತಿಯನ್ನು ಕಾಣುವಿರಿ. ಮಾಸದ ಮೊದಲಾರ್ಧದಲ್ಲಿ ಕಲುಷಿತ ಆಹಾರ ಸೇವನೆಯಿಂದಾಗಿ ಅಜೀರ್ಣ, ಹೊಟ್ಟೆನೋವು ಕರುಳಿನ ಬಾಧೆವುಂಟಾಗುವುದು. ದೂರ ಪ್ರಯಾಣದಿಂದ ಆಯಾಸ, ಪಾಲುದಾರಿಕೆಯಲ್ಲಿ ಭೇದಗಳು ಶುಭಕಾರ್ಯಗಳನ್ನು ಪ್ರಯತ್ನ ಪಡುವಿರಿ. ಪ್ರಯತ್ನಗಳು ಫಲಿಸುತ್ತದೆ.

**ಕರ್ಕಾಟಕ**

ಪ್ರಿಯ ಸಂಭಾಷಣೆ, ಧನಕನಕ, ವಸ್ತು ವಸ್ತ್ರಲಾಭವುಂಟಾಗಲಿದೆ. ಪ್ರತಿಯೊಂದು ವಿಷಯವನ್ನು ಅನೇಕ ದೃಷ್ಟಿಗಳಿಂದ ಆಲೋಚಿಸುವುದು. ವಿಷಯ ವಿಶ್ಲೇಷಣೆ ಮಾಡುವುದು. ಸಮಯಪಾಲನೆ, ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಕಂಡು ಕೊಂಡು ಮುನ್ನಡೆಯುವಿರಿ. ಇನ್ನು ಹೊರಗಿನ ವಾತಾವರಣ ಅತ್ಯಂತ ಅನುಕೂಲಕರವಾಗಿರುತ್ತದೆ. ಇತರರನ್ನು ಪ್ರಭಾವಿತರನ್ನಾಗಿ ಮಾಡುವಿರಿ. ನಿಮಗೆ ಸಹಾಯ ಮಾಡಲು ಎಲ್ಲರೂ ಮುಂಬರುವರು.

**ಸಿಂಹ**

ಮನಸ್ಸಿನ ಆನಂದ ಸಾಧು ಸಂತರ ಒಡನಾಟ, ಆಧ್ಯಾತ್ಮಿಕ ಮುನ್ನಡೆ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳೊವಿಕೆ, ಕೈಲಾಗುವ ಸಹಾಯ ಮಾಡುವುದು, ಸಾಂಘಿಕ ಕಾರ್ಯಕ್ರಮಗಳಲ್ಲಿ ಕೈಲಾಗುವ ಸೇವೆ, ಆರ್ಥಿಕ ವಿಷಯಗಳು ಪ್ರೋತ್ಸಾಹಗೊಳ್ಳಲಿವೆ. ಅಷ್ಟಮ ಗುರುವಿನ ಪ್ರಭಾವದಿಂದಾಗಿ ತಲೆಯ ನರಗಳ ಮೇಲಿನ ಮಾಂಸಖಂಡಗಳ ಸೆಳೆತ, ಅಜೀರ್ಣವುಂಟಾಗುವ ಸಾಧ್ಯತೆಯಿದೆ. ಗುರುವಾರ ವ್ರತಗಳನ್ನು ಪಾಲಿಸುವುದು ವಿಹಿತ.

**ಕನ್ಯ**

ಶರೀರದಲ್ಲಿನ ದಾರ್ಢ್ಯವುಂಟಾಗಿ ಆರ್ಯುರಾರೋಗ್ಯ ವೃದ್ಧಿಸುವುದು. ಸ್ನೇಹಿತರ, ಸುತ್ತಮುತ್ತಲಿನ ಜನರೊಂದಿಗೆ ಸಹಪಂಕ್ತಿ ಭೋಜನ, ಮಕ್ಕಳ ಜೊತೆಯಲ್ಲಿ ಊಟ, ಆಕಸ್ಮಿಕ ಧನಲಾಭ,ಮಾನಸಿಕ ತೃಪ್ತಿಯಿಂದ ಮಾನಸಿಕ ಪ್ರಶಾಂತತೆ ಏರ್ಪಡಲಿದೆ. ಮಡದಿ-ಮಕ್ಕಳೊಂದಿಗೆ ಸಂತೋಷಕರವಾದ ವಾತಾವರಣವನ್ನು ಅನುಭವಿಸುವಿರಿ ಧನ-ಧಾನ್ಯಗಳ ವೃದ್ಧಿಯಾಗಲಿವೆ. ಅಷ್ಟಮ ರಾಹುವಿನ ಸಂಚಾರದಿಂದಾಗಿ ವ್ಯವಹಾರಿಕ ಪ್ರತಿಬಂಧಕಗಳಿದ್ದರೂ ಶನಿ, ಗುರು ಬಲದಿಂದ ಜಯ ಗೆಳಿಸಿ ಮುಂದೆ ಸಾಗುವಿರಿ.

**ತುಲಾ**

ಅಷ್ಟಮ ರಾಶಿಯಲ್ಲಿ ಕುಜನು ವಕ್ರವಾಗಿ ಸ್ತಬ್ಧನಾಗಿರುವುದರಿಂದ ಅಪಮೃತ್ಯು ದೋಷ ಪರಿಹಾರಕ್ಕಾಗಿ ರುದ್ರಾಭಿಷೇಕ ಮಾಡಿಸುವುದು ವಿಹಿತಿ ದ್ಯೂತದಂತಹ ವ್ಯಸನಿಗಳಿಗೆ ತೊಂದರೆಗಳು ತಪ್ಪಿದ್ದಲ್ಲ. ಧನ ವ್ಯಯವು ನಿಮ್ಮನ್ನು ತೊಂದರೆಗೀಡು ಮಾಡುತ್ತದೆ. ಸಂತಾನ ವಿಷಯದಲ್ಲಿ ಗಮನಹರಿಸುವಿರಿ. ಸ್ನೇಹಿತರ ಗೌರವ - ಮರ್ಯಾದೆಗಳು ನಿಮಗಿರುತ್ತದೆ.

**ವೃಶ್ಚಿಕ**

ತೀರ್ಥಯಾತ್ರೆಗಳು, ದೂರ ಪ್ರಯಾಣಗಳಿರುತ್ತವೆ. ಪ್ರಯಾಣದಿಂದ ಆಯಾಸವುಂಟಾಗಲಿದೆ. ದೀರ್ಘಕಾಲಿಕ ಅನಾರೋಗ್ಯದ ವಿಷಯಗಳಲ್ಲಿ ಜಾಗ್ರತೆ ಅವಶ್ಯಕ. ದೈವೀ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ಅನ್ನದಾನದಂಥಹ ಧಾರ್ಮಿಕ ವಿಷಯಗಳಲ್ಲಿ ಶ್ರದ್ಧೆ ವಹಿಸುವಿರಿ. ವಿದ್ಯೆಯ ವಿಷಯಗಳಲ್ಲಿ ಮತ್ತಷ್ಟು ಅಭಿವೃದ್ಧಿ ಕಾಣುತ್ತದೆ. ಪರಿಶೋಧನಾ ವ್ಯಾಖ್ಯಾನ ಬರೆಯುವುದು.

**ಧನಸ್ಸು**

ಮೋಜು - ಮಸ್ತಿಗಾಗಿ ಹಣ ವ್ಯಯಿಸುವಿರಿ. ವ್ಯಾಪಾರದಲ್ಲಿ ಅಧಿಕ ಲಾಭಗಳನ್ನು ಪಡೆಯುವಿರಿ. ಲಾಭ ಸ್ಥಾನದಲ್ಲಿ ರವಿ, ಬುಧ, ಶುಕ್ರ ಕೇತುಗಳು ಎಲ್ಲಾ ಗ್ರಹಗಳು ಒಳ್ಳೆಯ ಫಲಗಳನ್ನೀಯುತ್ತವೆ. ಆದಾಯದ ಹಲವು ಮೂಲಗಳು ಅನೂಹ್ಯ ರೀತಿಯಲ್ಲಿ ಬೆಳೆಯುತ್ತವೆ. ಒಳ್ಳೆಯ ಭವಿಷ್ಯಕ್ಕೆ ನಾಂದಿ ಹಾಡಲಿವೆ. ಹೊಸ ವ್ಯವಹಾರಗಳು ಕೈಗೊಡಲಿವೆ. ಗೌರವ ಹೆಚ್ಚಲಿದೆ ವಿದ್ಯಾರ್ಥಿಗಳು ಓದು ಅಧ್ಯಯನಗಳಲ್ಲಿ ಆಸಕ್ತಿ ವಹಿಸಿ, ಪ್ರಯತ್ನ ಪಟ್ಟು ಮುಂಬರಲಿದ್ದಾರೆ.

**ಮಕರ**

ಈ ಮಾಸದಲ್ಲಿ ಗ್ರಹಸ್ಥಿತಿ ಸ್ವಲ್ಪ ವ್ಯತಿರಿಕ್ತವಾಗಿಯೇ ಇರುತ್ತದೆ. ಪುಣ್ಯ ಕಾರ್ಯಗಳ ಶಕ್ತಿಯಿಂದ ಧರ್ಮಬುದ್ಧಿ - ಮನಸ್ತಾಪಗಳು ತೊಲಗುವಿಕೆ ವೃತ್ತಿ ವ್ಯಾಪಾರಗಳಲ್ಲಿ ಮುನ್ನಡೆ, ಉದ್ಯೋಗಾವಕಾಶ, ಸ್ಥಾನಪಲ್ಲಟದ ಸೂಚನೆ, ಧನದಾಯ ಮಾರ್ಗಗಳು ವೃದ್ಧಿಯಾಗಲಿವೆ. ಕೃಷಿ ಕಲಿತು ಬರಲಿದೆ. ಎಲ್ಲಾ ಕ್ಷೇತ್ರದವರಿಗೂ ಅವರವರ ಕ್ಷೇತ್ರದಲ್ಲಿ ಮತ್ತಷ್ಟು ಲಾಭವನ್ನು ತರಲಿದೆ. ಗುರುವಾರ ವ್ರತಾಚರಣೆಯ ನೇಮದಿಂದ ಗುರುಬಲವುಂಟಾಗಿ ಎಲ್ಲವೂ ಸಫಲವಾಗಲಿವೆ.

**ಕುಂಭ**

ಸರ್ವಾಧಿಕಾರಕ್ಕಾಗಿ ಮಾಡುವ ಯತ್ನಗಳೆಲ್ಲಾ ಫಲಿಸುತ್ತವೆ. ವಿದ್ಯಾರ್ಥಿಗಳು ಉದ್ಯೋಗ ಸಂಬಂಧಿ ನೇಮಕಾತಿ ಪರೀಕ್ಷೆಗಳಲ್ಲಿ ವಿರಾಜಿಸಿ ಉದ್ಯೋಗ ಪಡೆದುಕೊಳ್ಳುತ್ತಾರೆ. ಮನೆಯ ವಾತಾವರಣ ಅನುಕೂಲಕರವಾಗಿದ್ದು ಭೋಗ ಭಾಗ್ಯಗಳನ್ನುನುಭವಿಸುತ್ತಿರೀತಿ. ಸಂಪತ್ತು ವೃದ್ಧಿಯಾಗಲಿದೆ. ಕೃಷಿಕರಿಗೆ ಪ್ರತಿಬಂಧಕಗಳಿದ್ದರೂ ಬದಿಗೊಂಡು ಬೆಳೆಯು ಕೈಗೂಡುತ್ತದೆ. ಸಂತಾನವೃದ್ಧಿ, ಗೃಹ ನಿರ್ಮಾಣ ಕಾರ್ಯಗಳು ನೆರೆಗೊಳ್ಳುತ್ತವೆ.

**ಮೀನ**

ವೀಸಾ ಮೊದಲಾದ ಮಂಜುರಾತಿ ವಿಷಯಗಳಲ್ಲಿ ತೊಂದರೆಗಳು ತೊಲಗಿ ಹೋಗುತ್ತದೆ. ಸಮುದ್ರದ ಮೇಲೆ ಪ್ರಯಾಣಿಸಿ ಇತರೆ ದೇಶಗಳಿಗೆ ಹೋಗುವ ಅವಕಾಶವು ಬರುತ್ತವೆ. ಉದ್ಯೋಗಸ್ಥರಿಗೆ ಪದೋನ್ನತಿವುಂಟಾಗುತ್ತದೆ. ಧನವು ನಿಲ್ಲುತ್ತದೆ. ಲಾಭ ಸ್ಥಾನದಲ್ಲಿ ಶನಿ ಸಂಚಾರವು ಅನುಕೂಲವಾಗಿರುತ್ತದೆ. ಆಕಸ್ಮಿಕವಾಗಿ ಧನಲಾಭವಾಗಲಿದೆ. ಎಲ್ಲಾ ಕ್ಷೇತ್ರದವರಿಗೆ ಅನುಕೂಲಕರ ಸಮಯವಾಗಿದೆ.



# ಮಧ್ವಭಾಷ್ಯದ ಪ್ರಥಮ ಶ್ರೋತೃ ಶ್ರೀ ಪದ್ಮನಾಭ ತೀರ್ಥರು

– ಶ್ರೀಧರ ರಾಯಸಂ

ವಿಶ್ವಗುರು ಆಚಾರ್ಯಮಧ್ವರು ಉಡುಪಿಯಲ್ಲಿ ಅಷ್ಟಮಠ ಸ್ಥಾಪಿಸಿ, ಪ್ರಪ್ರಥಮವಾಗಿ ಎಂಟು ಸನ್ಯಾಸಿಗಳಿಗೆ ಯತಿ ದೀಕ್ಷೆ ನೀಡಿದುದರ ಜೊತೆಗೆ ಪದ್ಮನಾಭತೀರ್ಥರಿಗೆ ಯತಿ ದೀಕ್ಷೆ ನೀಡಿದ್ದು ವಿಶೇಷ! ದಕ್ಷಿಣ ಭಾರತ, ಉತ್ತರ ಭಾರತದಲ್ಲಿ ಸಂಚರಿಸಿ, ಮಧ್ವ ಸಿದ್ಧಾಂತ ಪ್ರಚಾರ ಮಾಡಲು ಆಚಾರ್ಯಮಧ್ವರು ಪದ್ಮನಾಭತೀರ್ಥರಿಗೆ ಆದೇಶಿಸಿ, ಅನುಗ್ರಹಿಸಿದರು. ಪಲಿಮಾರು ಮಠದ ಹೃಷಿಕೇಶತೀರ್ಥರು , ಅದಮಾರು ಮಠದ ನರಸಿಂಹತೀರ್ಥರು, ಕೃಷ್ಣಾಪುರ ಮಠದ ಜನಾರ್ದನ ತೀರ್ಥರು, ಪುತ್ತಿಗೆ ಮಠದ ಉಪೇಂದ್ರತೀರ್ಥರು, ಶಿರೂರು ಮಠದ ವಾಮನ ತೀರ್ಥರು, ಸೋದೆ ಮಠದ ವಿಷ್ಣುತೀರ್ಥರು, ಕಾಣಿಯೂರು ಮಠದ ರಾಮತೀರ್ಥರು, ಪೇಜಾವರ ಮಠದ ಅಧೋಕ್ಷಜತೀರ್ಥರು. ಪ್ರಪ್ರಥಮನಾಗಿ ನೇರವಾಗಿ ಸಂನ್ಯಾಸ ದೀಕ್ಷೆ ಶ್ರೀಮಧ್ವಾಚಾರ್ಯರಿಂದ ಪಡೆದ ಮಹನೀಯರು.ಪದ್ಮನಾಭತೀರ್ಥರ ನಂತರ ನರಹರಿ ತೀರ್ಥರು. ಮಾಧವತೀರ್ಥರು, ಅಕ್ಷೋಭ್ಯತೀರ್ಥರು ಸರ್ವಜ್ಞಪೀಠ ಅಲಂಕರಿಸಿ, ಮಧ್ವಸಿದ್ಧಾಂತ ಪ್ರಚಾರ ಮಾಡಿದ ಪ್ರಚಾರಕರಾದರು. ಐತರೇಯ ಉಪನಿಷತ್ತು ಮೂರು ಸಲ ಶ್ರೀಮಧ್ವಾಚಾರ್ಯರಿಂದ ಕೇಳುವ ಸೌಭಾಗ್ಯ ಪಡೆದ ಸತ್ಯತೀರ್ಥರು ಆಚಾರ್ಯರ ಗ್ರಂಥಗಳಿಗೆ ಲಿಪಿಕಾರರಾಗಿದ್ದುದು ವಿಶೇಷ !!

ಆಂಧ್ರಪ್ರದೇಶದ ಗೋದಾವರೀ ನದಿ ತೀರದ ಹತ್ತಿರ ಅನೇಕ ವಿದ್ವಾಂಸರು ಪಂಡಿತರು, ವೇದಗಳನ್ನು ಕರತಲಾಮಲಕ ಮಾಡಿಕೊಂಡ ವೇದ ಪಂಡಿತರು, ದಾರ್ಶನಿಕರು ಸಭೆ ಕರೆದಿದ್ದರು. ಆ ವಿದ್ವತ್ ಸಭೆಯ ನೇತೃತ್ವವನ್ನು ಶೋಭನಭಟ್ಟರೆಂಬ ಪ್ರಕಾಂಡ ಪಂಡಿತರು ವಹಿಸಿದ್ದರು. ಶ್ರೀಮಧ್ವಾಚಾರ್ಯರು ಶೋಭನಭಟ್ಟರ ವಿದ್ವತ್ ಸಭೆಗೆ ಆಗಮಿಸಿ, ವಿದ್ವಾಂಸರ ಅನೇಕ ಪಾಂಡಿತ್ಯ ಪೂರ್ಣ, ಗಹನವಾದ ಪ್ರಶ್ನೆಗಳಿಗೆ ಸರಾಗವಾಗಿ ಉತ್ತರಿಸಿದರು. ಆಚಾರ್ಯರ ಸಮಂಜಸ ಉತ್ತರಗಳಿಗೆ ಶೋಭನಭಟ್ಟರ ಸಹಿತ ಇನ್ನುಳಿದ ವಿದ್ವಾಂಸರು ಆಶ್ಚರ್ಯ, ದಿಗ್ಭ್ರಮೆಗೊಂಡರು. ಪ್ರತಿ ಪ್ರಶ್ನೆಗಳಿಗೆ ಉತ್ತರ ಅರ್ಥಗರ್ಭಿತವಾಗಿತ್ತು!! ತತ್ವ ಜಿಜ್ಞಾಸುಗಳಾಗಿದ್ದ ಶೋಭನಭಟ್ಟರು, ಸಾಕಷ್ಟು ಸಮಯವಾದ ಮಾಡಿ, ಶ್ರೀಮಧ್ವಾಚಾರ್ಯರಿಂದ ಚತುರ್ದ ಶಿಕ್ಷಣಗಳಲ್ಲಿ ಸೋತು, ಪರಾಭವಗೊಂಡರು. ಪರಾಭವಗೊಂಡ ಶೋಭನಭಟ್ಟರು, ಆಚಾರ್ಯಮಧ್ವರ ಶಿಷ್ಯತ್ವ ವಹಿಸಿ, ಅವರ ಬ್ರಹ್ಮಸೂತ್ರ ಭಾಷ್ಯದ ಉಪದೇಶ ಪಡೆಯಲು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು. ಆಚಾರ್ಯಮಧ್ವರು ಇವರ ಪ್ರಾರ್ಥನೆ ಮನ್ನಿಸಿ, ತಾವು ರಚಿಸಿದ ಬ್ರಹ್ಮ ಸೂತ್ರ ಭಾಷ್ಯ ಸಂತೋಷದಿಂದ ಉಪದೇಶಿಸಿದರು. ಶೋಭನಭಟ್ಟರು ಬ್ರಹ್ಮಸೂತ್ರ ಭಾಷ್ಯದ ಉಪದೇಶಕ್ಕೆ ಪ್ರಥಮ ಶ್ರೋತ್ರಗಳಾಗಿದ್ದುದು ಚರಿತ್ರಾರ್ಹ, ನಂತರ ಉಳಿದ ಯಾವ ಶಾಸ್ತ್ರದಲ್ಲೂ ಆಸಕ್ತಿಯಿಲ್ಲದೆ ಶೋಭನಭಟ್ಟರು ಮಧ್ವಶಾಸ್ತ್ರದ ಪರಮ ಸತ್ಯ ಪ್ರಸಾರದ ದೀಕ್ಷೆ ಹೊಂದಿ, ಭಾರತ ದೇಶದ ಉದ್ದಗಲ ಪ್ರಚಾರ ಮಾಡಲು ಸಂಚಾರ ಹೊರಟರು. ಅನೇಕ ಪ್ರತಿವಾದಿಗಳನ್ನು ಪರಾಭವಗೊಳಿಸಿ, ಆಸಕ್ತರಿಗೆ ಉಪದೇಶಿಸಿ,ತತ್ವ ಬೋಧೆಯ ಮಾರ್ಗದರ್ಶನ ಮಾಡಿದರು. ಮಧ್ವಶಾಸ್ತ್ರದಲ್ಲಿ ಆಸಕ್ತರಾಗಿ ಸಕಲ ಶಾಸ್ತ್ರಗಳನ್ನು ಅಧ್ಯಯನ ಮಾಡಿ, ಆಚಾರ್ಯಮಧ್ವರು ರಚಿಸಿದ ಅಧ್ಭುತ ಗ್ರಂಥ ಅನುವ್ಯಾಖ್ಯಾನಕ್ಕೆ ಶೋಭನಭಟ್ಟರು. "ಸನ್ಯಾಯ ರತ್ನಾವಳಿ" ಟೀಕಾ ಗ್ರಂಥ ರಚಿಸಿ ಭಕ್ತರಿಗೆ ನೀಡಿ ಮಹದುಪಕಾರ ಮಾಡಿದ ಮಹಾನುಭಾವರು.ಮಧ್ವಸಿದ್ಧಾಂತ ಶೋಭನಭಟ್ಟರಿಗೆ ಬಲಮುರಿ

ಶಂಖದಂತೆ ಪುಣ್ಯಕರ ಸಿದ್ಧಾಂತವೆಂದು ಅರಿತಿದ್ದರು. ಈ ಸಿದ್ಧಾಂತದ ಸಾರ್ಥಕ ಅಧ್ಯಯನ, ಪಾಠ ಪ್ರವಚನಗಳು, ಇಹಪರಗಳೆರಡರಲ್ಲೂ ಅನುಪಮ ಸುಖ ನೀಡುವುದೆಂದು ಭಕ್ತಾದಿಗಳಿಗೆ ತಿಳಿಸಿ ಹೇಳಿದರು. ಮಧ್ವಭಾಷ್ಯದ ಪ್ರಥಮ ಶ್ರೋತೃಗಳಾಗಿ, ಪ್ರಥಮ ಪ್ರಚಾರಕರಾಗಿದ್ದುದು ಇವರಿಗೆ ದೈವ ಕರುಣಿಸಿದ ವಿಶೇಷ ಭಾಗ್ಯ ಎನ್ನಬಹುದು.

ಶೋಭನಭಟ್ಟರ ಪಾಂಡಿತ್ಯ ಮಧ್ವಸಿದ್ಧಾಂತದಲ್ಲಿ ಅನುಪಮ ಆಸಕ್ತಿ ಕಂಡು ಆಚಾರ್ಯಮಧ್ವರು, ಶೋಭನಭಟ್ಟರಿಗೆ "ಪದ್ಮನಾಭ ತೀರ್ಥ''ಎಂದು ನಾಮಾಂಕಿತ ಮಾಡಿ, ಆಶ್ರಮ ನೀಡಿ ವೇದಾಂತ ಸಾಮ್ರಾಜ್ಯ ಪಾಲಿಸುವ ಪರಮಭಾಗ್ಯಕ್ಕೆ ಕಾರಣೀಭೂತರಾದರು. ಪದ್ಮನಾಭತೀರ್ಥರು ನಂತರ ಆಚಾರ್ಯಮಧ್ವರ ಬ್ರಹ್ಮಸೂತ್ರ ಭಾಷ್ಯಕ್ಕೆ "ಸತ್ತರ್ಕ ದೀಪಾವಲೀ'' ಎಂಬ ಟೀಕೆ ಬರೆದು "ಪ್ರಥಮ ಮಾಧ್ವ'' ಟೀಕಾ ಕಾರರಾಗಿದ್ದುದು ಇತಿಹಾಸ ವಾಯಿತು!!

ಸುಮಧ್ವವಿಜಯದಲ್ಲಿ, ತ್ರಿವಿಕ್ರಮ ಪಂಡಿತಾಚಾರ್ಯರ ಪುತ್ರರಾದ ನಾರಾಯಣ ಪಂಡಿತಾಚಾರ್ಯರು ಮುಕ್ತಕಂಠದಿಂದ ಪದ್ಮನಾಭತೀರ್ಥರನ್ನು ಕೊಂಡಾಡಿದ್ದಾರೆ. ಪದ್ಮನಾಭತೀರ್ಥರು ವೇದ ಪ್ರವಚನಾಚಾರ್ಯರೆಂದು ಅರಿಯಬಹುದು. ಅಗಾಧ ಪಾಂಡಿತ್ಯ ವಿದ್ವತ್ ಪಡೆದ ಪದ್ಮನಾಭತೀರ್ಥರು ಸುಮಾರು ಹದಿನೈದು ಗ್ರಂಥಗಳನ್ನು ರಚಿಸಿ ಭಕ್ತರಿಗೆ ನೀಡಿದ್ದಾರೆ. ಸರ್ವಜ್ಞ ಪೀಠ ಅಲಂಕರಿಸಿದ ಏಳೇ ವರ್ಷದಲ್ಲಿ ಅಗಾಧ ಕೆಲಸ ಮಾಡಿ, ಶ್ರೀರಂಗದಲ್ಲಿ ವಾಕ್ಯಾರ್ಥಗಳಲ್ಲಿ ಜಯಶೀಲರಾಗಿ, ಅಲ್ಲಿ ಮಠಗಳನ್ನು ಸ್ಥಾಪಿಸಿ, ಅನೇಕ ಶಿಷ್ಯರನ್ನು ಸಂಪಾದಿಸಿದ ಕೀರ್ತಿ ಪದ್ಮನಾಭತೀರ್ಥರಿಗೆ ಸಲ್ಲುತ್ತದೆ. ಕ್ರಿ.ಶ. 1317 ರಿಂದ 1324 ರ ವರೆಗೆ ಪದ್ಮನಾಭ ತೀರ್ಥರು ಸರ್ವಜ್ಞಪೀಠ ಅಲಂಕರಿಸಿ, ಮಧ್ವಸಿದ್ಧಾಂತ ಪ್ರಚಾರ ಮಾಡಿ, ಕೊಪ್ಪಳ ಜಿಲ್ಲೆಯ, ಆನೆಗುಂದಿ ಹತ್ತಿರ ತುಂಗಭದ್ರಾ ನದಿಯ ಗಡ್ಡೆಯಲ್ಲಿ (ನವ ವೃಂದಾ ವನ) ಕ್ರಿ.ಶ. 16-11-1324 ಕಾರ್ತೀಕ ಬಹುಳ ಚತುರ್ದಶಿಯಂದು ವೃಂದಾವನಸ್ಥರಾದರು. ನರಹರಿ ತೀರ್ಥರಿಗೆ ಯತಿ ಆಶ್ರಯ ನೀಡಿ ಪದ್ಮನಾಭತೀರ್ಥರು ಮಧ್ವರ ಗ್ರಂಥಗಳ ಪ್ರಥಮ ಟೀಕಾ ಕಾರರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದುದು ಇತಿಹಾಸವಾಯಿತು!!

ಪೂರ್ಣ ಪ್ರಜ್ಞಕೃತಂ ಭಾಷ್ಯಂ ಆದೌತದ್ಭಾವ ಪೂರ್ವಕಂ
ಯೋ ವ್ಯಾಕರೋನ್ನ ಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ!!

## ಸಪ್ತಗಿರಿ ಕ್ವಿಜ್ ಸೆಪ್ಟೆಂಬರ್ 2022 ತಿಂಗಳ ರಸಪ್ರಶ್ನೆಯ ಉತ್ತರಗಳು

1. ಶ್ರೀನಿವಾಸನು
2. 'ಸುಪ್ರಭಾತ'
3. ಗೋವಿನಲ್ಲಿ
4. ರುದ್ರ (ಶಿವ)
5. ಗೋಗರ್ಭತೀರ್ಥ
6. ಗರುಡ
7. ಗರುಡವಾಹನ
8. ಲಡ್ಡು
9. ಅಲಿಪಿರಿ
10. ಕೈದಾಳ
11. ಹೃಷಿಕೇಶ್
12. ತಿರುಪತಿಯ ಸಮೀಪ
13. 2015
14. 14 ವರ್ಷ
15. ಅವಲಕ್ಕಿ



ರಸಪ್ರಶ್ನೆಗಳು

2

## ಸೆಪ್ಟೆಂಬರ್ 2022 ತಿಂಗಳ ರಸಪ್ರಶ್ನೆಯ ವಿಜೇತರು

1. ಕೆ. ಎಸ್ ಸ್ನೇಹ
ಗಂಗಾವತಿ ಅಂಚೆ
ಕರ್ನಾಟಕ


2. ಅಥಿತಿ ಎಸ್.ಎ.
ಬೆಂಗಳೂರು
ಕರ್ನಾಟಕ



# ವಿಜಯಪುರದ ವೆಂಕಟೇಶ್ವರ ದೇವಾಲಯಗಳು

- ಶ್ರೀರಂಗ ಪುರಾಣಿಕ

96638 72037



ಆಶ್ವೀಜ ಮಾಸದಲ್ಲಿ ನಮ್ಮ ನಾಡ ಹಬ್ಬ ದಸರಾದ ನವರಾತ್ರಿ ಪ್ರಾರಂಭವಾಗುತ್ತದೆ. ಶಕ್ತಿದೇವತೆಯಾದ ಚಾಮುಂಡೇಶ್ವರಿದೇವಿ ಒಂಬತ್ತು ದಿನಗಳಲ್ಲಿ, ಒಂಬತ್ತು ಅವತಾರಾ ತಾಳಿ, ಒಂಬತ್ತು ರಾಕ್ಷಸರನ್ನು ಸಂಹರಿಸಿದಳೆಂಬ ಪ್ರತೀತಿ ಪುರಾಣದ ಕಥೆಗಳು ಉಲ್ಲೇಖಿಸುತ್ತವೆ. ಹತ್ತನೇ ದಿನ ದಸರಾ ಹಬ್ಬ, ಆ ದಿನ ಬನ್ನಿ ಎಲೆಗಳನ್ನು ವಿನಿಮಯ ಮಾಡಿಕೊಂಡು ಹಿರಿಯರಿಂದ ಆಶೀರ್ವಾದ ಪಡೆಯಲಾಗುತ್ತದೆ. ವಿಜಯಪುರದ ಜಿಲ್ಲೆಯ ಗ್ರಾಮ ಭಾಷೆಯಲ್ಲಿ ಇದನ್ನು "ಮುಡಿಯುವದು" ಎನ್ನುತ್ತಾರೆ. "ಬನ್ನಿ ತಗೊಂಡು ಬಂಗಾರ ದಂಗಿರೋಣ" ಹೇಳುತ್ತ ಬನ್ನಿ ವಿನಿಮಯ ಮಾಡಿಕೊಳ್ಳುತ್ತಾರೆ. ಇದೇ ಅಶ್ವೀಜ ನವರಾತ್ರಿ ದಿನಗಳಲ್ಲಿ ತಿರುಪತಿಯ ವೆಂಕಟೇಶ್ವರನ ಉತ್ಸವಗಳು ನಡೆಯುತ್ತವೆ. ತಿರುಪತಿ ವೆಂಕಟೇಶ್ವರ ಆರಾಧಕರು. ವೆಂಕಟೇಶ್ವರ ದೇವಾಲಯಗಳಲ್ಲಿಯೂ ಈ ದಿನಗಳಲ್ಲಿ ವೆಂಕಟೇಶ್ವರ ನವರಾತ್ರಿಯನ್ನು ಆಚರಣೆ ಮಾಡುತ್ತಾರೆ.

ಗುಮ್ಮಟನಗರಿ ವಿಜಯಪುರದಲ್ಲಿ ಒಟ್ಟು ಐದು ವೆಂಕಟೇಶ್ವರ ದೇವಾಲಯಗಳಿವೆ. ಅವುಗಳಲ್ಲಿ ನಾಲ್ಕು ದೇವಾಲಯಗಳು ಇನ್ನೂ ಮುನ್ನೂರುವರ್ಷ ಹಳೆಯ ಐತಿಹಾಸಿಕ ದೇವಾಲಯಗಳು. ಅವುಗಳ ಕಿರುಪರಿಚಯ ಇಲ್ಲಿದೆ.

### 1.ಇಬ್ರಾಹಿಂಪೂರದ ವೆಂಕಟೇಶ್ವರ ದೇವಾಲಯ

ಓರೆಯಾಗಿ ವೆಂಕಟೇಶ್ವರ ಎಂದು ಕರೆಯಲ್ಪಡುವ ಇನ್ನೂರಕ್ಕು ಹೆಚ್ಚು ವರ್ಷಗಳ ಹಳೆಯ ದೇವಾಲಯ ಇಬ್ರಾಹಿಂಪುರ ನಗರದಲ್ಲಿದೆ.

ದೇವಾಲಯದ ಹಿನ್ನೆಲೆ - ಇಬ್ರಾಹಿಂಪೂರ ರೈಲ್ವೆಗೇಟ್ ಸನೀಹದಲ್ಲಿನ ವೆಂಕಟೇಶ್ವರ ದೇವಾಲಯ ಶತಮಾನದ ಇತಿಹಾಸವುಳ್ಳ, ಐತಿಹ್ಯವುಳ್ಳ ಜಾಗೃತ ದೇವಾಲಯ. ಶ್ರೀವೆಂಕಟೇಶ್ವರ ಭಕ್ತರೊಬ್ಬರಿಗೆ "ಸೂರ್ಯೋದಯ ಒಳಗಾಗಿ ನನ್ನ ಪ್ರತಿಷ್ಠಾಪಿಸಬೇಕು" ಎಂದು ಸ್ವಪ್ನದಲ್ಲಿ ವೆಂಕಟರಮಣ ಸ್ವಾಮಿ ಹೇಳುತ್ತಾರೆ. ಆ ಭಕ್ತರು ಸ್ವಪ್ನಾದೇಶದಂತೆ ಪ್ರತಿಷ್ಠಾಪನೆಗೆ ಮುಂದಾಗುತ್ತಾರೆ. ಇನ್ನೇನು ಪ್ರತಿಷ್ಠಾಪನೆ ಕಾರ್ಯಮುಗಿಯಬೇಕು ಅಷ್ಟರೊಳಗೆ ಪೂರ್ವದಿಕ್ಕಿನಲ್ಲಿ ಸೂರ್ಯನ ಆಗಮನವಾಗಿ ಬಿಡುತ್ತದೆ. ವೆಂಕಟೇಶ್ವರಸ್ವಾಮಿ ಪೂರ್ಣವಾಗಿ ಪ್ರತಿಷ್ಠಾಪನೆಗೊಳ್ಳದೆ, ಓರೆಯಾಗಿಯೇ ಪ್ರತಿಷ್ಠಾಪನೆಗೊಳ್ಳುತ್ತಾರೆ. ಹೀಗಾಗಿ ಈ ವೆಂಕಟೇಶ್ವರ ಸ್ವಾಮಿಯ ದೇವಾಲಯವನ್ನು ಓರೆ ವೆಂಕಟೇಶ್ವರ ದೇವಾಲಯವೆಂದು ಕರೆಯಲಾಗುತ್ತಿದೆ.

### ವೆಂಕಟೇಶ್ವರ ಮೂರ್ತಿ

ಗರ್ಭಗುಡಿಯಲ್ಲಿ ನಾಲ್ಕು ಅಡಿಯ ಎತ್ತರದ ವೆಂಕಟೇಶ್ವರಸ್ವಾಮಿ ವಿರಾಜಮಾನವಾಗಿ ನೆಲಸಿದ್ದಾನೆ. ಅಭಿಮುಖವಾಗಿ ಪ್ರಾಂಗಣದಲ್ಲಿ ಪ್ರಾಣ ದೇವರ ಮೂರ್ತಿಯಿದೆ. ಬಲ ಭಾಗದಲ್ಲಿ (ಸ್ವಾಮಿ ಬಲಭಾಗ) ಲಕ್ಷ್ಮೀದೇವಿಯ ಮೂರ್ತಿ ಇದೆ. ಪ್ರತಿವರ್ಷ ವೆಂಕಟೇಶ್ವರ ನವರಾತ್ರಿಯ ಒಂಭತ್ತು ದಿನವೂ ವಿಶೇಷ ಪೂಜೆ, ಪುನಸ್ಕಾರಗಳು ಜರುಗುತ್ತದೆ. ಆ ದಿನಗಳಲ್ಲಿ ಸ್ವಾಮಿಗೆ ವಿಶೇಷ ಅಲಂಕಾರವು ಮಾಡಲಾಗಿರುತ್ತದೆ.

### 2. ಗುಜ್ಜರ್‌ಗಲ್ಲಿಯ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯ

ನಗರದ ಗುಜ್ಜರ್‌ಗಲ್ಲಿಯಲ್ಲಿರುವ ಶ್ರೀಲಕ್ಷ್ಮೀ ವೆಂಕಟೇಶ್ವರ ದೇವಾಲಯ ಇನ್ನೂರ ಐವತ್ತು ವರ್ಷಗಳ ಹಳೇ ದೇವಾಲಯವಾಗಿದೆ.ಎರಡು ಶತಮಾನಗಳ ಹಿಂದೆ ಪ್ರತಿವರ್ಷವೂ ನವ







ರಾತ್ರಿಗೆ ತಿರುಪತಿ ವೆಂಕಟೇಶ್ವರ ದರ್ಶನ ಮಾಡುತ್ತಿದ್ದ ಗುಡಿ ಮನೆತನದ ಬ್ರಾಹ್ಮಣ ಕುಟುಂಬ ಪೂರ್ವಜರಿಗೆ ತಿರುಪತಿಯ ತಿಮ್ಮಪ್ಪ ಇನ್ನು ಮೇಲೆ ತನ್ನ ತಿರುಪತಿಯ ಉತ್ಸವ ಮೂರ್ತಿಯನ್ನು ತಂದು ಪ್ರತಿಷ್ಠಾಪನೆ ಮಾಡಿ ಪ್ರತಿವರ್ಷವೂ ನವರಾತ್ರಿ ಮಾಡುವಂತೆ ಸ್ವಪ್ನಾದೇಶ ನೀಡಿದ. ಅದರಂತೆ ಆ ಗುಡಿ ವಂಶಜರು ತಿರುಪತಿಗೆ ಹೋಗಿ ಅಲ್ಲಿಯ ಉತ್ಸವ ಮೂರ್ತಿಯನ್ನು ತಂದು ಪ್ರತಿಷ್ಠಾಪನೆ ಮಾಡುತ್ತಾರೆ. ಆ ದೇಗುಲವೇ ಗುಜ್ಜರ್ ಗಲ್ಲಿಯ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯ.

ಎರಡು ಶತಮಾನದ ಇತಿಹಾಸವಿರುವ ಈ ದೇವಾಲಯದಲ್ಲಿ ಪ್ರತಿವರ್ಷವೂ ಅದ್ದೂರಿಯಿಂದ ನವರಾತ್ರಿ ಉತ್ಸವವೂ ಜರುಗುತ್ತದೆ. ಇದು ಖಾಸಗಿ ಸ್ವಾಯತ್ತದಲ್ಲಿ ಇರುವಂತಹ ದೇವಾಲಯವಾದರೂ ಭಕ್ತಾದಿಗಳು ದರ್ಶನಕ್ಕೆ ಅವಕಾಶವಿದೆ. ಪರ್ಯಾಯ-ಇಲ್ಲಿಯ ವಿಶೇಷವೆಂದರೆ ವೆಂಕಟೇಶ್ವರ ಸ್ಥಾಪಿಸಿದ ಗುಡಿ ಮನೆತನದ ಪೂರ್ವಜರ ಸಂಸಾರ ವೀಗ ದೊಡ್ಡದಾಗಿ ಬೆಳೆದಿದೆ. ಈಗ ಅಣ್ಣ ತಮ್ಮಂದಿರು ಉಡುಪಿಯ ಪರ್ಯಾಯದಂತೆ ಪ್ರತಿವರ್ಷವೂ ಒಬ್ಬೊಬ್ಬರೂ ನವರಾತ್ರಿ ಪೂಜಾ ಕೈಂಕರ್ಯ ಹೊಣೆ ಹೊತ್ತು ಕೊಳ್ಳುತ್ತಾರೆ.

**3. ಶಿಖಾರಖಾನೆಯ ವೆಂಕಟೇಶ್ವರ ದೇವಾಲಯ**

ಶಿಖಾರಖಾನೆಯ ವೆಂಕಟೇಶ್ವರ ದೇವಾಲಯದ ವೆಂಕಟೇಶ್ವರ ಮೂರ್ತಿ ಪ್ರಾಚೀನವಾಗಿರುವುದು. ಈ ಮೊದಲು ಸುಲ್ತಾನರ ಅರಮನೆ ಇರುವ ಜಾಗದಲ್ಲಿ ದೇವಾಲಯವಿತ್ತು ತದನಂತರ ಈಗಿನ ಶಿಖರಖಾನೆಯ ಈ ಸ್ಥಳಕ್ಕೆ ಸ್ಥಳಾಂತರ ಮಾಡಲಾಯಿತು. ಎರಡು ಅಡಿ ಎತ್ತರವಿರುವ ಶ್ರೀದೇವಿ ಭೂದೇವಿ ಸಹಿತನಾದ ವೆಂಕಟೇಶ್ವರ ವಿಶಿಷ್ಟವಾದ ವಿಗ್ರಹವಿದೆ. ಮುಂಭಾಗದಲ್ಲಿ ಪ್ರಾಣದೇವರು ಇರುವರು.ದೇವಾಲಯ ಸಂಪೂರ್ಣವಾಗಿ ನವೀಕರಣಗೊಂಡಿದೆ.

**4. ಕಮಲಖಾನ ಬಜಾರ ವೆಂಕಟೇಶ್ವರ ದೇವಾಲಯ**


ನಗರದ ಕಮಲಖಾನ ಬಜಾರಿನ ಗಣಪತಿ ಚೌಕ್ ಸನಿಹದಲ್ಲಿ ಬರುವ ವೆಂಕಟೇಶ್ವರ ದೇವಾಲಯ ಸ್ಥಳೀಯರು ನೀಡುವ ಮಾಹಿತಿ ಪ್ರಕಾರ ಸರಿ ಸುಮಾರು ಎಂಬತ್ತು ವರ್ಷ ಹಳೆಯ ದೇವಾಲಯವಾಗಿದೆ. ವಿಶೇಷವೆಂದರೆ ಸಾಮಾನ್ಯವಾಗಿ ವೆಂಕಟೇಶ್ವರ, ನರಸಿಂಹ ಮುಂತಾದ ವಿಷ್ಣು ಅವತಾರಗಳ ದೇವಾಲಯಗಳಿಗೆ ಅರ್ಚಕರು ಬ್ರಾಹ್ಮಣರಾಗಿರುತ್ತಾರೆ. ಅದರಲ್ಲೂ ಉತ್ತರಕರ್ನಾಟಕ ಭಾಗದಲ್ಲಿ ವಿಷ್ಣು ದೇಗುಲಗಳಿಗೆ ಅವರೇ ಅರ್ಚಕರಾಗಿರುವುದು ಹೆಚ್ಚು, ಆದರೇ ಈ ಕಮಲ್ ಖಾನ್ ಬಜಾರಿನ ವೆಂಕಟೇಶ್ವರ ದೇವಾಲಯದ ಅರ್ಚಕರು ಬ್ರಾಹ್ಮಣರೇತರಾಗಿದ್ದಾರೆ ಮತ್ತು ಇದನ್ನು ಕಟ್ಟಿಸಿದವರು ರಜಪೂತ ಸಮುದಾಯದವರಾಗಿದ್ದಾರೆ. ಗರ್ಭಗುಡಿಯಲ್ಲಿ ಸಾಲಿಗ್ರಾಮ ಶಿಲೆಯ ವೆಂಕಟೇಶ್ವರ ಶ್ರೀದೇವಿ, ಭೂದೇವಿ ಸಹಿತ ವಿರಾಜಮಾನನಾಗಿರುವವನು ಹಾಗೂ ಹಿಂಬದಿಯ ಕಮಾನಿನ ಮೇಲ್ಭಾಗದಲ್ಲಿ ನರಸಿಂಹದೇವರಿರುವರು. ಇನ್ನೊಂದು ಐತಿಹ್ಯ ಪ್ರಕಾರ ಈ ಮೂರ್ತಿಗಳು ಭೂಮಿ ಅಗೆಯುವಾಗ ಸಿಕ್ಕಂತ ಮೂರ್ತಿಗಳಾಗಿರಬಹುದು ಎಂಬ ಅಭಿಪ್ರಾಯವೂ ಕೆಲ ಸ್ಥಳೀಯ ನಿವಾಸಿಗಳು ವ್ಯಕ್ತಪಡಿಸುತ್ತಾರೆ.

ಇಲ್ಲಿ ದಿನನಿತ್ಯ ಪೂಜೆ ಪುರಸ್ಕಾರಗಳು ನೆರವೇರುತ್ತವೆ ಹಾಗೂ ವೆಂಕಟೇಶ್ವರ ನವರಾತ್ರಿ ಹಾಗೂ ವಿಶೇಷ ಸಂದರ್ಭದಲ್ಲಿ ವಿಶೇಷ ಪೂಜೆ ಪುರಸ್ಕಾರಗಳು ನೆರವೇರುತ್ತವೆ.

**5. ವಿಷ್ಣು ಸಹಸ್ರನಾಮದ ಭವನದ ವೆಂಕಟೇಶ್ವರ ದೇವಾಲಯ:**

ವಿಜಯಪುರ ನಗರದ ಕುಲಕರ್ಣಿ ಲೇಔಟ್‌ನಲ್ಲಿರುವ ವಿಷ್ಣು ಸಹಸ್ರನಾಮದ ದೇವಾಲಯದಲ್ಲಿ ಆರಡಿ ಎತ್ತರದ ವೆಂಕಟೇಶ್ವರ ಮೂರ್ತಿ ಸಾಲಿಗ್ರಾಮ ಶಿಲೆಯಿಂದ ನಿರ್ಮಿಸಲಾಗಿದೆ. ಪಂಡಿತ ವೇದನಿಧಿಯಾಚಾರ್ಯ ಕುಲಕರ್ಣಿ ಈ ದೇವಾಲಯ ನಿರ್ವಾಹಕರು. ೨೦೧೯ ರಲ್ಲಿ ಉತ್ತರಾದಿ ಮಠದ ಸತ್ಯಾತ್ಮತೀರ್ಥರ ಅಮೃತಹಸ್ತದಿಂದ ಈ ವೆಂಕಟೇಶ್ವರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಯಿತು.

# ಹರಿದಾಸರ ಕೃತಿಗಳಲ್ಲಿ ಶ್ರೀನಿವಾಸನ ವೈಭವ



ಶತಮಾನಗಳಿಂದ ಕರ್ನಾಟಕದ ಸಾಹಿತ್ಯ. ಸಂಗೀತ ಸಂಸ್ಕೃತಿಗಳಿಗೆ ಮೂಲಭೂತವಾಗಿರುವುದೇ ನಮ್ಮ ಸನಾತನ ಧರ್ಮ, ಇಂತಹ ಸನಾತನ ಧರ್ಮದ ಮೂಲಕ ಉತ್ತಮ ಸಾಮಾಜಿಕ ವಾತಾವರಣವನ್ನು ನಿರ್ಮಿಸಿದ ಶ್ರದ್ಧಾಳುಗಳಲ್ಲಿ ಹರಿದಾಸರು ಪ್ರಮುಖರು. ಇಂತಹ ಹರಿದಾಸರು ಜೀವನದಲ್ಲಿ ನಿಷ್ಠೆ.ಸಾಹಿತ್ಯದಲ್ಲಿ ಗಹನವಾದ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಪ್ರಯತ್ನ ಮಾಡಿದ ಮಹಾನುಭಾವರೆನ್ನಬಹುದು.

ದೇವ ಭಾಷೆಯಾದ ಸಂಸ್ಕೃತದಲ್ಲಿದ್ದ ವಿಚಾರಗಳನ್ನು ಜನಮಾನಸಕ್ಕೆ ಮುಟ್ಟಿಸುವ ಭಗೀರಥರೇ ಹರಿದಾಸರೆನ್ನಬಹುದು. ತಮ್ಮ ಅಭಿವ್ಯಕ್ತಿಯ ಮೂಲಕ ಕನ್ನಡ ಭಾಷೆಯಲ್ಲಿ ಸರಳ ಹಾಡುಗಳನ್ನು ಹಾಡಿ ತಮ್ಮೆಡೆಗೆ ಆಕರ್ಷಿಸಿದರಲ್ಲದೇ ಅನುಭವಾಮೃತದ ಸಾರವನ್ನು ಜನಸಾಮಾನ್ಯರಿಗೆ ಪದ ಪದ್ಯಗಳ ಮೂಲಕ ಉಣಬಡಿಸಿ,ತಮ್ಮ ಸಾಂಸ್ಕೃತಿಕ ಅಭಿರುಚಿಯನ್ನು ಧಾರೆ ಎರೆದರು.


ಈ ಕಲಿಯುಗದಲ್ಲಿ ಕ್ಷಮಾ ಸಮಾಧಾನದ ಭಕ್ತ ಪ್ರಿಯನಾದ ಶ್ರೀಶ್ರೀನಿವಾಸ ತನಗೆ ಅವತಾರವಿಲ್ಲದಿದ್ದರೂ ಸುಜೀವಿಗಳು ಧರ್ಮಮಾರ್ಗದಿಂದ ಚ್ಯುತರಾಗದಂತೆ ನಿರಂತರ ರಕ್ಷಿಸಲು ಭೂ ವೈಕುಂಠವಾದ ವೆಂಕಟಾದ್ರಿಯಲ್ಲಿ ಬಂದು ನಿಂತಿದ್ದಾನೆ. ಇಂತಹ ಸ್ವಾಮಿಯ ಸೇವೆಯಿಂದ ತಮ್ಮ ಜನ್ಮಸಾರ್ಥಕ ಪಡಿಸಿಕೊಳ್ಳುತ್ತಾ ಜಗತ್ತಿಗೆ ಬೆಳಕು ನೀಡಿದ ಹರಿದಾಸರ ನೇಕರು. ಅವರಲ್ಲಿ ವಿಶೇಷವಾಗಿ ಶ್ರೀಪಾದರಾಜರು, ಶ್ರೀವ್ಯಾಸರಾಜರು ಶ್ರೀವಾದಿರಾಜರು, ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು, ಶ್ರೀ ಜಗನ್ನಾಥ ದಾಸರು ಅಗ್ರಗಣ್ಯರು. ಕಲಿಯುಗದಲ್ಲಿ ಭಗವಂತನ ಅನುಗ್ರಹ ಪಡೆಯಲು ಭಕ್ತಿಯಿಂದ ಶ್ರೀಹರಿಯ ಗುಣಗಳನ್ನು ಹೊಗಳಿ ಹಾಡುವುದೇ ಸುಲಭ ಮಾರ್ಗ ಎಂದು ಸಾರಿದರು.

- ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ
9060 931959

ಭೂವೈಕುಂಠವೆಂದೇ ಹೆಸರಾದ ತಿರುಪತಿಯ ವೆಂಕಟಾದ್ರಿಯಲ್ಲಿ ನೆಲೆನಿಂತ ಶ್ರೀನಿವಾಸ ಕಲಿಯುಗದ ಆದಿದೈವವೆಂದೇ ಪ್ರಸಿದ್ಧವಾಗಿದ್ದಾನೆ.

“ವೆಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೆ ನಾಸ್ತಿ ಕಿಂಚನ
ವೆಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ ”

ಎಂಬ ಬ್ರಹ್ಮ ಪುರಾಣದ ಸಾಲು ಶ್ರೀನಿವಾಸನ ವೆಂಕಟಾದ್ರಿಯ ವೈಶಿಷ್ಟ್ಯಗಳನ್ನು ಎತ್ತಿ ಹಿಡಿಯುತ್ತದೆ. ಭಕ್ತಿ ಸಾಹಿತ್ಯದ ಧಾರೆಯಾಗಿ ಹರಿದು ಬಂದ ದಾಸಸಾಹಿತ್ಯ ವಾಹಿನಿ ಮೂಲಕ ಹರಿದಾಸರು ಶ್ರೀನಿವಾಸನ ಪಾದಗಳಿಗೆ ಅಭಿಷೇಕ ಮಾಡಿ ಪುನೀತರಾಗಿದ್ದಾರೆ. ಸಾರ್ಥಕ ಸುಜೀವಿಗಳಾಗಿದ್ದಾರೆ. ಧನ್ಯರಾಗಿ ಮಾನ್ಯರಾಗಿ ಮೆರೆದಿದ್ದಾರೆ. ಶ್ರೀನಿವಾಸನ ಕರುಣೆಯಿಂದಲೇ ಹೊಮ್ಮಿದ ಕೃತಿಗಳನ್ನು ಶ್ರೀನಿವಾಸನ ಬಣ್ಣನೆಗೆ ಸಾಧನೆಗಳಾಗಿಸಿ ಕೊಂಡರು ಸಾಧಕ ಜೀವಿಗಳಾದರು.



ಕನ್ನಡದಲ್ಲಿ ಭಕ್ತಿ ವಾಙ್ಮಯಕ್ಕೆ ಸೂಕ್ತ ಸ್ಥಾನ ಕಲ್ಪಿಸಿ ಕೊಟ್ಟ ಹರಿದಾಸರು, ತಿಳಿಗನ್ನಡದಲ್ಲಿ ರಚಿಸಿದ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಾಗ ಬದ್ಧವಾಗಿ ಹಾಡಿ ಸಂಗೀತವನ್ನು ಪ್ರಸಿದ್ಧಿಗೆ ತಂದರು. ಹರಿದಾಸ ಸಂಸ್ಕೃತಿಯನ್ನು ಉಚ್ಚಮಟ್ಟಕ್ಕೆ ತಂದಂತಹ, ಈ ಹರಿದಾಸರು ರಚಿಸಿದ ಕೀರ್ತನಾದಿ ಪ್ರಕಾರಗಳಲ್ಲಿ ಮೂಡಿ ಬಂದ ಶ್ರೀನಿವಾಸನ ವರ್ಣನೆಯು ಶ್ರವಣ ಮನಕಾನಂದವೀವುದು ಎಂಬುವಷ್ಟರ ಮಟ್ಟಿಗೆ ಜಾಜ್ವಲ್ಯ ಸಾಹಿತ್ಯದಿಂದ ಪರಿಶೋಭಿಸುತ್ತಿವೆ. ಕೀರ್ತನಾದಿಗಳೆಂಬ ಆಣಿ ಮುತ್ತುಗಳನ್ನೆಲ್ಲ ಈ ಭೂಮಿಕೆಯಲ್ಲಿ ಹೆಣೆದು ಹರಿದಾಸರ ಅಂತರಂಗದಲ್ಲಿ ಹುದುಗಿದ ಶ್ರೀನಿವಾಸನ ಕುರಿತಾದ ಭಕ್ತಿ ಸ್ವರೂಪವನ್ನು ಇಲ್ಲಿ ಪಡಿಮೂಡಿಸಲಾಗಿದೆ.

ದಾಸಶ್ರೇಷ್ಠರಾದ ಶ್ರೀಪುರಂದರದಾಸರು ಶ್ರೀನಿವಾಸನನ್ನು ಕುರಿತು ಅನನ್ಯವಾಗಿ ಸ್ತುತಿಸಿದ್ದಾರೆ. ಭಕ್ತರಿಗೆ ಎಲ್ಲವೂ ಆಗಿರುವ ಶ್ರೀನಿವಾಸನನ್ನು ವರ್ಣಿಸಿದ ಬಗೆ ಹೀಗಿದೆ.

“ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆ ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೇ ಸ್ವದೇಶಿ
ನಿನ್ನ ಅರಸಿ ಲಕ್ಷ್ಮೀ ಎನಗೆ ತಾಯಿಯುಂಟು
ತೋರೋ ಪುರಂದರವಿಠಲ”

ನಮ್ಮ ಹರಿದಾಸರಿಗೆ ಶೇಷಾಚಲ ವಾಸಿಯಾದ ಶ್ರೀನಿವಾಸನೆಂದರೆ ಪರಮೋತ್ಕೃಷ್ಟ ಅವನ ವರ್ಣನೆಗೆ ಅದೆಷ್ಟು ಪದ, ಸುಳಾದಿ, ಉಗಾಭೋಗ, ಮುಂಡಿಗೆಯೋ ? ಅಷ್ಟಾದರು ಅವನ ಅಚಿಂತ್ಯಾದ್ಭುತ ಮಹಿಮೆಯನ್ನು ವರ್ಣಿಸಲು ಸಾಧ್ಯವೇ? ಕುಲ ಕೋಟಿ ಉದ್ಧರಿಸುವ ಅವರ ದಿವ್ಯನಾಮಗಳು, ಸಾಲಿಗ್ರಾಮ ಶಿಲಾ ರೂಪದಲ್ಲಿ ಸ್ವಯಂವ್ಯಕ್ತನಾಗಿ ನಿಂತ ಅವನ ಭಂಗಿ, ಸೂರ್ಯ ಕೋಟಿ ಪ್ರಭೆಯಿಂದ ಪ್ರಜ್ವಲಿಸುವ ಮುಖ ಕಮಲ, ಅವನ ಕಲ್ಯಾಣದ

ವೈಭೋಗ, ತನ್ನ ವಾಸಕ್ಕಾಗಿ ಈ ಪ್ರದೇಶವನ್ನು ಆಯ್ಕೆ ಮಾಡಿದ ಹಿನ್ನೆಲೆ. ಈ ಪ್ರದೇಶ ಪೌರಾಣಿಕ ಹಿನ್ನೆಲೆ. ಅವನ ಉತ್ಸವಗಳು, ಅವನ ಭಕ್ತರ ಭಕ್ತಿ ವೈಚಿತ್ರ್ಯ, ಕಲ್ಪನೆಗೆ ಎಟುಕದ ಅವನ ಅಸದೃಶ ಪವಾಡಗಳು.... ಹೀಗೆ ಹತ್ತು ಹಲವು ಕಾರಣಗಳಿಂದ ಇಂದು ಈ ಕ್ಷೇತ್ರವು ಅದ್ವಿತೀಯ ಭೂವೈಕುಂಠವೆಂದೇ ಖ್ಯಾತ ವಾಗಿದೆ.

ಕರ್ನಾಟಕದ ಸಂಗೀತ ಪಿತಾಮಹರೆಂದೆನಿಸಿದ ಪುರಂದರದಾಸರು ತಿರುಪತಿಯ ತಿಮ್ಮಪ್ಪನ ಕುರಿತಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

'ಬಂದು ನಿಂತಿಹನು ನೋಡೆ ಭೂತಳದಿ ವೆಂಕಟ
ಇಂದಿರೆಯೊಡಗೂಡಿ ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ ಆನಂದವ ಬೇಡಿ"

ಎಂದು ತಿರುಮಲಾಧೀಶನನ್ನು ಪರಿಚಯಿಸುತ್ತಾರೆ. ಪ್ರತಿ ಶುಕ್ರವಾರಕ್ಕೊಮ್ಮೆ ತೊಡಿಸುವ ಹಾರ ಮುಕುಟಾಭರಣ ಕುಂಡಲಾದಿಗಳಿಂದ ಅಲಂಕೃತನಾಗಿದ್ದ ತಿರುಮಲೇಶನನ್ನು

"ವಾರವಾರಕೆ ಪೂಜೆಗೊಂಬುವ
ಹಾರ ಮುಕುಟಾಭರಣ ಕುಂಡಲ
ಧಾರಿ ಭುಜಕೇಯೂರು ಭೂಷಿತ
ಮಾರಪಿತ ಗುಣ ಮೋಹನಾಂಗ"

ಎಂಬುವುದಾಗಿ ಗುಣಗಾನ ಮಾಡಿದ್ದಾರೆ. ಭಗವಂತನ ಚಾರುಪೀತಾಂಬರ ಕಟಿ. ಕರವೀರ ಕಲ್ಹಾರಾದಿ ಹೂಗಳಿಂದ ಶೋಭಿಸುವ ಕೊರಳು, ಅವನ ನಗುಮುಖಗಳನ್ನು ಕಣ್ತುಂಬ ನೋಡಿ, ತೃಪ್ತಿಯಿಂದ ಬಣ್ಣಿಸಿದ್ದಾರೆ. ಆದಿಮಧ್ಯಾಂತರಹಿತನೂ ಸ್ವಾಮಿ ಪುಷ್ಕರಣೀತೀರನೂ ಆದ ತಿರುಮಲೇಶ, ಬ್ರಹೋತ್ಸವದ ವೈಭವಗಳಿಂದ ಮೆರೆಯುತ್ತಿರುವನೆನ್ನುತ್ತಾರೆ,ಅಂದರೆ ಪುರಂದರ ದಾಸರು ತಿರುಪತಿಯ ಬ್ರಹ್ಮೋತ್ಸವದ ಕಾಲದಲ್ಲಿ ತಿಮ್ಮಪ್ಪನ ದರ್ಶನಕ್ಕೆ ಹೋಗಿದ್ದರೆಂದು ಕಾಣುತ್ತದೆ. ತಿರುಮಲೇಶನ ಮೂರ್ತಿ ಯನ್ನು ಕಂಡ ಅವರ ಸಂತೃಪ್ತಿ ಈ ಕೀರ್ತನೆ ರೂಪದಲ್ಲಿ ಹೊರ ಹೊಮ್ಮಿದೆ.

ಹಾಗೆಯೇ ಶೇಷಾಚಲ ನಿವಾಸನಾದ ಶ್ರೀನಿವಾಸನ ದಾಸನಾಗುವ ತಮ್ಮ ಮನದ ಇಂಗಿತವನ್ನು ಹೊರಹಾಕುತ್ತ

ದಾಸನ ಮಾಡಿಕೊ ಎನ್ನ
ಸಾಸಿರನಾಮದ ವೆಂಕಟರಮಣ
ದುರಿತರಾಶಿಗಳೆಲ್ಲ ತಂದು ಸ್ವಾಮಿ
ಪುರಂದರ ವಿಠಲ ಕರುಣದಿ ಕರೆದು

ಎಂಬುವುದಾಗಿ ಆ ಭಗವಂತನಲ್ಲಿ ಮೊರೆಯಿಟ್ಟಿದ್ದಾರೆ. ಕನಕದಾಸರು ತಿರುಮಲೇಶನನ್ನು ಮನಸಾರೆಯಾಗಿ ಸ್ಮರಿಸುತ್ತಾ

ಶೇಷಾಚಲ ಕಾಗಿಲೆಯಾದಿಕೇಶದ
ದಾಸರ ದಾಸರ ದಾಸರ ಮನೆಯ
ಬಂಟನಾಗಿ ಬಾಗಿಲ ಕಾಯ್ವೆ

ಎಂಬುದಾಗಿ ನುಡಿದಿದ್ದಾರೆ. ಇವರು ತಮ್ಮ ಮತ್ತೊಂದು ಕೃತಿಯಲ್ಲಿ ತಿರುಮಲೇಶನನ್ನು ಕುರಿತು -

ಸಾಕು ಸಾಕು ಮನುಜ ಸೇವೆಯು
ರಂಗಯ್ಯ ಇನ್ನು ಒಡೆಯ ವೆಂಕಟಾದ್ರಿ ಮಾಧವಾ

ಎಂಬುವುದಾಗಿ ನುಡಿದ್ದಾರೆ. ಪುರಂದರದಾಸರಂತೆಯೇ ವಿಜಯದಾಸರು ತಿರುಮಲೇಶನನ್ನು

ಸಾಗಿ ಬಾರಯ್ಯ ನೀನಿ ಗೋವಿಂದ
ವೆಂಕಟ ಸಾಗಿ ಬಾರಯ್ಯ ಭವರೋಗ ವೈದ್ಯನೇ

ಎಂಬುವುದಾಗಿ ಮನತುಂಬಿ ಕರೆದಿದ್ದಾರೆ ಹಾಗೆಯೇ -

ಬಾ ಬಾ ಭಕುತರ ಹೃದಯ ಮಂದಿರ
ಬಾಬಾ ಜಗದೋದ್ಧಾರ
ಬಾ ಬಾನೇಕಾವತಾರ - ಧೀರ

ಎಂಬುದಾಗಿ ಮತ್ತೊಂದು ಕೃತಿಯಲ್ಲಿ ನಿವೇದಿಸಿದ್ದಾರೆ.

ಶ್ರೀನಿವಾಸನು ಹರಿದಾಸರಿಗೆ ಒಡೆಯನಾಗಿ, ಒಡನಾಡಿ ಯಾಗಿ, ಇನಿಯನಾಗಿ, ತನಯನಾಗಿ ಕಂಡಿದ್ದಾನೆ, ಕಾಡಿದ್ದಾನೆ. ಭಕ್ತಿಯ ಪಂಚಭಾವಗಳಲ್ಲಿ ಹರಿದಾಸರು ಹರಿಯನ್ನು ಕಾಡುವ, ಬೇಡುವ, ಮೋಹಿಸುವ, ಹೊಗಳುವ, ನಿಂದಿಸುವ, ಛೇಡಿಸುವ, ಅಭಿವ್ಯಕ್ತಿಸುವ ಪರಿ ಅನನ್ಯವಾಗಿ ಮೂಡಿ ಬಂದಿದೆ. ನವವಿಧ ಭಕ್ತಿಯ ಮೂಲಕವು ಹರಿದಾಸರು ಶ್ರೀನಿವಾಸನನ್ನು ಹಾಡಿ ಹೊಗಳಿದ್ದಾರೆ. ಕೆಲವರು ತಮ್ಮನ್ನು ಕಾಪಾಡಬೇಕೆಂದು ಮೊರೆ ಯಿಟ್ಟರೆ,ಮತ್ತೆ ಕೆಲವರು ಅವನ ದರ್ಶನದಿಂದ ತಮಗಾದ ಅಪಾರವಾದ ಆನಂದವನ್ನು ವ್ಯಕ್ತಪಡಿಸುತ್ತಾರೆ. ತಿರುಪತಿಯ ಬ್ರಹ್ಮೋತ್ಸವ, ರಥೋತ್ಸವ, ಪಲ್ಲಕ್ಕಿ ಉತ್ಸವ, ಶ್ರೀನಿವಾಸ ಕಲ್ಯಾಣ ಇತ್ಯಾದಿಗಳ ಪ್ರಸ್ತಾಪ ಮಾಡಿದ್ದಾರಲ್ಲದೇ, ವೆಂಕಟನ ಚರಣ ಕಮಲಗಳಿಗೆ ವಂದಿಸಿ ತಮ್ಮ ಸೇವೆಯನ್ನು ಅರ್ಪಿಸಿದ್ದಾರೆ.



# ಪರಮಕಾರ್ಣಿಕ ಕ್ಷೇತ್ರ ಕುಕ್ಕೆ ಶ್ರೀ ಸುಬ್ರಹ್ಮಣ್ಯ

- ಡಾ॥ ಸಗ್ರಿ ಆನಂದತೀರ್ಥ

97434 49915







ಪಶ್ಚಿಮಘಟ್ಟಗಳ ತಪ್ಪಲಲ್ಲಿ ೨೨ ಕಿಲೋಮೀಟರ್‌ಗಳ ದೂರದಲ್ಲಿ ಒಂದು ಪುಟ್ಟ ಹಳ್ಳಿ. ಕುಮಾರಪರ್ವತದಿಂದ ಹನ್ನೊಂದು ಕಿಲೋಮೀಟರ್ ಕೆಳಗಿಳಿದು ಬಂದರೆ ಸಿಗುವಂತಹ ಪ್ರದೇಶ. ಇಲ್ಲಿ ವರ್ಷದ ಕನಿಷ್ಟ ಹತ್ತು ತಿಂಗಳು ಮಳೆ ಬರದೇ ಇರದು. ಇಂತಹ ಪ್ರಕೃತಿ ರಮಣೀಯವಾದ "ಕುಕ್ಕೆ ಸುಬ್ರಹ್ಮಣ್ಯ" ಎಂಬ ಕ್ಷೇತ್ರವು ಇಡೀ ಕರ್ನಾಟಕದಲ್ಲೇ ಅತಿ ಹೆಚ್ಚು ಭಕ್ತರನ್ನು ಸೆಳೆಯುವ ಪ್ರದೇಶವಾಗಿದೆ. ವಾಸುಕೀ ಸಹಿತನಾಗಿ ಸುಬ್ರಹ್ಮಣ್ಯನು ನೆಲಸಿ ಭಕ್ತರನ್ನು ಅನುಗ್ರಹಿಸುತ್ತಿರುವ ಈ ಪರಮ ಕಾರಣಿಕ ಕ್ಷೇತ್ರದ ಬಗ್ಗೆ ಒಂದು ಪುಟ್ಟ ಪರಿಚಯ ಈ ಲೇಖನದ ಉದ್ದೇಶ.

**ಸ್ಥೂಲ ಪರಿಚಯ :**

ರೌಪ್ಯಪೀಠಂ ಕುಮಾರಾದ್ರಿಃ ಕುಂಭಕಾಶೀ ಧ್ವಜೇಶ್ವರಃ।
ಕ್ರೋಡಗೋಕರ್ಣಮೂಕಾಂಬಾಃ ಸಪ್ತೈತೆ ಮೋಕ್ಷದಾಯಕಾಃ ॥ ಯಾತ್ರಾಕಲ್ಪಲತಾ

ಯಾತ್ರಾಕಲ್ಪಲತಾ ಗ್ರಂಥದಲ್ಲಿ ಉಲ್ಲೇಖಗೊಂಡಿರುವಂತೆ ಪರಶುರಾಮಕ್ಷೇತ್ರದ ಉಡುಪಿ.ಕುಮಾರ ಪರ್ವತ ಕುಂಭಾಶಿ, ಧ್ವಜಕ್ಷೇತ್ರ, ಶಂಕರನಾರಾಯಣ ಗೋಕರ್ಣ ಮತ್ತು ಕೊಲ್ಲೂರು ಮೂಕಾಂಬಿಕಾ ಎಂಬ ಏಳು ಮುಕ್ತಿ ಪ್ರದಾಯಕ ಕ್ಷೇತ್ರಗಳಲ್ಲಿ ಈ ಸುಬ್ರಹ್ಮಣ್ಯ ಕ್ಷೇತ್ರವೂ ಒಂದು.ಆಗಲೇ ತಿಳಿಸಿದಂತೆ ಪಶ್ಚಿಮ ಘಟ್ಟಗಳ ತಪ್ಪಲಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ನಲ್ಲಿರುವ ಪುಟ್ಟ ಗ್ರಾಮ "ಕುಕ್ಕೆ ಸುಬ್ರಹ್ಮಣ್ಯ". ಸುತ್ತಲೂ ಕುಮಾರ ಧಾರಾ ನದಿ. ಪೂರ್ವದಲ್ಲಿ ಕುಮಾರ ಪರ್ವತಗಳ ಮಧ್ಯೆ ವಾಸುಕಿ ಸುಬ್ರಹ್ಮಣ್ಯ ದೇವರ ಸನ್ನಿಧಾನ. ಪಕ್ಕದಲ್ಲೇ ಶ್ರೀಮಧ್ವಾ ಚಾರ್ಯರಿಂದ ಪೂಜಿತನಾದ ನರಸಿಂಹ ನೆಲೆಸಿದ್ದಾನೆ. ಆದುದರಿಂದಲೇ ಇಲ್ಲಿ ಬರೇ ದೇವಸ್ಥಾನ ಮಾತ್ರವಲ್ಲ ಇಡೀ ಊರೇ ಅತ್ಯಂತ ಸನ್ನಿಧಾನ ಯುಕ್ತ ಪ್ರದೇಶವಾಗಿ ಗೋಚರಿಸುತ್ತದೆ.

**ಪೌರಾಣಿಕ ಹಿನ್ನೆಲೆ:**

ವಸ್ತುತಃ ಪುರಾಣಗಳು ಕುಮಾರ ಪರ್ವತದಲ್ಲಿ ನೆಲೆಸಿರುವ ಸ್ಕಂದನನ್ನು ಉಲ್ಲೇಖಿಸುತ್ತವೆ. ಆದರೆ ಈ ಸುಬ್ರಹ್ಮಣ್ಯ ದೇವಾಲಯವು ಅಸ್ತಿತ್ವಕ್ಕೆ ಬಂದ ಬಗ್ಗೆ ನಿಖರವಾದ ಮಾಹಿತಿ ಸಿಗುವುದಿಲ್ಲ.ನಮ್ಮಲ್ಲಿ ಸುಬ್ರಹ್ಮಣ್ಯ ಹಾಗೂ ವಾಸುಕಿಯನ್ನು ಜೊತೆ ಜೊತೆಗೇ ಪೂಜಿಸುವ ಕ್ರಮ ಬಂದಿದೆ,ವಸ್ತುತಃ ವಾಸುಕಿಗೂ ಸುಬ್ರಹ್ಮಣ್ಯನಿಗೂ ಯಾತರ ಸಂಬಂಧವೂ ಇಲ್ಲ ಹಾಗಿದ್ದರೂ ಇಬ್ಬರನ್ನೂ ಜೊತೆಯಲ್ಲಿ ಪೂಜಿಸುವ ಕ್ರಮ ಹೇಗೆ? ಎಂಬುದರ ಬಗ್ಗೆ ಸ್ಕಂದಪುರಾಣದಲ್ಲಿ ಬರುವ ಒಂದು ವಿಚಾರವನ್ನು ಸ್ಥೂಲವಾಗಿ ನೋಡೋಣ.

ಒಂದು ಸಂದರ್ಭದಲ್ಲಿ ವಾಸುಕಿಯು ಗರುಡನ ಬಾಧೆಯಿಂದ ದುಃಖಿಸುವಾಗ, ಕಶ್ಯಪರು ಶಿವನನ್ನು ಕುರಿತು ತಪಸ್ಸು ಮಾಡುವಂತೆ ಹೇಳುತ್ತಾರೆ. ಸಹ್ಯ ಪರ್ವತದಲ್ಲಿ ವಾಸುಕಿಯು



ಶಿವನನ್ನು ತಪಸ್ಸಿನ ಮೂಲಕ ಒಲಿಸಿಕೊಳ್ಳುತ್ತಾನೆ. ಆಗ ಶಿವನು ವರ ಕೊಡುತ್ತಾನೆ.

"ಹೇ ವಾಸುಕಿ, ಮುಂದಿನ ಕಲ್ಪದಲ್ಲಿ ನನ್ನ ಮಗನಾದ ಸ್ಕಂದನು ದುಷ್ಟರಾದ ಅಸುರರನ್ನು ಸಂಹರಿಸಿ,ಕುಮಾರ ಪರ್ವತಕ್ಕೆ ಬರುತ್ತಾನೆ. ಆಗ ಇಂದ್ರದೇವರು ಸ್ಕಂದನಿಗೆ ತನ್ನ ಮಗಳಾದ ದೇವಸೇನೆಯನ್ನು ಕೊಟ್ಟು ಮದುವೆ ಮಾಡುತ್ತಾರೆ. ಆಗ ಆ ಸ್ಕಂದನು ತನ್ನ ಜೊತೆ ನಿನ್ನನ್ನು ಕುಮಾರ ಪರ್ವತದಲ್ಲಿ ಸ್ಥಾಪನೆ ಮಾಡುತ್ತಾನೆ. ಅನಂತರ ಅಲ್ಲಿ ದೇವತೆಗಳು.ಮನುಷ್ಯರು ಮೊದಲಾದ ಎಲ್ಲರಿಂದ ಪೂಜಿತನಾಗು ಎಂಬುದಾಗಿ.

ಮುಂದೆ ಸ್ಕಂದನು ಅನೇಕ ಅಸುರರನ್ನು ಸಂಹರಿಸಿ, ಕುಮಾರ ಪರ್ವತಕ್ಕೆ ಬಂದಾಗ, ಅಲ್ಲಿಗೆ ದೇವತೆಗಳೆಲ್ಲಾ ಬರುತ್ತಾರೆ. ಇಂದ್ರದೇವರು ತನ್ನ ಮಗಳನ್ನು ಮದುವೆಯಾಗುವಂತೆ ಹೇಳುತ್ತಾರೆ. ಆಗ ಸ್ಕಂದನು ಒಪ್ಪಿಕೊಳ್ಳುತ್ತಾನೆ. ಆಗ ಋಷಿಗಳು ವಾಸುಕಿಗೆ ರುದ್ರದೇವರು ಕೊಟ್ಟ ವರವನ್ನು ನೆನಪಿಸಿ ವಾಸುಕಿಯನ್ನು ರಕ್ಷಿಸಬೇಕೆಂದು ಸ್ಕಂದನಿಗೆ ತಿಳಿಸುತ್ತಾರೆ. ಆಗ ಸ್ಕಂದ ನೀಡಿದ ಮಾತು ಇದು-ನಾನು ವಾಸುಕಿಯನ್ನು ಕೂಡಿ ಕೊಂಡು ಧಾರಾತೀರದಲ್ಲಿ ವಾಸಿಸುವೆನು.ನವಿಲಿನ ಮೇಲೆ ಕುಳಿತು ಪೂಜೆಯನ್ನು ಸ್ವೀಕರಿಸುವಂತಾಗಲಿ. ದೇವ. ಮಾನವ ರೆಲ್ಲರೂ ಧಾರಾನದಿಯಲ್ಲಿ ಸ್ನಾನ ಮಾಡಿ. ವಾಸುಕಿಯಿಂದ ಕೂಡಿ ಕೊಂಡಿರುವ ನನ್ನನ್ನು ಪೂಜಿಸಿರಿ. ಶೀಘ್ರದಲ್ಲಿ ಸಿದ್ಧಿಯನ್ನು ಪಡೆಯಿರಿ ಎಂಬುದಾಗಿ.

ಹೀಗೆ ವಾಸುಕಿ-ಸುಬ್ರಹ್ಮಣ್ಯದೇವರು ಜೊತೆಯಾಗಿ ಅನುಗ್ರಹಿಸುವ ಅಪರೂಪದ ಕ್ಷೇತ್ರವಾಗಿ ಬೆಳೆಯಿತು ಈ ಕುಮಾರಧಾರಾ ಪರ್ವತದ ತಪ್ಪಲು.

**ಕ್ಷೇತ್ರದ ಮಹಿಮೆಗಳು :**

ಈ ಕ್ಷೇತ್ರದ ಸುತ್ತಲೂ ಹರಿಯುತ್ತಿರುವುದು ಪುರಾಣಗಳಲ್ಲಿ 'ಧಾರಾ' ಎಂಬುದಾಗಿಯೇ ಕರೆಯಲ್ಪಡುವ ಕುಮಾರ ಧಾರಾ ನದಿ. ಸಕಲ ಪಾಪಗಳಿಂದಲೂ ವಿಮೋಚನೆ ನೀಡುವ ಪರಮ ಪವಿತ್ರ ನದಿ. ಅದಕ್ಕೆ ಸಂಬಂಧಿಸಿದ ಒಂದು ಇತಿಹಾಸವನ್ನೂ ಪುರಾಣ ತಿಳಿಸುತ್ತಿದೆ.

ಸುಧರ್ಮನೆಂಬ ರಾಜನಿಗೆ ದೇವಲರಿಂದ ಶಾಪ ಬಂದಾಗ ಇದೇ ಕುಮಾರಧಾರಾತೀರ್ಥದ ಸ್ನಾನದಿಂದ ಶಾಪದಿಂದ ಬಿಡುಗಡೆ ಪಡೆದ ಸುಧರ್ಮ ರಾಜನು ಆಗಾಗ ಸುಬ್ರಹ್ಮಣ್ಯಕ್ಕೆ ಬಂದು ಕುಮಾರಧಾರ ನದಿಯಲ್ಲಿ ಸ್ನಾನ ಮಾಡಿ ವಾಸುಕಿ ಹಾಗೂ ಸುಬ್ರಹ್ಮಣ್ಯನನ್ನು ಪೂಜಿಸುತ್ತಿದ್ದನು ಎಂಬುದನ್ನು ಪುರಾಣ ಉಲ್ಲೇಖಿಸುತ್ತದೆ.ಧಾರಾತೀರ್ಥದ ಸ್ನಾನದಿಂದ



ಕುಷ್ಠರೋಗವೂ ಕೂಡಾ ಪರಿಹಾರವಾಗುವುದು ಎಂಬುದನ್ನು ಸಾಂಬನ ಕಥೆಯೊಂದಿಗೆ ಪುರಾಣವು ವಿವರಿಸುತ್ತದೆ.

ಶ್ರೀ ಕೃಷ್ಣನ ಮಗ ಸಾಂಬ. ಮನ್ಮಥನ ಅವತಾರ. ಅವನ ರೂಪ ಲಾವಣ್ಯವನ್ನು ನೋಡಿ ಎಲ್ಲಾ ಸ್ತ್ರೀಯರೂ ಮೋಹಿತರಾಗುತ್ತಿದ್ದರು. ಇಂತಹ ರೂಪವಂತನನ್ನು ಋಷಿಗಳು ಕುಷ್ಠ ರೋಗಿಯಾಗು ಎಂದು ಶಪಿಸಿದರು. ಋಷಿಗಳಿಗೆರಗಿ ಪ್ರಾರ್ಥಿಸಿದಾಗ ಅವರು ಪರಿಹಾರ ಹೇಳಿದರು.

ಧಾರಾತೀರ್ಥೇ ಕೃತಸ್ನಾನಃಪೂಜಯಿತ್ವಾ ಚ ವಾಸು ಕಿಮ್।
ತತ್ಪಸಾದೇನ ಅಪ್ತಾಂಗೋ ಮುಕ್ತಶಾಪೋ ಭವಿಷ್ಯಸಿ॥

ಎಂದಂತೆ ಧಾರಾತೀರ್ಥದ ಸ್ನಾನ ಹಾಗೂ ವಾಸುಕಿಯ ಪೂಜೆಯಿಂದ ಶಾಪದ ನಿವೃತ್ತಿ ಎಂದು ಹೇಳುತ್ತಾರೆ. ಸಾಂಬನು ಒಂದು ಬಾರಿ ದೈವಸಂಕಲ್ಪದಂತೆ, ಧಾರಾನದಿಯನ್ನು ಸಮೀಪಿಸಿ, ಶರೀರವನ್ನು ಧಾರಾತೀರ್ಥದ ನೀರಿನಿಂದ ತೊಳೆಯುತ್ತಾನೆ. ಶರೀರದ ಯಾವ ಯಾವ ಭಾಗವನ್ನು ತೊಳೆಯುತ್ತಾನೋ, ಆ ಭಾಗದ ಕುಷ್ಠರೋಗವು ಪರಿಹಾರವಾಗುತ್ತದೆ. ಆಶ್ಚರ್ಯವಾಗಿ ಅಲ್ಲಿರುವವರನ್ನು ಆ ಕ್ಷೇತ್ರದ ಬಗ್ಗೆ ಕೇಳುತ್ತಾರೆ. ಅವರು ಮಹತ್ವವನ್ನು ಹೇಳಿದಾಗ ಋಷಿಗಳ ಮಾತು ನೆನಪಾಗಿ ವಿಧಿಪ್ರಕಾರ ಸ್ನಾನವನ್ನು ಮಾಡುತ್ತಾನೆ. ವಾಸುಕಿಯನ್ನು ಪೂಜಿಸುತ್ತಾನೆ. ಆಗ ಅಶರೀರವಾಣೀಯಾಗುತ್ತದೆ.

ಸಾಂಬೋಚ್ಛಿಷ್ಟಂ ಸಮಾದಾಯ ಸರ್ವಾಂಗೇ ಲೇಪನಂ  ಕುರು
ತೇನ ಕುಷ್ಠಂ ವ್ರಜೇತ್ಸರ್ವಂ ನಿಶ್ಶೇಷಂ ಚ ನ ಸಂಶಯ ಃ॥

ಹೇ ಸಾಂಬನೇ ಇಲ್ಲಿಯ ಉಚ್ಛಿಷ್ಟವನ್ನು ಶರೀರಕ್ಕೆ ಲೇಪಿಸಿಕೋ, (ಮಡೆಸ್ನಾನವನ್ನು ಮಾಡು) ಅದರಿಂದಾಗಿ ಸಂಪೂರ್ಣವಾಗಿ ಕುಷ್ಠರೋಗದಿಂದ ಪಾರಾಗುವಿ ಎಂದು.

ಇದನ್ನು ಕೇಳಿ. ಹಾಗೆಯೇ ಮಾಡಲಾಗಿ ಸಾಂಬನು ಹಿಂದಿನಂತೆ, ಸರ್ವಾಂಗ ಸುಂದರರಾದ ಮನ್ಮಥನಾಗುತ್ತಾನೆ. ಸಂಪೂರ್ಣ ಶಾಪದಿಂದ ರೋಗದಿಂದ ಮುಕ್ತರಾಗುತ್ತಾನೆ. ಸಂತೋಷದಿಂದ ಕ್ಷೇತ್ರವನ್ನು ವರ್ಣಿಸುತ್ತಾರೆ.





ಸರ್ವತ್ರ ಸರ್ವಕ್ಷೇತ್ರೇಷು ಉಚ್ಚಿಷ್ಠಮಪವಿತ್ರಕಮ್ ।
ಅಹೋ ಕ್ಷೇತ್ರ ಪ್ರಭಾ ವೋಽಯಮುಚ್ಛಿಷ್ಠಮತಿಶುದ್ಧಕಮ್॥

ಎಲ್ಲ ಕಡೆ ಉಚ್ಛಿಷ್ಠವು ಅಪವಿತ್ರವಾದರೆ ಈ ಕ್ಷೇತ್ರದಲ್ಲಿ ಅತ್ಯಂತ ಪವಿತ್ರವಾಗಿದೆ. ಸರ್ವರೋಗಕ್ಕೆ ಔಷಧಿಯಾಗಿದೆ. ಇದು ಅದ್ಭುತವಾದ ಸುಬ್ರಹ್ಮಣ್ಯ ಕ್ಷೇತ್ರದ ಪ್ರಭಾವ, ಮಹಿಮೆ ಎಂದು ಕೊಂಡಾಡಿ. ಕುಮಾರ ಸುಬ್ರಹ್ಮಣ್ಯನನ್ನು ಪೂಜಿಸಿ, ಸ್ತುತಿಸಿ ಅಲ್ಲಿಂದ ಹೊರಟು ಹೋದನು.

ಹೀಗೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಸುಬ್ರಹ್ಮಣ್ಯ -ವಾಸುಕಿಯರ ಆರಾಧನೆ ಎಷ್ಟು ಮುಖ್ಯವೋ ಕುಮಾರಧಾರಾ ನದೀ ಸ್ನಾನ ಹಾಗೂ ದೇವರ ಸನ್ನಿಧಿಯಲ್ಲಿನ ಮಡೆಸ್ನಾನವೂ ಅತಿ ಮಹತ್ವವನ್ನು ಪಡೆದಿದೆ.

ಅದಕ್ಕಾಗಿಯೇ ಸುಬ್ರಹ್ಮಣ್ಯ ಕ್ಷೇತ್ರದ ಮಹಿಮೆ ಹೇಳುವಾಗ ಶ್ರೀವಾದಿರಾಜ ಗುರುಸಾರ್ವಭೌಮರು ಈ ವಿಷಯವನ್ನು ಉಲ್ಲೇಖ ಮಾಡಿದ್ದಾರೆ.

ಸುಬ್ರಹ್ಮಸ್ಯ ಮಹಿಮಾ ವರ್ಣಿತುಂ ಕೇನ ಶಕ್ಯತೇ
ಯತ್ರೋಚ್ಛಿಷ್ಠಮಪಿ ಸ್ಪಷ್ಟಂಶ್ವಿತ್ರಣಃ ಶೋಧಯತ್ಯಹೋ ॥

ಎಂದು ಕುಷ್ಠರೋಗನಿವಾರಣೆ, ಉಚ್ಛಿಷ್ಟ ಮಹತ್ವ ಉಲ್ಲೇಖ ಮಾಡಿದ್ದಾರೆ.

ಇವಿಷ್ಟು ಸ್ಕಂಧಪುರಾಣದಲ್ಲಿ ಸಿಗುವ ಮಾಹಿತಿಗಳು. ಮುಂದೆ ಹಲವಾರು ಜನಾಂಗಕ್ಕೆ ಹಲವು ರೀತಿಯಲ್ಲಿ ವಾಸುಕಿ ಸುಬ್ರಹ್ಮಣ್ಯ ದೇವರು ಅನುಗ್ರಹಿಸಿರುವ ಉಲ್ಲೇಖ ಜನಜನಿತವಾಗಿದೆ. ಪರಿಮಿತ ಪದಗಳಲ್ಲಿ ಅವೆಲ್ಲವನ್ನೂ ತಿಳಿಸುವುದು ಕಷ್ಟ ಎಂಬ ನೆಲೆಯಲ್ಲಿ ಅವೆಲ್ಲವನ್ನೂ ಇಲ್ಲಿ ವಿವರಿಸಲಾಗುತ್ತಿಲ್ಲ.

ಮುಂದೆ ಹನ್ನೆರಡನೆಯ ಶತಮಾನದಲ್ಲಿ ತೌಳವಸೀಮೆಯನ್ನು ಆಳಿದ ಶೇಷಬಲ್ಲಾಳರಾಯನ ಮೊಮ್ಮಗ ಸುಬ್ಬಯ್ಯ ಬಲ್ಲಾಳರಾಯನ ಕಾಲದಲ್ಲಿ ಶ್ರೀಮಧ್ವಾಚಾರ್ಯರಿಂದ ಈಗಿನ ದೇವಸ್ಥಾನವಿರುವ ಜಾಗದಲ್ಲಿ ಸುಬ್ರಹ್ಮಣ್ಯನ ಪ್ರತಿಷ್ಠೆಯಾಯಿತು. ಪಕ್ಕದಲ್ಲೇ ಸರ್ವದುರಿತ ನಿವಾರಕನಾದ ನರಸಿಂಹನೂ ನೆಲೆಗೊಂಡ ಅನಂತರದಲ್ಲಿ ಮಾಧ್ವಕ್ರಮದಲ್ಲಿ ಪೂಜಾ-ವಿಧಿವಿಧಾನ




ಗಳು ನಡೆದುಕೊಂಡು ಬಂದವು  ಎಂಬುದಾಗಿ ಶಾಸನಗಳು ತಿಳಿಸುತ್ತಿವೆ.

ಹೀಗೆ ಭಕ್ತರ ಸಕಲ ದುರಿತಗಳನ್ನೂ ಪರಿಹರಿಸುತ್ತಾ ವಿಶೇಷವಾಗಿ ಆರೋಗ್ಯ, ಮದುವೆ, ಸಂತಾನ, ಸಂಪತ್ತು ಮೊದಲಾದ ಸಕಲ ಅಭೀಷ್ಟೆಗಳನ್ನೂ ಈಡೇರಿಸುತ್ತಾ ನೆಲೆನಿಂತಿರುವ ಬಹು ಅಪರೂಪದ, ಪರಮಕಾರ್ಣಿಕ ಕ್ಷೇತ್ರ - ಕುಕ್ಕೆ ಶ್ರೀಸುಬ್ರಹ್ಮಣ್ಯ.

# एकोनविंशः पाठः

## ಹತ್ತೊಂಬತ್ತನೇ ಪಾಠ

# ಸಂಸ್ಕೃತ ಕಲಿಯೋಣ...!!

ರಚನೆ:- ಮಹಾಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

किम् = ಏನು  नु = ಎ  एतत् = ಇದು  भोः = ಹೇ  करिष्यथ = ಮಾಡಿದರು  कस्य = ಯಾರದು

हे = ಓ  करिष्यामः = ಮಾಡುವಾ  करिष्यामि = ಮಾಡೋಣ.

### ಪ್ರಶ್ನೆ

1. किं तत्?
2. तत् किम्?
3. एतत् कस्य गृहम्?
4. तत् मम गृहम्।
5. तत् जलम्।
6. एतत् युष्मद्गृहम्।
7. ते तटाक जले स्नानं करिष्यन्ति भोः।
8. युष्मद्गृहे घृतं अस्ति वा?
9. नास्ति भोः।
10. ते कदा स्नानं करिष्यन्ति, कदा पाकं करिष्यन्ति?

### ಉತ್ತರ

1. ಅದು ಏನು?
2. ಅದೇನು?
3. ಇದು ಯಾರ ಮನೆ?
4. ಅದು ನನ್ನ ಮನೆ ?
5. ಅದು ನೀರು
6. ಇದು ನಿನ್ನ ಮನೆಯೇ ?
7. ಆ ಸರೋವರದ ನೀರಿನಲ್ಲಿ ಸ್ನಾನವನ್ನು ಮಾಡುತ್ತೀರೋ
8. ನಿಮ್ಮ ಮನೆಯಲ್ಲಿ ತುಪ್ಪವು ಇದೆಯೋ?
9. ಹೇ (ತುಪ್ಪವು) ಇಲ್ಲ
10. ಅವರು ಯಾವಾಗ ಸ್ನಾನ ಮಾಡುತ್ತಾರೆ. ಯಾವಾಗ ಅಡುಗೆಯನ್ನು ಸಿದ್ಧಪಡಿಸುತ್ತಾರೆ?

### ಪ್ರಶ್ನೆ

1. ನಾವು ನಾಳೆಗೆ ಅಡುಗೆಯನ್ನು ಮಾಡುತ್ತೇವೆ.
2. ಅವರು ಕೂಡಾ ಮಾಡುತ್ತಾರೋ
3. ತಾವು ಯಾವಾಗ ಮಾಡಬಹುದು?
4. ನಾವೆಲ್ಲರೂ ಎಂದಿಗೂ ಮಾಡುವುದಿಲ್ಲ
5. ತಾವುಏಕೆ ಮಾಡುವುದಿಲ್ಲ?
6. ನಮ್ಮ ಮನೆಯಲ್ಲಿ ಅನ್ನವು (ಆಹಾರ) ಇದೆ.
7. ಹೇ! ನಮ್ಮ ಬಾಲಕನು ನಿಮ್ಮ ಮನೆಯಲ್ಲಿ ಏನು ಮಾಡುತ್ತಿದ್ದಾನೆ?
8. ಬಹುಶಃ ಸ್ನಾನವನ್ನು ಮಾಡುತ್ತಿದ್ದಾನೆ.
9. ಬೇಗನೆ ಸ್ನಾನವನ್ನು ಮಾಡು.
10. ಅವನು ಬೇಗನೇ ಸ್ನಾನವನ್ನು ಮಾಡದೆ ಹೋದರೆ ನನಗೆ ಏನು ಮಾಡಲು ಆಗುವುದಿಲ್ಲ.

### ಉತ್ತರ

1. वयं श्वः पाकं करिष्यामः।
2. एते अजुना करिष्यन्ति?
3. यूयं कदा करिष्यथ?
4. वयं कदापि नैव करिष्यामः।
5. यूयं किमर्थं न करिष्यथ?
6. अस्माकं गृहे अन्नम् अस्ति।
7. भोः! अस्माकं बालकः युष्माकं गृहे किं करोति!
8. स्नानं करोति प्रायः!
9. वेगेन स्नानं करोतु!
10. भोः सः वेगेन न करोति चेत् अहं किं कर्तुं शक्नोमि?

# ವ್ಯೂಹ ಲಕ್ಷ್ಮೀ ವೈಭವ



– ತೆಲುಗು ಮೂಲ : ಎನ್. ಸಿ. ಎಚ್. ಶ್ರೀ ಲಕ್ಷ್ಮೀ

ಅನುವಾದ : ಶ್ರೀಮತಿ

“ಅಹೋ ವೇಂಕಟ ನಾಯಕಃ ”, ಎಂದು ಭಕ್ತರಿಂದ ಕೊಂಡಾಡಲ್ಪಡುವ ಕೋರಿದ ಇಷ್ಟಾರ್ಥಗಳನ್ನು ಸ್ಫುರಿಸುತ್ತ ಏಳು ಬೆಟ್ಟದ ಒಡೆಯನಾಗಿ ದೀಪಾಂಜಲಿಯನ್ನು ಸ್ವೀಕರಿಸುತ್ತಿರುವ ಶ್ರೀವೇಂಕಟೇಶನ ಹೃದಯ ಪೀಠದಲ್ಲಿ ಪದ್ಮಾಸನಸ್ಥಿತೆಯಾಗಿರುವ ಈ ಲಕ್ಷ್ಮಿಯನ್ನೇ “ವ್ಯೂಹಲಕ್ಷ್ಮಿಯನ್ನಾಗಿ” ಅರ್ಚಿಸುತ್ತಾರೆ. ‘ವ್ಯೂಹ’ ಎಂದರೆ ಊಹಿಸಲ್ಪಟ್ಟವಳು ಅಂದರೆ ಆ ತಾಯಿ ರಹಸ್ಯವಾಗಿ, ನಿಗೂಢ ರೀತಿಯಲ್ಲಿ ಶ್ರೀನಿವಾಸನ ಹೃದಯದಲ್ಲಿ ವಿರಾಜಿಸುತ್ತಾ ಭಕ್ತರೆಲ್ಲರನ್ನೂ ಭಗವಂತನ ಅನುಗ್ರಹಕ್ಕೆ ಪಾತ್ರರನ್ನಾಗಿ ಮಾಡುತ್ತಾಳೆ. ಎಲ್ಲರಿಗೂ ಎಲ್ಲಾ ವೇಳೆಯಲ್ಲೂ ಆ ತಾಯಿಯ ದರ್ಶನ ಲಭಿಸದು. ಆದ್ದರಿಂದಲೇ ರಹಸ್ಯವಾಗಿರುವ ಈ ತಾಯಿ “ವ್ಯೂಹಲಕ್ಷ್ಮಿ” ಯೆಂದು ಕರೆಯಲ್ಪಡುತ್ತಾರೆ.

“ದ್ವಿಭುಜಾ ವ್ಯೂಹಲಕ್ಷ್ಮೀಃ ಸ್ಯಾತ್ ಬದ್ಧ ಪದ್ಮಾಸನ ಪ್ರಿಯಾ !
ಶ್ರೀನಿವಾಸಂಗ ಮಧ್ಯಸ್ಥಾ ಸುತರಾಂ ಕೇಶವ ಪ್ರಿಯಾ!!!

ಈ ಮಾತೆಯು ಶ್ರೀನಿವಾಸನ ಹೃದಯ ಪದ್ಮದಲ್ಲಿ ಶ್ರೀವತ್ಸಂ ಎಂಬ ಗುರುತಿನಲ್ಲಿ ನಿಂತು ದಯ, ಕರುಣ, ಕ್ಷಮೆ ಎಂಬ ಸಹಜವಾದ ದಿವ್ಯ ಗುಣಗಳಿಂದ ಭರಿತಳಾಗಿದ್ದಾಳೆ ಶ್ರೀನಿವಾಸನ ಹೃದಯದಲ್ಲಿ ನೆಲೆನಿಂತು “ವ್ಯೂಹಲಕ್ಷ್ಮಿ” ಅಮ್ಮನವರು ಭಕ್ತರನ್ನು ಸದಾ ದರ್ಶನವನ್ನು ಕೊಡಲು ಸುವರ್ಣ ಮುಖರಿ ನದಿ ತೀರದಲ್ಲಿರುವ ಶ್ರೀಶುಕಪುರದಲ್ಲಿ (ತಿರುಚಾನೂರು) ಅಲುಮೇಲುಮಂಗ, ಸ್ವತಂತ್ರವೀರಲಕ್ಷ್ಮಿಯಾಗಿ ಅವತರಿಸಿ ಭಕ್ತರ ಅಭೀಷ್ಟೆಗಳನ್ನು ತೀರಿಸುವುದೊಂದೇ ಅಲ್ಲದೇ. ತನ್ನ ಸ್ವಾಮಿಯಾದ ಶ್ರೀವೇಂಕಟೇಶನಿಗೆ ಶ್ರವಣಮಾಡಿಸಿ ಆ ಸ್ವಾಮಿಯ ಕರಗಳಿಂದಲೇ ವರಗಳನ್ನು ಕೊಡಿಸುತ್ತಾಳೆ. ಈ ಜಗನ್ಮಾತೆ ಶ್ರೀನಿವಾಸನ ವಕ್ಷಸ್ಥಳದಲ್ಲಿ ಹೆಬ್ಬೆತ್ತರವಾಗಿ ಮುಂದೆ ನೆಲೆಗೊಂಡು ತನ್ನ ಸ್ವಾಮಿಗಿಂತಲೂ ಮೊದಲಾಗಿ ಭಕ್ತರೆಲ್ಲರ ಪ್ರಾರ್ಥನೆಗಳನ್ನು ತಾನೇ ಮೊದಲು ಕೇಳಿಕೊಳ್ಳುತ್ತಾಳೆ. ಈ ಜಗಜ್ಜನನಿ ಲಕ್ಷ್ಮಿಯು ಕೀರ್ತಿ, ಜಯ, ಐಶ್ವರ್ಯವೆಂಬ ಮೂರು ವಿಧವಾದ ವ್ಯೂಹಭೇದಗಳಿಂದ ಕಂಗೊಳಿಸುತ್ತಾಳೆ.

ಸರ್ವಸಂಪತ್ಪ್ರಧಾತ್ರಿಯಾದ ಈ ಮಾತೆಯು ವೇಂಕಟೇಶನ ಶ್ರೇಷ್ಠವಾದ ಹೃದಯಾಳದಲ್ಲಿ ಕಾಂತಿಯುತವಾಗಿ ಕಳೆಕಳೆಯಾಡುತ್ತಾ ನಕ್ಷತ್ರ ಪುಂಜದಂತೆ ತೋರಗೊಡುತ್ತಿರುತ್ತಾಳೆ.

ಭೂಲೋಕ-ವೈಕುಂಠವಾದ ಶ್ರೀವೇಂಕಟೇಶನ ಕ್ಷೇತ್ರದಲ್ಲಿ ವಕ್ಷಸ್ಥಳ ಮಹಾಲಕ್ಷ್ಮಿಯೊಂದಿಗೆ ಶ್ರೀನಿವಾಸ ಭಗವಂತನು ಅರ್ಚಾಮೂರ್ತಿಯಾಗಿ ಅವತರಿಸುವುದಕ್ಕೂ ಮೊದಲು ಹಲವು ವರ್ಷ ಮುಂಚಿತವಾಗಿಯೇ ಈ ಕ್ಷೇತ್ರವು ಆದಿ ವರಾಹ ಕ್ಷೇತ್ರವಾಗಿ ಆವಿರ್ಭವಿಸಿದೆ. ಈ ಪವಿತ್ರ ಸ್ಥಳದಲ್ಲಿ ಶ್ರೀಮಹಾವಿಷ್ಣು ಭಯಾಂಕರವಾದ ‘ಶ್ವೇತವರಾಹ ಕ್ಷೇತ್ರ ’ ಎಂಬ ವರಾಹ ಸ್ವಾಮಿಯು ವಾಮಾಂಕರಾಗಿ ಭೂದೇವಿಯನ್ನು ಧರಿಸಿದ್ದವನಾದುದರಿಂದ “ಭೂವರಾಹ ಕ್ಷೇತ್ರ” ಎಂದು ವಿವಿಧ ನಾಮಗಳಿಂದ ಈ ಕ್ಷೇತ್ರವು ಪ್ರಸಿದ್ಧಿ ಪಡೆದಿದೆ.

ಆ ನಂತರ ಹಲವು ಸಂವತ್ಸರಗಳ ಬಳಿಕ ಮತ್ತೆ ವೈಕುಂಠದಿಂದ ಶ್ರೀವೆಂಕಟೇಶ್ವರನೆಂಬ ಹೆಸರಿನಿಂದ ವಕ್ಷಸ್ಥಳದಲ್ಲಿ ವ್ಯೂಹಲಕ್ಷ್ಮಿಯನ್ನು ಧರಿಸಿ ಶ್ರೀ ಅರ್ಚಾಮೂರ್ತಿಯಾಗಿ ಈ ಆದಿವರಾಹ ಕ್ಷೇತ್ರದಲ್ಲಿ ನೆಲೆಸಿರಲು ಸಾಕ್ಷಾತ್

ಶ್ರೀಮಹಾಲಕ್ಷ್ಮಿ ಸನ್ನಿಹಿತಳಾಗಿದ್ದಾಳೆ. ಅಂದಿನಿಂದ ಈ ಸ್ಥಳವು ವೇಂಕಟಾಚಲ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ. ಆ ನಂತರ ಶ್ರೀವೇಂಕಟೇಶನ ಪ್ರಾರ್ಥನೆ ಮೇರೆಗೆ ಶ್ರೀಮಹಾಲಕ್ಷ್ಮೀ ಸ್ವತಃ ಶ್ರೀಶುಕಪುರ (ತಿರುಚಾನೂರು)ದಲ್ಲಿ ಪದ್ಮ ಸರೋವರದಲ್ಲಿ ಅಲುಮೇಲುಮಂಗಳಾಗಿ ಅವತರಿಸಿ "ಸ್ವತಂತ್ರ ವೀರಲಕ್ಷ್ಮಿ" ಯಾಗಿ ಅರ್ಚಾಮೂರ್ತಿಯಾಗಿ ವೇಂಕಟಾಚಲ ಕ್ಷೇತ್ರದಲ್ಲಿ ಶ್ರೀನಿವಾಸನ ವಕ್ಷಸ್ಥಳದಲ್ಲಿ "ವ್ಯೂಹಲಕ್ಷ್ಮಿ" ಯಾಗಿ ನೆಲೆನಿಂತು ಅರ್ಚನೆಗಳನ್ನು ಸ್ವೀಕರಿಸುತ್ತಾ ಭಕ್ತರಿಂದ ಆರಾಧಿಸಲ್ಪಡುತ್ತಿದ್ದಾಳೆ.



**ಅನಂತಾಳ್ವಾರರ ಕುವರಿಯಾಗಿ ವ್ಯೂಹಲಕ್ಷ್ಮಿ:**

ಭಗವದ್ರಾಮಾನುಜರ ಸ್ವಯಿಚ್ಛೆ ಶಿಷ್ಯನಾಗಿ ಶ್ರೀ ಅನಂತಳ್ವಾರರು ಶ್ರೀನಿವಾಸನ ಪುಷ್ಪ ಕೈಂಕಯಕ್ಕಾಗಿ ನಿರಂತರ ಶ್ರಮಿಸಿ, ಅದ್ಭುತವಾದ ಹೂದೋಟವನ್ನು ಬೆಳಸಿ ಸ್ವಾಮಿಗೆ ಜರುಗುವ ತೋಮಾಲೆ ಸೇವೆಗೆ ಸುಂದರವಾಗಿ ಪೋಣಿಸಿದ ಹೂಮಾಲೆಗಳನ್ನು ಧರಿಸಿ, ಆನಂದಿಸಿ ಸ್ವಾಮಿ ಆಳ್ವಾರರನ್ನು ಪರೀಕ್ಷಿಸಲೆಂದು ಏಕಾಂತಸೇವಾ ನಂತರದ ವಕ್ಷಸ್ಥಳದ ಮೇಲೆ ಅಲುಮೇಲುಮಂಗಳ ಸಮೇತನಾಗಿ ಅನಂತಾಳ್ವಾರರ ತೋಟದಲ್ಲಿ ಪ್ರತ್ಯಕ್ಷನಾಗಿದ್ದಾನೆ. ಆ ತೋಟದ ದಿವ್ಯ ಸೌಂದರ್ಯಕ್ಕೆ ಪರವಶನಾಗಿ ವಿಹರಿಸಿ ಹಲವು ಹೂಗಳನ್ನು ಧರಿಸಿದ ಹಲವನ್ನು ಅಸ್ವಾದಿಸಿ, ಇಬ್ಬರೂ ತೋಟದಲ್ಲೆಲ್ಲಾ ಕೂಡಿ ತಿರುಗುತ್ತಾ ಇಂಚು ಬಿಡದೆ ನಾಶಮಾಡಿ ಸುಪ್ರಭಾತ ಸಮಯಕ್ಕೆ ದೇವಾಲಯವನ್ನು ಸೇರಿಕೊಂಡಿದ್ದಾರೆ. ಮರುದಿನ ಉದಯದಲ್ಲಿ ತನ್ನ ತೋಟವೆಲ್ಲಾ ಚಿಂದಿ ಚಿಂದಿಯಾಗಿರುವುದನ್ನು ಕಂಡು ಸಾಕಷ್ಟು ದುಃಖಪಟ್ಟಿದ್ದಾರೆ ಅನಂತಾಳ್ವಾರರು. ಹೀಗೆ ನಿತ್ಯವೂ ಯಾರೋ ಬಂದು ತಮ್ಮ ಹೂದೋಟವನ್ನು ಹಾಳು ಮಾಡುತ್ತಿರುವುದನ್ನು ಕಂಡು ಆಳ್ವಾರರು ಕಾವಲು ಕಾಯಲು ಮೊದಲಿಟ್ಟಿದ್ದಾರೆ. ಒಂಭತ್ತನೆ ದಿನ ಅರ್ಧರಾತ್ರಿ ವೇಳೆಯಲ್ಲಿ ಯಾರೋ ಪಿಸು ಮಾತನ್ನು ಆಡುವುದು ಕಂಡು ಆವೇಶವನ್ನು ತಡೆಯಲಾಗದೆ ಬೆನ್ನತ್ತಿ ಹೋಗಿದ್ದಾರೆ. ಅವರಿಬ್ಬರಲ್ಲಿ ಒಬ್ಬರು ದೊರಕಿ,ಮತ್ತೊಬ್ಬ ಪುರುಷನು ತಪ್ಪಿಸಿಕೊಳ್ಳಲು ಸಿಕ್ಕ ಸ್ತ್ರೀಯನ್ನು ಒಂದು ಸಂಪಿಗೆ ಮರಕ್ಕೆ ಕಟ್ಟಿ ಹಾಕಿ ಆಕೆಯನ್ನು ಬೆದರಿಸಲು, ಅದಕ್ಕವಳು "ತಂದೆಯೇ ನಾನು ನಿನ್ನ ಮಗಳಂಥವಳು ನನ್ನನ್ನು ಬಿಟ್ಟು ಬಿಡು. ನಾನು ಹೊರಟು ಹೋಗುತ್ತೇನೆ ತಂದೆ" ಎಷ್ಟು ಗೋಗರೆದರೂ ಕೇಳಿಸಿಕೊಳ್ಳದೇ, ಹೊರಗೆ ಓಟಕಿತ್ತಿದ್ದ ಪುರುಷನನ್ನು ಹಿಡಿಯಲು ಹೋಗಲು ಆತನು ದೇವಾಲಯದ ಪ್ರದಕ್ಷಿಣೆ ಮಾರ್ಗದಲ್ಲಿ ಅಪ್ರದಕ್ಷಿಣೆಕಾರವಾಗಿ ಓಡಿ ಹೋಗಿ ಅನಂತಾಳ್ವಾರರ ತೋಟದಲ್ಲಿ ಮಾಯವಾಗಿದ್ದಾರೆ. ಏನು ಮಾಡಲಾಗದೇ ಆ ಸ್ತ್ರೀಯನ್ನು ಕಟ್ಟಿ ಹಾಕಿದ ಸಂಪಿಗೆ ಮರದ ಬಳಿ ಬಂದು ನಿಂತಿದ್ದಾನೆ. ಮರುದಿನ ಶ್ರೀನಿವಾಸನ ವಕ್ಷಸ್ಥಳದಲ್ಲಿ ವ್ಯೂಹಲಕ್ಷ್ಮಿ ಕಾಣದೇ ಹೋಗಲು ಕಳವಳಗೊಂಡು ಅರ್ಚಕ ವೃಂದವು, ಅವರಿಗೆ ಸ್ವಾಮಿಯು ವ್ಯೂಹಲಕ್ಷ್ಮಿಯು ಅನಂತಾಳ್ವಾರರ ತೋಟದಲ್ಲಿರುವುದಾಗಿ, ಆಕೆಯನ್ನು ಹೂವಿನ ಬಟ್ಟೆಯಲ್ಲಿ ಮದುಮಗಳ ತರಹ ಹಿಂದಕ್ಕೆ ಕರತರಬೇಕೆಂದೂ, ವ್ಯೂಹಲಕ್ಷ್ಮಿಯ ತಂದೆ ಸ್ಥಾನದಲ್ಲಿ ನಿಂತು ಆಳ್ವಾರರು ಆಕೆಯನ್ನು ತನಗೆ ಧಾರೆಯೆರೆದು ಕೊಡಬೇಕೆಂದು ಆದೇಶಿಸಿದ್ದಾರೆ. ಇದನ್ನು ತಿಳಿದುಕೊಂಡು ಹೋಗಿ ಸ್ವಾಮಿಗೆ ಒಪ್ಪಿಸಿದ್ದಾರೆ. ಅದಕ್ಕೆ ಶ್ರೀನಿವಾಸನು 'ಮಾವನೇ! ನನಗೆ ವ್ಯೂಹಲಕ್ಷ್ಮೀಯನ್ನು ಸಮರ್ಪಿಸಿದ ಕನ್ಯಾದಾತನಾಗಿರುವೆ. ನಿನ್ನ ಚರಿತೆ ಅಚಂದ್ರಾರ್ಕದವರೆಗೆ ನಿಲ್ಲಲಿಯೆಂದು ವರವೀಯುತ್ತೇನೆ" ಈ ರೀತಿಯಾಗಿ ಆ ಲೋಕಮಾತೆ ಆನಂತಾಳ್ವಾರರಿಗೆ ಕುವರಿಯಾಗಿದ್ದಾಳೆ.

ಶ್ರೀನಿವಾಸನಿಂದ ವಿಯೋಗವನ್ನು ಭರಿಸದೇ ಪದ್ಮಾವತಿ ದುಃಖಿಸಲು ಅದಕ್ಕೆ ವೇಂಕಟೇಶನು ಆಕೆಯನ್ನು ರಮಿಸುತ್ತಾ ನೀನು ನನ್ನ ಹೃದಯದಲ್ಲಿರುವ ವ್ಯೂಹಲಕ್ಷ್ಮಿಯಲ್ಲಿ ಸನ್ನಿಹಿತಳಾಗು ಅವತಾರ ಲಕ್ಷಣಗಳಿಂದ ಭಿನ್ನವಾಗಿ ಕಂಡರೂ ನೀವಿಬ್ಬರೂ ಅಭಿನ್ನರೆಂದು ತಿಳಿಸು ಆಕಾಶರಾಜನ ಕುಮಾರಿಯಾಗಿ ಪದ್ಮಾವತಿ ಶ್ರೀನಿವಾಸನ ವಕ್ಷಸ್ಥಳದ ಮೇಲೆ ವ್ಯೂಹಲಕ್ಷ್ಮಿಯಿಂದ ಸನ್ನಿಹಿತಳಾಗಿ ಭೂತ ಕಾರುಣ್ಯ ಲಕ್ಷ್ಮಿಯಾಗಿ ಲೋಕ ಕಲ್ಯಾಣ ಕಾರಕವಾದ ಮಹಾಕಾರ್ಯಗಳಲ್ಲಿ ತಾನೂ ಸಹ ಪಾಲ್ಗೊಂಡ ಭಕ್ತರ ಮೇಲೆ ಇನ್ನಿಲ್ಲದ ವಾತ್ಸಲ್ಯಾದಿ ಗುಣಗಳಿಂದ ಪ್ರಕಾಶಿಸುತ್ತಾ ದರ್ಶನವೀಯುತ್ತಾಳೆ. ಪ್ರೇಮ ಸ್ವರೂಪಿಣಿಯಾದ ಶ್ರೀಮಹಾಲಕ್ಷ್ಮಿ ವೇಂಕಟಾಚಲ ಕ್ಷೇತ್ರದಲ್ಲಿ ತಿರುಮಲೇಶನ ಹೃದಯ ಕಮಲದಲ್ಲಿ ವ್ಯೂಹಲಕ್ಷ್ಮಿಯಾಗಿಯೂ, ತಿರುಚಾನೂರಿನಲ್ಲಿ ಅರ್ಚಾಮೂರ್ತಿಯಾಗಿ ಶ್ರೀಪದ್ಮಾವತಿ ದೇವಿಯಾಗಿಯೂ,ಅಲಮೇಲುಮಂಗಳಾಗಿ ಭಕ್ತರೆಲ್ಲರ ಕೈಯಲ್ಲಿ ಅರ್ಚನೆಗಳನ್ನು ಮಾಡಿಸಿಕೊಳ್ಳುತ್ತಾ ಆರಾಧಿಸಲ್ಪಡುತ್ತಿದ್ದಾಳೆ.

ತಿರುಮಲ ತಿರುಪತಿ ದೇವಸ್ಥಾನಗಳು



# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

## 2022 ನವೆಂಬರ್ 20 ರಿಂದ 28 ರ ವರೆಗೆ

**20-11-2022 ಭಾನುವಾರ**
ಹಗಲು : ತಿರುಚ್ಚಿ ಉತ್ಸವ , ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

**21-11-2022 ಸೋಮವಾರ**
ಹಗಲು : ದೊಡ್ಡಶೇಷವಾಹನ
ರಾತ್ರಿ : ಹಂಸವಾಹನ

**22-11-2022 ಮಂಗಳವಾರ**
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹ ವಾಹನ

**23-11-2022 ಬುಧವಾರ**
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**24-11-2022 ಗುರುವಾರ**
ಹಗಲು : ಪಲ್ಲಕಿ ಉತ್ಸವ, ಸಾ॥ ವಸಂತೋತ್ಸವ
ರಾತ್ರಿ : ಗಜವಾಹನ

**25-11-2022 ಶುಕ್ರವಾರ**
ಹಗಲು : ಸರ್ವಭೂಪಾಲವಾಹನ
ರಾತ್ರಿ : ಗರುಡವಾಹನ

**26-11-2022 ಶನಿವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**27-11-2022 ಭಾನುವಾರ**
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

**28-11-2022 ಸೋಮವಾರ**
ಹಗಲು : ಪಲ್ಲಕಿಯಲ್ಲಿ ತಿರುಚ್ಚಿ ಉತ್ಸವ
ತೀರ್ಥವಾರಿ ಅವಭೃಥೋತ್ಸವ, ಚಕ್ರಸ್ನಾನ
ಪಂಚಮೀ ತೀರ್ಥ
ರಾತ್ರಿ : ತಿರುಚ್ಚಿ ಉತ್ಸವ ಧ್ವಜಾವರೋಹಣ



# ನೀತಿ ಕಥೆ

# ಸ್ವರ್ಗಪ್ರಾಪ್ತಿ ಪುಣ್ಯ ಸಂಚಯದಿಂದ

- ಡಾ|| ಪ್ರದೀಪ್ ಕುಮಾರ್ ಹೆಬ್ರಿ
9844018457

ತುಂಬ ಹಿಂದೆ ಇಂದುಶೇಖರ ಎಂಬ ಮಹಾರಾಜನಿದ್ದ. ಆತ ಶ್ರೀಹರಿಯ ಪರಮಭಕ್ತ. ನಿರಂತರ ಹರಿನಾಮ ಸ್ಮರಣೆ ಮಾಡುತ್ತಿದ್ದ. ಪ್ರಜೆಗಳ ಒಳಿತಿಗೆ ಸದಾ ದುಡಿಯುತ್ತಿದ್ದ. ಇಹ ಬದುಕಿನಲ್ಲಿ ಆತ ಮಾಡಿದ ಪುಣ್ಯ ಕಾರ್ಯಗಳ ಪ್ರಭಾವದಿಂದ ಸ್ವರ್ಗಫಲವನ್ನು ಹೊಂದಿದ. ಬಹುಕಾಲ ಸ್ವರ್ಗದಲ್ಲಿದ್ದ. ದಿನ ಕಳೆದಂತೆ ಆತನ ಪುಣ್ಯದ ಲೆಕ್ಕ ಕಡಿಮೆಯಾಗುತ್ತ ಬಂತು . ಆಗ ಆತನಲ್ಲಿಗೆ ದೇವತೆಗಳು ಬಂದರು. ಆತನಲ್ಲಿ "ಇನ್ನೂ ಸ್ವರ್ಗದಲ್ಲೇ ಇರಲು ಬೇಕಾಗಿರುವಷ್ಟು ಪುಣ್ಯ ಸಂಚಯ ನಿಮ್ಮಲ್ಲೀಗ ಉಳಿದಿಲ್ಲ. ಇದ್ದದ್ದು ಖಾಲಿಯಾಗಿದೆ," ಎಂದು ಅವನನ್ನು ಭೂಮಿಗೆ ಕಳಿಸಿದರು.

ಇಂದುಶೇಖರ ಭೂಮಿಗೆ ಬಂದು ಬಿದ್ದ. ಚೇತರಿಸಿಕೊಂಡಾಗ ಆತನಿಗೆ ತಾನು ಹಿಂದೆ ರಾಜನಾಗಿದ್ದ ನೆನಪು ಯಾರಿಗಾದರೂ ಇದೆಯೇ ಎಂದು ತಿಳಿಯುವ ಆಸೆಯಾಯಿತು. ನಿಧಾನವಾಗಿ ಮುಂದೆ ನಡೆಯತೊಡಗಿದ. ಆತನಿಗಾಗ ಬೃಹತ್ ವೃಕ್ಷವೊಂದು ಕಾಣಿಸಿತು. ಅದರ ಮೇಲೆ ಕುಳಿತಿದ್ದ ಮುದಿಗೂಬೆಯೊಂದನ್ನು ಕಂಡ. ಅದರಲ್ಲಿ ವಿಚಾರಿಸಿದ. ಆ ಗೂಬೆಯು ನಾನು ತುಂಬಾ ವರ್ಷಗಳಿಂದ ಇಲ್ಲಿಯೇ ವಾಸವಾಗಿದ್ದೇನೆ. ಆದರೆ ನಾನು ನಿನ್ನ ಹೆಸರನ್ನು ಕೇಳಿಲ್ಲ. ಇಲ್ಲೇ ಸಮೀಪದಲ್ಲಿ ಒಂದು ಸರೋವರವಿದೆ. ಆದರೆ ಬಳಿ ಬಕಪಕ್ಷಿಯೊಂದು ಇದೆ. ಅದು ವಯಸ್ಸಿನಲ್ಲಿ ನನಗಿಂತ ತುಂಬಾ ಹಿರಿಯ. ಅದಕ್ಕೆ ಗೊತ್ತಿರಬಹುದು. ಹೋಗಿ ಅದರೊಡನೆ ಕೇಳೋಣ. ನಾನೂ ನಿನ್ನ ಜೊತೆ ಬರುವೆನೆಂದು ರಾಜನನ್ನು ಕರೆದುಕೊಂಡು ಹೋಯಿತು.


ಬಕಪಕ್ಷಿಯಿದ್ದಲ್ಲಿ ಹೋದ ನಂತರ ರಾಜ ಅದರಲ್ಲಿ ವಿಚಾರಿಸಿದ. ಬಕಪಕ್ಷಿಯೂ, "ನನಗೆ ನಿಮ್ಮ ಹೆಸರು ಕೇಳಿದ ನೆನಪಿಲ್ಲ. ಆದರೆ ಈ ಸರೋವರದಲ್ಲಿ ತುಂಬಾ ವಯಸ್ಸಾದ ಆಮೆಯೊಂದಿದೆ. ಅದನ್ನು ವಿಚಾರಿಸೋಣ" ಎಂದು ಆಮೆಯ ಬಳಿ ಕರೆದುಕೊಂಡು ಹೋಯಿತು. ಆಮೆಯನ್ನು ಕರೆಯಿತು. ಇಂದುಶೇಖರ ಆ ಆಮೆಯಲ್ಲಿ ತನ್ನ ಹೆಸರನ್ನು ಹೇಳಿದಾಕ್ಷಣ ಆಮೆಯ ಕಂಗಳಲ್ಲಿ ಆನಂದಭಾಷ್ಪ ಅದು, ನಿಮ್ಮನ್ನು ಯಾರಾದರೂ ಮರೆಯಲು ಸಾಧ್ಯವೇ? ಮರೆಯಲೇ ಆಗದಂತಹ ಒಳಿತಿನ ಕೆಲಸಗಳನ್ನೇ ನೀವು ಮಾಡಿರುವಿರಿ. ನಿಮ್ಮನ್ನು ಮರೆತರೆ ನಮಗೆ ಒಳ್ಳೆಯ ದಾಗುತ್ತದೆಯೇ ? ರಾಜಾ, ಸಹಸ್ರಸಹಸ್ರಮಾನಗಳಿಂದ ನಾನು ವಾಸಿಸುತ್ತಿರುವ ಈ ಕೊಳವನ್ನು ಕಟ್ಟಿಸಿದವ ನೀನು. ನಾನು ಮಾತ್ರವಲ್ಲ, ಇಲ್ಲಿ ವಾಸಿಸುತ್ತಿರುವ ಜಲಚರಗಳಿಗೆ, ಸುತ್ತಲೂ ಬೆಳೆದಿರುವ ಗಿಡಮರಗಳಿಗೆ ಈ ಕೊಳ ಆಶ್ರಯ ನೀಡಿದೆ. ಈ ಮರಗಳು ಬಿಡುವ ಹಣ್ಣು ಹಂಪಲು, ಕಾಯಿ, ಚಿಗುರೆಲೆಗಳನ್ನು ತಿಂದು ಪ್ರಾಣಿಪಕ್ಷಿಗಳಿನ್ನೂ ಸುಖದಿಂದ ಬದುಕುತ್ತಿವೆ ನಮ್ಮೆಲ್ಲರ ಆನಂದಕ್ಕೆ ಕಾರಣಕರ್ತನೇ ನೀನು ಎಂದಿತು.


ಆಮೆಯ ಮಾತು ಕೇಳಿ ರಾಜನ ಕಂಗಳಲ್ಲಿ ಆನಂದಭಾಷ್ಪ ಜಿನುಗಿತು. ಆಗಲೇ ಆಕಾಶದಿಂದಿಳಿದ ದಿವ್ಯವಾದ ವಿಮಾನದಲ್ಲಿದ್ದ ದೇವದೂತರಿಬ್ಬರು ರಾಜನೆಡೆ ಬಂದರು. "ರಾಜಾ ನಿನ್ನ ಪುಣ್ಯ ಸಂಚಯದ ವಿಷಯದಲ್ಲಿ ನಮ್ಮ ಲೆಕ್ಕಾಚಾರ ತಪ್ಪಾಗಿದೆ. ನಿನ್ನ ಪುಣ್ಯ ಇನ್ನೂ ಕ್ಷಯಿಸಿಲ್ಲ" ಎಂದು ರಾಜನನ್ನು ತಮ್ಮ ಜೊತೆಗೆ ಸ್ವರ್ಗಕ್ಕೆ ಕರೆದುಕೊಂಡು ಹೋದರು.

**ನೀತಿ : ಜನರಿಗೆ ನಾವು ಮಾಡಿದ ಸಹಾಯದ ನೆನಪು ಇರುವವರೆಗೂ ನಮ್ಮ ಪುಣ್ಯದ ಖಾತೆ ಅಕ್ಷಯವಾಗಿರುತ್ತದೆ.**

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ಮೋಡ, ಬೆಟ್ಟ, ಪಕ್ಷಿ, ಬಾಳೆಮರ, ಗೋಡೆ, ಹುಲಿ ಚರ್ಮದ ಹಾಸಿಗೆ, ಹೋಮದ ಕಡ್ಡಿಗಳು.

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | |
|---|---|---|---|---|
| ಅಂ | ಹು | ಗೆ | ನ್ನ | ಯಾ |
| ಕ | ಗೈ | ಣ್ಣಿ | ಕೆ | ಡಿ |

ಉತ್ತರಗಳು:
ಅಂಗೈ ಹುಣ್ಣಿಗೆ ಕನ್ನಡಿ ಯಾಕೆ

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

4



## ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾದಾರ ರಾಗಿರ ಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.11.2022
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಪ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದ
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡ ಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್



## ರಸಪ್ರಶ್ನೆಗಳು

## ಉತ್ತರಗಳು

1) ಜಗನ್ಮಾತೆಯು ಉದ್ಭವಿಸಿದ ದಿನ ಯಾವುದು? ..........
2) ಅವ್ಯಕ್ತ ಎಂಬ ಹೆಸರುಳ್ಳ ದೇವತೆ ಯಾರು? ..........
3. ಯಾವ ತುಪ್ಪದಲ್ಲಿ ಸೂರ್ಯನ ಶಕ್ತಿ ಹೆಚ್ಚಾಗಿರುತ್ತದೆ.? ..........
4) ವಿಷ್ಣುವಿನ ವಕ್ಷಸ್ಥಳಕ್ಕೆ ಒದ್ದದ್ದು ಯಾರು? ..........
5)ಈ ವ್ರತವನ್ನು ಎಂದು ಪ್ರಾರಂಭಿಸಿ ಎಂದು ಕೊನೆಗೊಳಿಸಬೇಕು? ..........
6) ಬಾಗೂರಿನಲ್ಲಿ ಯಾವ ಯಾವ ದೇವಾಲಯಗಳಿವೆ? ..........
7) ಅಮ್ಮನವರಿಗೆ ಪ್ರಾತಃಕಾಲ ನಡೆಯುವ ಸೇವೆ ಯಾವುದು? ..........
8) ಕಾವೇರಿ ತೀರದಲ್ಲಿ ಯಾವ ಬ್ರಾಹ್ಮಣ ಇದ್ದನು? ..........
9) ಶೋಭಾನ ಭಟ್ಟರಿಗಿದ್ದ ನಾಮಾಂಕಿತ ಯಾವುದು? ..........
10)ಓರೆ ವೆಂಕಟೇಶ್ವರ ಸ್ವಾಮಿ ದೇವಾಲಯ ಎಲ್ಲಿದೆ ? ..........
11) ಭೂವೈಕುಂಠವೆಂದು ಹೆಸರಾದ ಸ್ಥಳ ಯಾವುದು? ..........
12) ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನಲ್ಲಿರುವ ದೇವಾಲಯ ಯಾವುದು? ..........
13) ವ್ಯೂಹಲಕ್ಷ್ಮಿ ಎಂದು ಯಾರನ್ನು ಕರೆಯುತ್ತಾರೆ? ..........
14) ಬಕಪಕ್ಷಿಯು ಇಂದುಶೇಖರನನ್ನು ಯಾರ ಬಳಿ ಕರೆದುಕೊಂಡು ಹೋಯಿತು? ..........
15) ಚಪ್ಪಲಿ ತೆಗೆದು ನೋಡು ಎಂದು ಯಾರು ಹೇಳಿದರು? ..........

| | |
|---|---|
| ಹೆಸರು : .......... | ವಿಳಾಸ : |
| ಚಂದಾ ಸಂಖ್ಯೆ: | |
| ತಂದೆಯ ಹೆಸರು : | |
| ತಾಯಿಯ ಹೆಸರು : | ದೂರವಾಣಿ ಸಂಖ್ಯೆ: |



# ಸ್ತೋತ್ರವನ್ನು ಕಲಿಯೋಣ


## ಭಾವಾರ್ಥ ಸಹಿತ ಶ್ರೀಭಾರತೀಶ
## ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ



ಶ್ರೀಮದ್ವರಾಜ ಪರಿಸೇವಕ ಮೋಕ್ಷದಾಯಿನ್
ಶ್ರೀವಿಷ್ಣುದಾಸ ಪರಿರೂಪಕ ಬಾಧಕಾರೀನ್ !
ವಾಯೋಮದಿಷ್ಟ ಪಿತೃ ಮಾತೃ ಸಹೋದರಾದೇಃ
ಶ್ರೀ ಭಾರತೀಶ ಮಮ ದೇಹಿ ಕರಾವಲಂಬಮ್ ॥5॥

ಶ್ರೀ ಮಧ್ವರ ಆರಾಧ್ಯದೈವ, ಮೋಕ್ಷದಾತರಾದ ವಿಷ್ಣುರೂಪಿ ವೇದವ್ಯಾಸರ ಪಾದಸೇವಕರಾದ, ದೈತ್ಯರು ಹಾಗೂ ವಿಷ್ಣು ವೈರಿಗಳಿಗೆ ಬಾಧಕರಾದ ವಾಯುದೇವರೇ ನನ್ನ ಇಷ್ಟ ಬಂಧುಗಳಾದ ಪಿತೃ, ಮಾತೃ, ಸಹೋದರಾದಿಗಳಿಗೂ ಇಷ್ಟಪ್ರದರಾದ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.






ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು


ಲಕ್ಷ್ಮಿ, ಸುಬ್ರಮಣ್ಯಸ್ವಾಮಿ, ಅಷ್ಟಲಕ್ಷ್ಮಿ, ಕಾರ್ತೀಕಮಾಸ ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

ಚಿತ್ರಕಥೆ

# ಅಲಮೇಲುಮಂಗ ಅನುಗ್ರಹ

ಕಥೆ : ತೆಲುಗು ಮೂಲ : ಡಾ|| ಜಿ. ಅನಿಲ್‌ಕುಮಾರ್
ಅನುವಾದ : ಆರ್.ಕೆ.
ಚಿತ್ರಗಳು : ದ್ವಾರಕನಾಥ್





ಅನ್ನಮಯ್ಯ! ಎದ್ದೇಳು ಕಂದಾ (ಒಂದು ಕರೆ ಕೇಳಿಸಿತು)
ಅನ್ನಮಯ್ಯ
ಅಮ್ಮಾ ! ನೀವು ಯಾರು? ನನಗ್ಯಾರು ಕಾಣಿಸುತ್ತಿಲ್ಲ
ನಾನು ಅಲಮೇಲುಮಂಗಮ್ಮ ! ನಿನ್ನ ಕಾಲಿನಲ್ಲಿರುವ ಚಪ್ಪಲಿ ತೆಗೆದು ನೋಡು... ಎಲ್ಲಾ ಕಾಣಿಸುತ್ತದೆ.
ಅನ್ನಮಯ್ಯ ! ಹಸಿವಾಗುತ್ತಿದೆಯಾ ! ಇದೋ ಸ್ವಾಮಿಯವರ ಪ್ರಸಾದ ಎನ್ನುತ್ತಾ ಮೊಸರನ್ನ, ಪುಳಿಯೋಗರೆ, ಪೊಂಗಲ್ ಅನ್ನು ತಿನಿಸಿದಳು.
ಅಲಮೇಲುಮಂಗ
ತಕ್ಷಣ ಅನ್ನಮಯ್ಯನಿಗೆ ಶಕ್ತಿ ಬಂದಿತು. ಉತ್ಸಾಹ, ಕವಿತ್ವದೊಂದಿಗೆ ಕೂಡಲೇ ಅಲಮೇಲುಮಂಗಮ್ಮನನ್ನು ಸ್ತುತಿಸುತ್ತಾ ಪದ್ಯಶತಕವನ್ನು ಪಠಿಸಿದರು. ಆ ತಾಯಿ ಸಂತೋಷದಿಂದ ಆಶೀರ್ವದಿಸಿ ಅದೃಶ್ಯವಾದರು.
"ಅದಿವೋ! ಅಲ್ಲದಿವೋ! ಹರಿವಾಸಮು" ಎನ್ನುತ್ತಾ ಗಾನ ಮಾಡುತ್ತಾ ತಿರುಮಲೆ ಬೆಟ್ಟವನ್ನು ಹತ್ತಿದರು.
ಶುಭಂ

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ)

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್ ನಂಬರ್: 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

# ತಿರುಮಲೆ ತಿರುಪತಿ ದೇವಸ್ಥಾನಗಳು

**ತಿರುಮಲೆ ಸ್ವಾಮಿಯವರಿಗೆ 27-09-2022 ರಿಂದ 05-10-2022 ರ ವರೆಗೆ ನಡೆದ ಬ್ರಹ್ಮೋತ್ಸವದ ದೃಶ್ಯಮಾಲಿಕೆ. ಈ ಉತ್ಸವದ ಆರಂಭಕ್ಕಾಗಿ ಆಂಧ್ರಪ್ರದೇಶದ ರಾಜ್ಯದ ವತಿಯಿಂದ ಸ್ವಾಮಿಯವರಿಗೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಗೌ॥ ಶ್ರೀ ವೈ.ಎಸ್.ಜಗನ್‌ಮೋಹನ್ ರೆಡ್ಡಿಯವರು, ನಂತರ 2023 ರ ನೂತನ ವರ್ಷದ ಕ್ಯಾಲೆಂಡರ್‌ಗಳನ್ನು ಆವಿಷ್ಕರಿಸಿದರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ. ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ. ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿಗಳು ಶ್ರೀ . ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಮತ್ತು ಶ್ರೀಮತಿ. ಎಸ್. ಭಾರ್ಗವಿ, ಐ.ಎ.ಎಸ್., ಮತ್ತು ಇನ್ನಿತರ ಉನ್ನತಾಧಿಕಾರಿಗಳು ಪಾಲ್ಗೊಂಡರು.**










SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-10-2022 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month

